ಗುರುವಾರ, ನವೆಂಬರ್ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 303 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,906 ▼	18,083 ▼	₹52,169 (ಬೆಂಗಳೂರು) ▲	₹60,100 (ಬೆಂಗಳೂರು) ▲	82.80 ▼

ಜಾಗತಿಕ ಹೂಡಿಕೆದಾರರ ಸಮಾವೇಶ • ಮೊದಲ ದಿನವೇ ಗುರಿ ದಾಟಿದ ಬಂಡವಾಳ ಮೊತ್ತ

₹ 7.6 ಲಕ್ಷ ಕೋಟಿ ಹೂಡಿಕೆ

• ವಿಜಯ್ ಜೋಷಿ

ಬೆಂಗಳೂರು: ಕೋವಿಡ್ ತಂದಿತ್ತ ಆರ್ಥಿಕ ಸಂಕಷ್ಟ–ಹಿಂಜರಿತದ ಬಳಿಕ ರಾಜ್ಯದಲ್ಲಿ ಮೊದಲ ಬಾರಿಗೆ ಆಯೋಜನೆ ಆಗಿರುವ 'ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ'ವು ರಾಜ್ಯ ಸರ್ಕಾರದ ನಿರೀಕ್ಷೆಗೂ ಮೀರಿ ಬಂಡವಾಳ ಆಕರ್ಷಿಸಿದೆ.

'ಸಮಾವೇಶದ ಮೂಲಕ ಒಟ್ಟು ₹ 5 ಲಕ್ಷ ಕೋಟಿ ಮೊತ್ತದ ಹೂಡಿಕೆ ರಾಜ್ಯಕ್ಕೆ ಹರಿದುಬರಲಿದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ವಿಶ್ವಾಸ ವ್ಯಕ್ತಪಡಿಸಿದ್ದರು. ಆದರೆ, ಮೊದಲ ದಿನದ ಹೂಡಿಕೆ ಒಪ್ಪಂದಗಳ ಯಾದಿ ಅಂತಿಮಗೊಂಡಾಗ ಒಟ್ಟು ಮೊತ್ತ ₹ 7.6 ಲಕ್ಷ ಕೋಟಿಗೆ ಮುಟ್ಟಿತ್ತು.

ಭಾರತದ ಉದ್ಯಮ ಜಗತ್ತಿನ ಪ್ರಮುಖರಾದ ವಿಪ್ರೊ ಅಧ್ಯಕ್ಷ ರಿಷದ್ ಪ್ರೇಮ್‌ಜಿ, ಭಾರ್ತಿ ಎಂಟರ್‌ಪ್ರೈಸಸ್ ಉಪಾಧ್ಯಕ್ಷ ರಾಜನ್ ಭಾರ್ತಿ ಮಿತ್ತಲ್, ಜೆಎಸ್‌ಡಬ್ಲ್ಯು ಸಮೂಹದ ಅಧ್ಯಕ್ಷ ಸಜ್ಜನ್ ಜಿಂದಾಲ್, ಅದಾನಿ ಪೋರ್ಟ್ಸ್ ಆ್ಯಂಡ್ ಎಸ್‌ಇಜೆಡ್ ಸಿಇಒ ಕರಣ್ ಅದಾನಿ ಅವರ ಸಮ್ಮುಖದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ರೂಪದಲ್ಲಿ ಸಮಾವೇಶಕ್ಕೆ ಚಾಲನೆ ನೀಡಿದರು. ಕರ್ನಾಟಕಕ್ಕೆ ಇರುವ ಅಪೂರ್ವ ಅವಕಾಶ, ಸ್ಪರ್ಧಾತ್ಮಕತೆಯ ಸಾಮರ್ಥ್ಯವನ್ನು ಪ್ರಧಾನಿ ಬಣ್ಣಿಸಿದರು. ಬಂಡವಾಳ ಹರಿವಿನ ಸಮಾವೇಶದ ಚಾಲನೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ನಿರಾಣಿ ಜತೆಗೂಡಿದರು.

4ನೇ ಪುಟ ನೋಡಿ



ಬೆಂಗಳೂರು ಅರಮನೆ ಮೈದಾನದಲ್ಲಿ ಬುಧವಾರ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರಚಂದ್ ಗೆಹಲೋತ್ ವಿಜಯದ ಸಂಕೇತ ತೋರಿಸಿದರು. ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಜರಿದ್ದರು –ಪ್ರಜಾವಾಣಿ ಚಿತ್ರ/ಎಚ್‌.ಜಿ. ಪ್ರಶಾಂತ್


‘ಉದ್ಯೋಗ ಸೃಜಿಸಿದವರಿಗೆ ಹೆಚ್ಚು ಉತ್ತೇಜನ’

ಬೆಂಗಳೂರು: ಹೂಡಿಕೆ ಸ್ನೇಹಿ ವಾತಾವರಣದ ಜತೆಗೆ ರಾಜ್ಯದ ಜನರ ಹಿತ ಕಾಯುವುದೂ ಮುಖ್ಯ. ಹೆಚ್ಚು ಉದ್ಯೋಗ ಸೃಜಿಸುವ ಹೂಡಿಕೆದಾರರಿಗೆ ರಾಜ್ಯ ಸರ್ಕಾರ ಹೆಚ್ಚು ಉತ್ತೇಜನಗಳನ್ನು ನೀಡಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

'ಇನ್‌ವೆಸ್ಟ್ ಕರ್ನಾಟಕ–2022' ಜಾಗತಿಕ ಹೂಡಿಕೆದಾರರ ಸಮ್ಮೇಳನದಲ್ಲಿ ಅವರು ಮಾತನಾಡಿದರು.

4ನೇ ಪುಟ ನೋಡಿ

ಹೂಡಿಕೆಗಳು: ಯಾವ ವಲಯ? ಎಷ್ಟು ಮೊತ್ತ?



ಕರ್ನಾಟಕ ಈಗ ಜಾಗತಿಕ ಸ್ಪರ್ಧಿ: ಮೋದಿ

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಸುಲಲಿತ ವಹಿವಾಟು, ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಆಕರ್ಷಣೆ ಸೇರಿದಂತೆ ಅನೇಕ ವಿಷಯಗಳಲ್ಲಿ ಅಗ್ರ ಸ್ಥಾನದಲ್ಲಿರುವ ಕರ್ನಾಟಕವು ಭಾರತದ ಬೇರೆ ರಾಜ್ಯಗಳು ಮಾತ್ರವಲ್ಲ, ವಿಶ್ವದ ಅನೇಕ ರಾಷ್ಟ್ರಗಳಿಗೂ ಸ್ಪರ್ಧೆಯೊಡ್ಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದರು.

ಬೆಂಗಳೂರು ಅರಮನೆ ಆವರಣದಲ್ಲಿ ಬುಧವಾರ ಆರಂಭವಾದ 'ಇನ್‌ವೆಸ್ಟ್ ಕರ್ನಾಟಕ–2022' ಜಾಗತಿಕ ಹೂಡಿಕೆದಾರರ ಸಮ್ಮೇಳನದಲ್ಲಿ ವರ್ಚುಯಲ್ ಆಗಿ ಪಾಲ್ಗೊಂಡು ಉದ್ಘಾಟನಾ ಭಾಷಣ ಮಾಡಿದ ಅವರು, 'ಕೈಗಾರಿಕೆಗಳಿಂದ ಮಾಹಿತಿ ತಂತ್ರಜ್ಞಾನದವರೆಗೆ, ಹಣಕಾಸು ತಂತ್ರಜ್ಞಾನದಿಂದ ಜೈವಿಕ ತಂತ್ರಜ್ಞಾನದವರೆಗೆ, ನವೋದ್ಯಮಗಳಿಂದ ಸುಸ್ಥಿರ ಇಂಧನದವರೆಗೆ ಎಲ್ಲ ಕ್ಷೇತ್ರಗಳಲ್ಲೂ ಕರ್ನಾಟಕವು ಅಭಿವೃದ್ಧಿಯ ಹೊಸ ಅಧ್ಯಾಯ ಆರಂಭಿಸಿದೆ' ಎಂದರು.

4ನೇ ಪುಟ ನೋಡಿ

ವಿರಾಟ್ ವಿಶ್ವದಾಖಲೆ; ಭಾರತ ವಿಜಯ

ವಿರಾಟ್ ಕೊಹ್ಲಿಯ ಅಮೋಘ ಅರ್ಧಶತಕದ ಬಲದಿಂದ ಭಾರತ ತಂಡವು ಅಡಿಲೇಡ್ ಓವಲ್‌ನಲ್ಲಿ ಬುಧವಾರ ನಡೆದ ಕ್ರಿಕೆಟ್ ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ 5 ರನ್‌ಗಳಿಂದ ಜಯಿಸಿತು. ವಿರಾಟ್ ಟಿ20ವಿಶ್ವಕಪ್ ಟೂರ್ನಿಗಳಲ್ಲಿ ಅತಿ ಹೆಚ್ಚು ರನ್ ಗಳಿಸಿ ವಿಶ್ವದಾಖಲೆ ಮಾಡಿದ್ದಾರೆ.

ಭಾರತ 6ಕ್ಕೆ 184 (20ಓವರ್‌ಗಳಲ್ಲಿ)

ಬಾಂಗ್ಲಾದೇಶ 6ಕ್ಕೆ 145 (16 ಓವರ್‌ಗಳಲ್ಲಿ)

(ಮಳೆಯಿಂದಾಗಿ ಡಕ್ವರ್ಥ್–ಲೂಯಿಸ್ ಪದ್ಧತಿಯನ್ವಯ ಪರಿಷ್ಕೃತ ಗುರಿ: 16 ಓವರ್‌ಗಳಲ್ಲಿ 151)

ಟಿ20 ವಿಶ್ವಕಪ್: ಹೆಚ್ಚು ರನ್ ಗಳಿಸಿದವರು

ಆಟಗಾರ	ದೇಶ	ಅವಧಿ	ಪಂದ್ಯ	ರನ್
ವಿರಾಟ್ ಕೊಹ್ಲಿ	ಭಾರತ	2012-22	25	1065
ಮಹೇಲಾ ಜಯವರ್ಧನೆ	ಶ್ರೀಲಂಕಾ	2007-14	31	1016
ಕ್ರಿಸ್ ಗೇಲ್	ವೆಸ್ಟ್ ಇಂಡೀಸ್	2007-21	33	965
ರೋಹಿತ್ ಶರ್ಮಾ	ಭಾರತ	2007-22	37	921
ತಿಲಕರತ್ನೆ ದಿಲ್ಶಾನ್	ಶ್ರೀಲಂಕಾ	2007-16	35	897

ವಿರಾಟ್ ಕೊಹ್ಲಿ

ಅಜೇಯ 64

ಎಸೆತ: 44

ಬೌಂಡರಿ: 8

ಸಿಕ್ಸರ್: 1

ಸ್ಟ್ರೈಕ್‌ರೇಟ್: 145.45



* ಐಸಿಸಿ ಟಿ20 ಬ್ಯಾಟರ್‌ಗಳ ರ್‍ಯಾಂಕಿಂಗ್; ಸೂರ್ಯಕುಮಾರ್‌ಗೆ ಅಗ್ರಸ್ಥಾನ

‘ಕೈ’ ಟಿಕೆಟ್‌ಗೆ ₹ 5 ಸಾವಿರ ಶುಲ್ಕ, ₹ 2 ಲಕ್ಷ ಡಿ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಬಯಸುವ ಸಾಮಾನ್ಯ ವರ್ಗದ ಆಕಾಂಕ್ಷಿಗಳು ಕೆಪಿಸಿಸಿಗೆ ₹5 ಸಾವಿರ ಅರ್ಜಿ ಶುಲ್ಕದ ಜೊತೆಗೆ ₹2 ಲಕ್ಷದ ಡಿ.ಡಿ ಸಲ್ಲಿಸಬೇಕು. ಪರಿಶಿಷ್ಟರಿಗೆ ಡಿ.ಡಿಯಲ್ಲಿ ಶೇ 50ರಷ್ಟು ವಿನಾಯಿತಿ ನೀಡಲಾಗಿದೆ. ಹೀಗೆ ಸಂಗ್ರಹವಾಗುವ ಮೊತ್ತ ಕೆಪಿಸಿಸಿ ಕಟ್ಟಡ ಕಾಮಗಾರಿ ನಿಧಿಗೆ ಜಮೆ ಆಗಲಿದೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಈ ಮಾಹಿತಿ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಪಕ್ಷ ಮುಂದಿನ ಚುನಾವಣೆಗೆ ಸಜ್ಜಾಗುತ್ತಿದ್ದು, ಟಿಕೆಟ್ ಬಯಸುವವರು ಇದೇ 5ರಿಂದ 15ರವರೆಗೆ ಅರ್ಜಿ ಸಲ್ಲಿಸಬಹುದು' ಎಂದರು.

'ಹಾಲಿ ಶಾಸಕರ ಸಮೇತ ಎಲ್ಲ ಟಿಕೆಟ್ ಆಕಾಂಕ್ಷಿಗಳು ಅರ್ಜಿ ಸಲ್ಲಿಸಬಹುದು. ಚುನಾವಣೆಯಲ್ಲಿ ಸ್ಪರ್ಧಿಸಲು ನಾನು ಕೂಡ ಈ ಅರ್ಜಿ ಹಾಕಬೇಕು. ಇಲ್ಲಿ ವ್ಯಕ್ತಿಗಿಂತ ಪಕ್ಷ ಮುಖ್ಯ' ಎಂದೂ ಅವರು ವಿವರಿಸಿದರು.

'ಪಕ್ಷದ ಟಿಕೆಟ್‌ಗೆ ಯಾವ ಮಾನದಂಡದಲ್ಲಿ ಹಣ ನೀಡಬೇಕು' ಎಂಬ ಪ್ರಶ್ನೆಗೆ, 'ಯಾವುದೇ ಮಾನದಂಡವಿಲ್ಲ. ಪಕ್ಷದ ಕಟ್ಟಡ, ಪಕ್ಷದ ನಿಧಿ, ಚುನಾವಣಾ ಪ್ರಚಾರ, ಜಾಹೀರಾತು ನೀಡಲು ಹಣ ಬೇಕಿದೆ. ಪಕ್ಷಕ್ಕೆ ₹ 20 ಸಾವಿರಕ್ಕಿಂತ ಹೆಚ್ಚಿನ ನಗದು ಪಡೆಯುವಂತಿಲ್ಲ. ನಮಗೆ ಯಾವುದೇ ಚುನಾವಣಾ ಬಾಂಡ್ ಬರುತ್ತಿಲ್ಲ. ಕಾರ್ಯಕರ್ತರಾದರೂ ಪಕ್ಷಕ್ಕೆ ಹಣ ನೀಡಲಿ' ಎಂದರು.

5ನೇ ಪುಟ ನೋಡಿ

ಮೊರ್ಬಿ ಅವಘಡ ದೇವರ ಇಚ್ಛೆ ಎಂದ ಸಿಬ್ಬಂದಿ, ಗುತ್ತಿಗೆದಾರರು ಪೊಲೀಸ್ ಕಸ್ಟಡಿಗೆ

‘ಅನರ್ಹರಿಗೆ ಸೇತುವೆ ನವೀಕರಣ ಗುತ್ತಿಗೆ’

ಮೊರ್ಬಿ (ಪಿಟಿಐ/ಎಎಫ್‌ಪಿ): ಮೊರ್ಬಿ ತೂಗುಸೇತುವೆ ನವೀಕರಣ ಗುತ್ತಿಗೆಯನ್ನು ಅನರ್ಹರಿಗೆ ನೀಡಲಾಗಿತ್ತು. ಅಂತಹ ಕಾಮಗಾರಿ ನಡೆಸಲು ಅರ್ಹರಲ್ಲದ ಅದೇ ಗುತ್ತಿಗೆದಾರರಿಗೆ ಎರಡು ಬಾರಿ ನವೀಕರಣ ಗುತ್ತಿಗೆಯನ್ನು ನೀಡಲಾಗಿತ್ತು ಎಂದು ಪೊಲೀಸರು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದಾರೆ.

ತೂಗುಸೇತುವೆ ದುರಂತದ ವಿಧಿವಿಜ್ಞಾನ ಪರೀಕ್ಷೆ ನಡೆಸಿದ್ದ ತಜ್ಞರ ತಂಡವು, ಪರೀಕ್ಷೆಯ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಮುಖ್ಯಾಂಶಗಳು

- ಕಾವಲುಗಾರರು, ಟಿಕೆಟ್ ಸಿಬ್ಬಂದಿ ಸೇರಿ ಐವರು ನ್ಯಾಯಾಂಗ ಬಂಧನಕ್ಕೆ
- ಆರೋಪಿಗಳ ಪರ ವಕಾಲತ್ತು ವಹಿಸದಿರಲು ವಕೀಲರ ಸಂಘ ತೀರ್ಮಾನ

ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿರುವ 9 ಆರೋಪಿಗಳನ್ನು ಮಂಗಳವಾರ ರಾತ್ರಿ ಇಲ್ಲಿನ ಮುಖ್ಯ ಸೆಷನ್ಸ್ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿತ್ತು.

> ಅನರ್ಹರಾಗಿದ್ದರೂ ಅದೇ ಗುತ್ತಿಗೆದಾರರಿಗೆ ಗುತ್ತಿಗೆ ನೀಡಿದ್ದು ಏಕೆ ಮತ್ತು ಯಾರ ಅಣತಿಯಂತೆ ಅವರಿಗೆ ಗುತ್ತಿಗೆ ನೀಡಲಾಗಿದೆ ಎಂಬುದನ್ನು ಪತ್ತೆ ಮಾಡಬೇಕಿದೆ
> **ಸರ್ಕಾರಿ ವಕೀಲರು**

ಈ ವೇಳೆ ಸರ್ಕಾರಿ ವಕೀಲರು ಪೊಲೀಸರು ನೀಡಿದ್ದ ವರದಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದರು.

ವಿಚಾರಣೆಯಲ್ಲಿ ಹಾಜರಿದ್ದ ಒರೆವಾ ಕಂಪನಿಯ ಬಂಧಿತ ಸಿಬ್ಬಂದಿ ದೀಪಕ್ ಪರೇಕ್, 'ಇಂತಹ ದುರದೃಷ್ಟಕರ ಘಟನೆ ನಡೆದದ್ದು ದೇವರ ಇಚ್ಛೆ' ಎಂದು ಹೇಳಿದ್ದಾರೆ.

'ಒರೆವಾ ಕಂಪನಿಯು ಸೇತುವೆಯ ನಿರ್ವಹಣೆಯ ಗುತ್ತಿಗೆ ಪಡೆದುಕೊಂಡಿತ್ತು. ನವೀಕರಣದ ಹೊಣೆಯೂ ಅದೇ ಕಂಪನಿಯದ್ದಾಗಿತ್ತು. ನವೀಕರಣ ಕಾಮಗಾರಿಯನ್ನು ಒರೆವಾ ಕಂಪನಿಯು ಬೇರೆ ಕಂಪನಿಗೆ ಹೊರಗುತ್ತಿಗೆ ನೀಡಿತ್ತು. 2007ರಲ್ಲೂ ಅದೇ ಗುತ್ತಿಗೆದಾರರಿಗೆ ಸೇತುವೆಯ ನವೀಕರಣದ ಗುತ್ತಿಗೆ ನೀಡಲಾಗಿತ್ತು. ಎರಡೂ ಬಾರಿ ಅವರು ಸೇತುವೆಯ ಪ್ಲಾಟ್‌ಫಾರಂ ಬದಲಿಸುವ ಕೆಲಸ ಬಿಟ್ಟು ಬೇರೇನನ್ನೂ ಮಾಡಿಲ್ಲ' ಎಂದು ವಕೀಲರು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ.

'ಈ ಬಾರಿಯ ನವೀಕರಣದ ವೇಳೆ ಸೇತುವೆಯ ಕೇಬಲ್‌ಗಳನ್ನೂ ಬದಲಿಸಿಲ್ಲ. ಕೇಬಲ್‌ಗಳು ಹಳೆಯದಾಗಿದ್ದವು ಮತ್ತು ಅವು ತುಕ್ಕು ಹಿಡಿದಿದ್ದವು.

11ನೇ ಪುಟ ನೋಡಿ

ಕಾಲುವೆ ಬಳಿ ಇಡೀ ರಾತ್ರಿ ಕಾಲ ಕಳೆದ ಸಚಿವ ಶ್ರೀರಾಮುಲು

ವೇದಾವತಿಯಲ್ಲಿ ರಾಜಕೀಯ ‘ಹೈ ಡ್ರಾಮಾ’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಪ್ರವಾಹದಲ್ಲಿ ಕೊಚ್ಚಿಹೋದ ತುಂಗಭದ್ರಾ ಕೆಳಹಂತದ ಕಾಲುವೆಯ ಪಿಲ್ಲರ್ ರಿಪೇರಿ ಕೆಲಸ ಆಡಳಿತ ಹಾಗೂ ವಿರೋಧ ಪಕ್ಷದ ನಡುವೆ ತೀವ್ರ ಪೈಪೋಟಿಗೆ ಕಾರಣವಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು, ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ ಇಡೀ ರಾತ್ರಿ ಕಾಲುವೆ ಬಳಿ ಕಾಲಕಳೆದ 'ಹೈ ಡ್ರಾಮಾ'ಕ್ಕೆ ವೇದಾವತಿ (ಹಗರಿ) ನದಿ ಸಾಕ್ಷಿಯಾಯಿತು.

ರಾಹುಲ್ ಗಾಂಧಿಯವರ 'ಭಾರತ್ ಜೋಡೊ ಯಾತ್ರೆ' ಮತ್ತು ಬಿಜೆಪಿ 'ಜನ ಸಂಕಲ್ಪ ಯಾತ್ರೆ' ಬಳಿಕ ಜಿಲ್ಲೆಯಲ್ಲಿ ರಾಜಕೀಯ ಗರಿಗೆದರಿದ್ದು, ತುಂಗಭದ್ರಾ ಎಲ್‌ಎಲ್‌ಸಿ ಕಾಲುವೆಯಲ್ಲಿ ನೀರು ಹರಿಸುವ ವಿಚಾರ ಮಂಗಳವಾರ, ಬುಧವಾರ ಆಡಳಿತ ಪಕ್ಷ ಬಿಜೆಪಿ ಹಾಗೂ ವಿರೋಧ ಪಕ್ಷ ಕಾಂಗ್ರೆಸ್ ನಡುವೆ ಜಿದ್ದಾಜಿದ್ದಿಗೆ ಕಾರಣವಾಯಿತು.

ಇದರ ಬೆನ್ನಲ್ಲೇ ಆಂಧ್ರ ಕಾರ್ಮಿಕ ಸಚಿವ ಗುಮ್ಮನೂರು ಜಯರಾಂ, ಆಧೋನಿ ಶಾಸಕ ಸಾಯಿ ಪ್ರಸಾದ್ ರೆಡ್ಡಿ ಅವರೂ ನದಿ ತಟಕ್ಕೆ ಬಂದು ಅಧಿಕಾರಿಗಳಿಂದ ಕಾಮಗಾರಿಯ ಮಾಹಿತಿ ಪಡೆದರು.

ಬಳ್ಳಾರಿಗೆ 20 ಕಿ.ಮೀ ದೂರದ ಬೈರದೇವರಹಳ್ಳಿಯ ಬಳಿ ವೇದಾವತಿ ನದಿಗೆ ಕಟ್ಟಲಾಗಿರುವ ತುಂಗಭದ್ರಾ ಕೆಳಹಂತದ ಕಾಲುವೆಯ 15ನೇ ಪಿಲ್ಲರ್ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದು, ತಾತ್ಕಾಲಿಕ ಪಿಲ್ಲರ್ ನಿರ್ಮಿಸುವ ಕೆಲಸ ಹಗಲು– ರಾತ್ರಿ ನಡೆಯುತ್ತಿದೆ.

4ನೇ ಪುಟ ನೋಡಿ

ಶಾಸಕ ತಿಪ್ಪಾರೆಡ್ಡಿ ಹನಿಟ್ರ್ಯಾಪ್‌ಗೆ ಯುವತಿ ಯತ್ನ: ದೂರು

ಚಿತ್ರದುರ್ಗ: ಬಿಜೆಪಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರಿಗೆ ವಿಡಿಯೊ ಕರೆ ಮಾಡಿದ ಯುವತಿಯೊಬ್ಬಳು ಹನಿಟ್ರ್ಯಾಪ್‌ಗೆ ಯತ್ನಿಸಿದ್ದು, ಸೈಬರ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪೊಲೀಸ್ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿದೆ. 4

ರಸ್ತೆ ಗುಂಡಿ ಪರಿಶೀಲನೆ: ಎನ್‌ಎಚ್‌ಎಐಗೆ ನಿರ್ದೇಶನ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಬಿಬಿಎಂಪಿ ನಿಯೋಜಿತ ಖಾಸಗಿ ಕಂಪನಿ ದುರಸ್ತಿ ನಡೆಸಿದ್ದು, ಈ ಕಾಮಗಾರಿಯನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿ ಸಲ್ಲಿಸಿ' ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಹೈಕೋರ್ಟ್ ನಿರ್ದೇಶಿಸಿದೆ.

ರಸ್ತೆ ಗುಂಡಿಗಳಿಂದಾಗಿ ಸಂಭವಿಸುತ್ತಿರುವ ಅಪಘಾತಗಳ ಕುರಿತಂತೆ ಕೋರಮಂಗಲದ ವಿಜಯನ್ ಮೆನನ್ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ, 'ರಸ್ತೆ ಗುಂಡಿಗಳನ್ನು ಭರ್ತಿ ಮಾಡುವ ಕಾಮಗಾರಿಯ ಗುತ್ತಿಗೆ ಪಡೆದಿರುವ ಅಮೆರಿಕನ್ ಕಂಪನಿ ಈವರೆಗೆ ನಡೆಸಿರುವ ಕಾರ್ಯ ಪರಿಶೀಲಿಸಬೇಕು.

3ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು

ಎಂಬಿಎ: 6ಕ್ಕೆ ಉಚಿತ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರಿನ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಂಬಿಎ ವಿಭಾಗದಿಂದ ನಗರದ ಚಂದ್ರಾ ಲೇಔಟ್‌ನ ಎಸ್‌ಎಸ್‌ಕೆ ಪದವಿ ಕಾಲೇಜಿನಲ್ಲಿ ಎಂಬಿಎ ಪ್ರವೇಶದ ಆಕಾಂಕ್ಷಿಗಳಿಗೆ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಎಂಬಿಎ ಆಕಾಂಕ್ಷಿಗಳಿಗೆ ಈ ಕಾರ್ಯಾಗಾರವು ಅನುಕೂಲ ಆಗಲಿದೆ. ನ.5ರ ಒಳಗೆ 0816 2282692 – 2214097 ಕರೆ ಮಾಡಿ ಹೆಸರು ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಜೂಜಾಟ: ಬಂಧನ

ಬೆಂಗಳೂರು: ನಂದಿನಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಪಾರ್ವತಿ ನಗರದ 1ನೇ ಮುಖ್ಯರಸ್ತೆಯ ಮನೆಯೊಂದರಲ್ಲಿ 'ಶ್ರೀದೇವಿ ನೈಟ್ ಮಟ್ಕಾ' ಹೆಸರಿನಲ್ಲಿ ಸಾರ್ವಜನಿಕರಿಂದ ಹಣ ಪಣವಾಗಿ ಇರಿಸಿಕೊಂಡು ಜೂಜಾಟ ಆಡಿಸುತ್ತಿದ್ದ ಆರೋಪಿಯನ್ನು ಸಿಸಿಬಿ ವಿಶೇಷ ವಿಚಾರಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ₹ 21,500 ಹಾಗೂ ಜೂಜಾಟಕ್ಕೆ ಬಳಸುತ್ತಿದ್ದ ಪರಿಕರ ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಕೃಷಿಯಲ್ಲಿ ನವೋದ್ಯಮಗಳು' ಘೋಷಣೆ ಅಡಿ ಆಯೋಜನೆ, 700 ಮಳಿಗೆ ಸ್ಥಾಪನೆ

ಇಂದಿನಿಂದ 'ಕೃಷಿಮೇಳ'ದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಇಂದಿನಿಂದ ನಾಲ್ಕು ದಿನಗಳ ಕಾಲ ಕೃಷಿ ಮೇಳ ಸಂಭ್ರಮ ಮನೆ ಮಾಡಲಿದ್ದು, ಮೇಳಕ್ಕೆ ಮಳೆಯ ಆತಂಕ ಎದುರಾಗಿದೆ.

ಕಳೆದ ಎರಡು ದಿನಗಳಿಂದ ನಗರದಲ್ಲಿ ಧಾರಾಕಾರ ಮಳೆಯಾಗುತ್ತಿದೆ. ಗುರುವಾರ ಸಹ ಮಳೆ ಸುರಿದರೆ ಮೇಳದ ವೀಕ್ಷಕರಿಗೆ ಅಡಚಣೆ ಉಂಟಾಗುವ ಸಾಧ್ಯತೆಯಿದೆ.

ಗುರುವಾರ ಬೆಳಿಗ್ಗೆ 11ಕ್ಕೆ ಮೇಳಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಚಾಲನೆ ನೀಡಲಿದ್ದಾರೆ. ಮೊದಲ ದಿನ ಪ್ರಗತಿ ಪರ ಕೃಷಿಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಪ್ರತಿನಿತ್ಯ ಬೆಳಿಗ್ಗೆ 9ರಿಂದ ಸಂಜೆ 6ರ ತನಕ ಸಾರ್ವಜನಿಕರಿಗೆ ಮೇಳಕ್ಕೆ ಉಚಿತ ಪ್ರವೇಶವಿದೆ. ಜಿ.ಕೆ.ವಿ.ಕೆ ಮಹಾದ್ವಾರದಿಂದ ಕೃಷಿ ಮೇಳದ ಸಭಾಂಗಣ ತಲುಪಲು ಬಸ್ಸುಗಳಲ್ಲಿ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಒಟ್ಟು ನಾಲ್ಕು ದಿನಗಳಿಂದ 15 ಲಕ್ಷ ಜನರು ಕೃಷಿ ಮೇಳ ವೀಕ್ಷಿಸುವ ಸಾಧ್ಯತೆಯಿದೆ.



ಕೃಷಿ ಮೇಳದ ಲಾಂಛನ

ವಾಹನ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಜಿ.ಕೆ.ವಿ.ಕೆ ಮುಂಭಾಗದ ಜಕ್ಕೂರು ಏರೋಡ್ರ‍ೊಮ್‌ನಲ್ಲಿ (ವಿಮಾನ ನಿಲ್ದಾಣ) ಬಸ್, ಮಿನಿ ಬಸ್, ಟೆಂಪೋ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಮೇಳದ ವೀಕ್ಷಕರಿಗೆ ರಿಯಾಯಿತಿ ದರದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ಕೃಷಿ ವಿವಿ ತಿಳಿಸಿದೆ. ವಿವಿಧ ಸಾಮಾಜಿಕ ಮಾಧ್ಯಮದಲ್ಲಿ ಮೇಳದ ನೇರ ಪ್ರಸಾರ ಆಗಲಿದೆ.

ಮೊದಲ ದಿನವಾದ ಗುರುವಾರ ರಾಜ್ಯಮಟ್ಟದ ಕೃಷಿ ಪ್ರಶಸ್ತಿ ಪ್ರದಾನದ ಜತೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ರೈತ ಪ್ರಶಸ್ತಿ ಪ್ರದಾನ ನಡೆಯಲಿದೆ.

ಕೃಷಿಯಲ್ಲಿ ಡ್ರೋನ್ ಬಳಕೆ, ಆಟೋಮೇಟೆಡ್ ಕೃಷಿ ಯಂತ್ರೋಪಕರಣ, ಕೃಷಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಈ ಬಾರಿಯ ಆಕರ್ಷಣೆ ಆಗಿರಲಿದೆ.

ಸಿರಿಧಾನ್ಯ ಹಾಗೂ ಅವುಗಳ ಮಹತ್ವ, ಔಷಧೀಯ ಮತ್ತು ಸುಗಂಧ ದ್ರವ್ಯ ಸಸ್ಯ, ಜಲಾನಯನ ನಿರ್ವಹಣೆ, ಸಾವಯವ ಕೃಷಿ ಪದ್ಧತಿ, ಸಮಗ್ರ ಪೋಷಕಾಂಶಗಳು, ರೋಗ ನಿರ್ವಹಣೆ, ಹನಿ ಹಾಗೂ ತುಂತುರು ನೀರಾವರಿ ಪದ್ಧತಿ, ಮಳೆ ಮತ್ತು ಚಾವಣಿ ನೀರು ಸಂಗ್ರಹ ಯೋಜನೆಯ ಬಗ್ಗೆ ಮೇಳದಲ್ಲಿ ತಜ್ಞರಿಂದ ರೈತರಿಗೆ ಮಾಹಿತಿ ನೀಡಲಾಗುವುದು ಎಂದು ಕುಲಪತಿ ಡಾ.ಎಸ್.ವಿ.ಸುರೇಶ ತಿಳಿಸಿದ್ದಾರೆ.


ಜಿ.ಕೆ.ವಿ.ಕೆ ಆವರಣದಲ್ಲಿ ಬೆಳೆಯ ಹೊಸ ತಳಿಯ ಪ್ರಾತ್ಯಕ್ಷಿಕೆ

ಕೊಯ್ಲೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ, ಮೌಲ್ಯವರ್ಧನೆ, ಬಿತ್ತನೆ ಬೀಜ ಪರೀಕ್ಷೆ ಹಾಗೂ ಶೇಖರಣೆ, ಮೀನು ಸಾಕಾಣಿಕೆ, ಹವಾಮಾನ ಚತುರ ಕೃಷಿ, ಕೃಷಿಯಲ್ಲಿ ನೂತನ ಮಾಹಿತಿ ತಂತ್ರಜ್ಞಾನ ಕುರಿತೂ ಮೇಳದಲ್ಲಿ ಪ್ರಾತ್ಯಕ್ಷಿಕೆ ನೀಡಲಾಗುವುದು. ಚರ್ಮಗಂಟು ರೋಗದ ಕಾರಣಕ್ಕೆ ಈ ವರ್ಷ ಜಾನುವಾರು ಪ್ರದರ್ಶನ ಇರುವುದಿಲ್ಲ. ಕುರಿ ಹಾಗೂ ನಾಟಿ ಕೋಳಿ ಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ.

'ಗಾಯನಗಂಗಾ ಪ್ರಶಸ್ತಿ'

ಬೆಂಗಳೂರು: ಗಾಯನ ಗಂಗಾ ಟ್ರಸ್ಟ್ ನೀಡುವ 'ಗಾಯನಗಂಗಾ ವಾರ್ಷಿಕ ಪ್ರಶಸ್ತಿ'ಗೆ ಗಾಯಕ ಉಪಾಸನಾ ಮೋಹನ್ ಆಯ್ಕೆಯಾಗಿದ್ದಾರೆ.


ಉಪಾಸನಾ ಮೋಹನ್

ಸುಗಮ ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 7ರ ಸಂಜೆ 5.30ಕ್ಕೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕವಿಗಳಾದ ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣರಾವ್, ಗಾಯಕಿಯರಾದ ಮಂಜುಳಾ ಗುರುರಾಜ್, ಶಾಂತಾ ಅನಂತಸ್ವಾಮಿ ಹಾಗೂ ಜಾನಪದ ವಿದ್ವಾಂಸ ಹಿ.ಚಿ. ಬೋರಲಿಂಗಯ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ಆನಂದ್ ಮಾದಲಗೆರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಿಂಟೊ: 3 ವರ್ಷದಲ್ಲಿ ಗರಿಷ್ಠ ಪಟಾಕಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬ ಮುಗಿದರೂ ನಗರದಲ್ಲಿ ಪಟಾಕಿ ಅವಘಡಗಳು ನಿಂತಿಲ್ಲ. ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಈವರೆಗೆ 40 ಪ್ರಕರಣಗಳು ವರದಿಯಾಗಿವೆ. ಮೂರು ವರ್ಷದ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಪಟಾಕಿಯಿಂದ ಸಂಭವಿಸುವ ಅವಘಡದ ಬಗ್ಗೆ ವೈದ್ಯರು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಹಬ್ಬಕ್ಕೂ ಮುನ್ನ ಜಾಗೃತಿ ಮೂಡಿಸಿದ್ದರು. ಇಷ್ಟಾಗಿಯೂ ಹತ್ತು ದಿನಗಳಿಂದ ಪಟಾಕಿ ಅವಘಡಗಳು ನಗರದ ವಿವಿಧೆಡೆ ವರದಿಯಾಗುತ್ತಿವೆ. ಕೆಲವರ ಕಣ್ಣಿಗೆ ಗಂಭೀರ ಹಾನಿಯಾಗಿದ್ದು, ದೃಷ್ಟಿ ನಷ್ಟದ ಬಗ್ಗೆ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಬುಧವಾರ 49 ವರ್ಷದ ವ್ಯಕ್ತಿ ಪಟಾಕಿ ಗಾಯಕ್ಕೆ ಮಿಂಟೊ ಕಣ್ಣಿನ ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ಅವರು ಬಿಜಲಿ ಪಟಾಕಿ ಸಿಡಿಸಿ ಕಣ್ಣಿಗೆ ಗಾಯ ಮಾಡಿಕೊಂಡಿದ್ದಾರೆ. ಮಿಂಟೊದಲ್ಲಿ ಈವರೆಗೆ ವರದಿಯಾದ ಪಟಾಕಿ ಪ್ರಕರಣದಲ್ಲಿ 5 ಮಂದಿಯ ಕಣ್ಣಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 18 ಮಂದಿಗೆ ಗಂಭೀರ ಗಾಯವಾಗಿದೆ. ಅವರು ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆಯಿದೆ ಎಂದು ವೈದ್ಯರು ಹೇಳಿದ್ದಾರೆ.

ಪಟಾಕಿ ಹಚ್ಚದಿದ್ದರೂ ಗಾಯ: ಮಿಂಟೊ ಆಸ್ಪತ್ರೆಯಲ್ಲಿ ಪಟಾಕಿ ಗಾಯಕ್ಕೆ ಚಿಕಿತ್ಸೆ ಪಡೆದ 40 ಮಂದಿಯಲ್ಲಿ 21 ಮಂದಿ ಪಟಾಕಿ ಸಿಡಿಸದವರಾಗಿದ್ದಾರೆ. ಪಾದಚಾರಿ ಮಾರ್ಗದಲ್ಲಿ ಚಲಿಸುವಾಗ, ವೀಕ್ಷಿಸುವಾಗ ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ 2020ರಲ್ಲಿ 23 ಹಾಗೂ 2021ರಲ್ಲಿ 33 ಪ್ರಕರಣಗಳು ವರದಿಯಾಗಿದ್ದವು.

'ಹಸಿರು ಪಟಾಕಿಗಳಲ್ಲಿ ರಾಸಾಯನಿಕಗಳ ಬಳಕೆ ಪ್ರಮಾಣ ಶೇ 50ರಷ್ಟು ಕಡಿಮೆ ಇರುತ್ತದೆ. ಹೆಚ್ಚು ಹಾನಿ ಮಾಡುವ ಬೇರಿಯಂ ಮತ್ತು ಲಿಥಿಯಂ ಹೊರತುಪಡಿಸಿ ಇತರೆ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇದರಿಂದ ಮಾಲಿನ್ಯ ಪ್ರಮಾಣ ಕಡಿಮೆಯಾದರೂ, ಸ್ಫೋಟ ಮತ್ತು ಶಬ್ದದ ತೀವ್ರತೆ ಸಾಮಾನ್ಯ ಪಟಾಕಿಗಳಂತೆ ಇರುತ್ತದೆ. ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿವೆ' ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ತಿಳಿಸಿದರು.

ಕಸಾಪ ನವೀಕೃತ ಸಭಾಂಗಣ: ₹20 ಸಾವಿರ ಬಾಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದ ನವೀಕೃತ ಸಭಾಂಗಣಕ್ಕೆ ಬಾಡಿಗೆ ನಿಗದಿ ಮಾಡಿ, ಕಾಯ್ದಿರಿಸಲು ಅವಕಾಶ ಕಲ್ಪಿಸಿದೆ.

ಅರ್ಧ ದಿನಕ್ಕೆ ₹ 10 ಸಾವಿರ, ದಿನಕ್ಕೆ ₹ 20 ಸಾವಿರ ಬಾಡಿಗೆ ನಿಗದಿಪಡಿಸಲಾಗಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪ್ರತ್ಯೇಕವಾಗಿ ಇರಲಿದೆ. ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಬಾಡಿಗೆಯಲ್ಲಿ ರಿಯಾಯಿತಿ ನೀಡಲಾಗುತ್ತದೆ. ಟಿಕೆಟ್ ಇರಿಸಿ ನಡೆಸುವ ಕಾರ್ಯಕ್ರಮಗಳಿಗೆ ಬಾಡಿಗೆ ಹೆಚ್ಚಳವಾಗಲಿದೆ.

ಈ ಮೊದಲು ಸಭಾಂಗಣಕ್ಕೆ ದಿನವೊಂದಕ್ಕೆ ₹ 5 ಸಾವಿರ, ಅರ್ಧ ದಿನಕ್ಕೆ ₹ 3 ಸಾವಿರ ಬಾಡಿಗೆಯನ್ನು ಪಾವತಿಸಬೇಕಾಗಿತ್ತು. ಕೆಲ ತಿಂಗಳ ಹಿಂದಷ್ಟೇ ಸಭಾಂಗಣವನ್ನು ಸಂಪೂರ್ಣ ನವೀಕರಿಸಿ, ಹವಾನಿಯಂತ್ರಿತ ವ್ಯವಸ್ಥೆ ಅಳವಡಿಸಲಾಗಿದೆ. ₹ 1.95 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾದ ಸಭಾಂಗಣವು, 128 ಸ್ಥಿರಾಸನಗಳನ್ನು ಹೊಂದಿದೆ.

'ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದ ನವೀಕೃತ ಕಟ್ಟಡವು ಇದೇ ತಿಂಗಳಿಂದ ಬಾಡಿಗೆ ಆಧಾರದಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಿದೆ. ಕಟ್ಟಡದಲ್ಲಿ ಸಂಪೂರ್ಣ ಹವಾನಿಯಂತ್ರಣದ ವ್ಯವಸ್ಥೆ, ಸುಸಜ್ಜಿತವಾದ ಪ್ರಸಾದನ ಕೊಠಡಿ, ಸುರಕ್ಷಿತವಾದ ಗಣ್ಯರ ಕೊಠಡಿ, ಆಧುನಿಕ ವ್ಯವಸ್ಥೆಗಳನ್ನೊಳಗೊಂಡ ನೂತನ ವೇದಿಕೆ, ಅತ್ಯಾಧುನಿಕ ಧ್ವನಿ ಹಾಗೂ ಬೆಳಕಿನ ವ್ಯವಸ್ಥೆ, ಬೃಹತ್ ಎಲ್‌ಇಡಿ ವಾಲ್ ಸ್ಕ್ರೀನ್ ಸೇರಿ ವಿವಿಧ ಸೌಲಭ್ಯವಿದೆ' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಕನ್ನಡದ ಕಾರ್ಯಕ್ರಮಗಳು, ವಿಚಾರ ಸಂಕಿರಣ, ಉಪನ್ಯಾಸ, ಕವಿಗೋಷ್ಠಿ, ಗಣ್ಯರಿಗೆ ಶ್ರದ್ಧಾಂಜಲಿ, ಸುಗಮ ಸಂಗೀತ, ವಾರ್ಷಿಕೋತ್ಸವ, ಸನ್ಮಾನ ಇತ್ಯಾದಿ ಕಾರ್ಯಕ್ರಮಗಳಿಗೆ ಅನುಕೂಲವಾಗುಂತೆ ಸಭಾಭವನವನ್ನು ಸಿದ್ಧಪಡಿಸಲಾಗಿದೆ. ಬಾಡಿಗೆ ದರವು ಕಾರ್ಯಕ್ರಮದ ಅನುಸಾರ ವ್ಯತ್ಯಾಸವಾಗಲಿದೆ. ಕೈಗೆಟಕುವ ದರದಲ್ಲಿ ಅತ್ಯಾಧುನಿಕ ಸುಸಜ್ಜಿತ ಸಭಾಂಗಣ ಒದಗಿಸಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಭಾರತದ ನದಿಗಳ ಜೊತೆಗೊಂದು ಪಯಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ನ. 2ಕ್ಕೆ 'ಜೀವ ನದಿಗಳು– ಭಾರತದ ನದಿಗಳ ಜೊತೆಗೊಂದು ಪಯಣ' ಎಂಬ ಛಾಯಾಚಿತ್ರ ಪ್ರದರ್ಶನವನ್ನು ಪ್ರಾರಂಭಿಸಿದ್ದು, 16ರವರೆಗೆ ನಡೆಯಲಿದೆ.


ಸರ್ಜಾಪುರದಲ್ಲಿರುವ ಅಜೀಂಪ್ರೇಮ್‌ಜಿ ವಿಶ್ವವಿದ್ಯಾಲಯದ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಈ ಪ್ರದರ್ಶನದಲ್ಲಿ ದೇಶದಲ್ಲಿರುವ ನದಿಗಳ ಸಾಂಸ್ಕೃತಿಕ ಪ್ರಭಾವಗಳು, ಜೀವನೋಪಾಯಕ್ಕಾಗಿ ನದಿಗಳ ಮೇಲೆ ಜನರ ಅವಲಂಬನೆ, ಚಲನಶೀಲವಾದ ಜೀವ ವೈವಿಧ್ಯ ಮತ್ತು ನದಿಯ ಸಂರಕ್ಷಣೆಯಲ್ಲಿತಡಗಿಕೊಂಡಿರುವ ಜನರ ಪಾತ್ರ ಕೂಡ ಅನಾವರಣಗೊಳ್ಳಲಿದೆ.

ದೇಶದ 70ಕ್ಕೂ ಹೆಚ್ಚು ನದಿ ಪ್ರದೇಶಗಳಿಗೆ ಯುವ ಸ್ವಯಂ ಸೇವಕರು ಹಾಗೂ ಸರ್ಕಾರೇತರ ಸಂಸ್ಥೆಗಳು ಪ್ರವಾಸ ಕೈಗೊಂಡು, ಸೆರೆಹಿಡಿದಿರುವ ಚಿತ್ರಗಳಿವೆ. ಅಲ್ಲಿನ ಸೌಂದರ್ಯ, ಅದರ ಮೇಲೆ ನಡೆಯುತ್ತಿರುವ ಅತಿಕ್ರಮಣದ ಚಿತ್ರಣವನ್ನು ಬಿಂಬಿಸುವ ಪ್ರಯತ್ನವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಳ್ಳಂದೂರು: ಮೆಟ್ರೊ ಪಿಲ್ಲರ್‌ಗೆ ಕ್ಯಾಪ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲ್ಕ್ ಬೋರ್ಡ್‌ನಿಂದ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಭರದಿಂದ ಸಾಗುತ್ತಿದ್ದು, ಬೆಳ್ಳಂದೂರು ನಿಲ್ದಾಣದ ಬಳಿ ಮೆಟ್ರೊ ಪಿಲ್ಲರ್‌ಗಳಿಗೆ ಕ್ಯಾಪ್ ಅಳವಡಿಕೆ ಕಾಮಗಾರಿ ನಡೆಯುತ್ತಿದೆ.


ಬೆಳ್ಳಂದೂರು ಬಳಿ ಮೆಟ್ರೊ ಪಿಲ್ಲರ್‌ಗಳಿಗೆ ಕ್ಯಾಪ್ ಅಳವಡಿಕೆ ಮಾಡುತ್ತಿರುವುದು

2021ರ ಆಗಸ್ಟ್‌ನಲ್ಲಿ ಈ ಮಾರ್ಗದಲ್ಲಿ ಮಣ್ಣು ಪರೀಕ್ಷೆ ಕಾರ್ಯವನ್ನು ಆರಂಭಿಸಲಾಗಿತ್ತು. ವರ್ಷ ತುಂಬುವಷ್ಟರಲ್ಲೇ ಮೆಟ್ರೊ ಪಿಲ್ಲರ್‌ಗಳ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದೆ. ಮೂರು ಪಾಳಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ನಿಗದಿತ ಅವಧಿಯಲ್ಲೇ ಕಾಮಗಾರಿ ಪೂರ್ಣಗೊಳಿಸುವ ಉದ್ದೇಶ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಸಿಲ್ಕ್ ಬೋರ್ಡ್‌ನಿಂದ ಕಾಡುಬೀಸನಹಳ್ಳಿಯವರೆಗಿನ (10 ಕಿ.ಮೀ) ಮೊದಲ ಪ್ಯಾಕೇಜ್‌ನ ನಿರ್ಮಾಣ ಗುತ್ತಿಗೆಯನ್ನು ಆಫ್ಕಾನ್ಸ್ ಸಂಸ್ಥೆ ಪಡೆದಿದ್ದರೆ, ಕಾಡುಬೀಸನಹಳ್ಳಿಯಿಂದ ಬೈಯಪ್ಪನಹಳ್ಳಿಯವರೆಗಿನ (9.75 ಕಿ.ಮೀ) ಎರಡನೇ ಪ್ಯಾಕೇಜ್‌ನ ಗುತ್ತಿಗೆಯನ್ನು ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಪಡೆದಿದೆ.

ಕೆಎಸ್‌ಆರ್‌ಟಿಸಿ: ವಿವರ ಪಡೆದ ಕೇರಳ ಅಧಿಕಾರಿಗಳು

ಬೆಂಗಳೂರು: ಕೆಎಸ್‌ಆರ್‌ಸಿಸಿ ಅಳವಡಿಸಿಕೊಂಡಿರುವ ಕಾರ್ಮಿಕಸ್ನೇಹಿ ಕಾರ್ಯಕ್ರಮಗಳ ಬಗ್ಗೆ ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧಿಕಾರಿಗಳು ಬುಧವಾರ ಮಾಹಿತಿ ಪಡೆದುಕೊಂಡರು.

ಕೋವಿಡ್ ಬಳಿಕ ಹೊಸ ಬಸ್ ಸೇರ್ಪಡೆಯಾಗದಿದ್ದರೂ ವ್ಯವಸ್ಥಿತ ಬಸ್ ಕಾರ್ಯಾಚರಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರಿಂದ ಅಧಿಕಾರಿಗಳು ವಿವರ ಪಡೆದುಕೊಂಡರು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದರು.

ಬಿಡದಿ ಕೈಗಾರಿಕೆಗಳಿಂದ ಮಾಲಿನ್ಯ • ಕೆರೆ ಅಂಗಳ ಒತ್ತುವರಿ

ಬೈರಮಂಗಲ ಕೆರೆಗೆ ಹೆಚ್ಚಾದ ಕಲ್ಮಶ

• ಆರ್. ಮಂಜುನಾಥ್



ಬೈರಮಂಗಲ ಕೆರೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಕಲ್ಮಶದ ಮಟ್ಟ ಕಡಿಮೆಯಾಗಿ ಕಂಗೊಳಿಸಿದ್ದ ಬೈರಮಂಗಲ ಕೆರೆಗೆ ಮತ್ತೆ ಕೈಗಾರಿಕೆ ಕಲ್ಮಶದ ಹರಿವು ಹೆಚ್ಚಾಗಿ, ಕಲುಷಿತಗೊಳ್ಳುತ್ತಿದೆ. ಇದರ ಜೊತೆಗೆ, ಕೈಗಾರಿಕೆ ಪ್ರದೇಶಗಳಲ್ಲಿ ಕೆರೆ ಅಂಗಳ ಒತ್ತುವರಿಯಾಗುತ್ತಿದೆ.

ಬೈರಮಂಗಲ ಜಲಾಶಯದಿಂದ ಬಿಡದಿ ಪ್ರದೇಶದ ರೈತರಿಗೆ ನೀರು ಹಾಗೂ ಬೆಂಗಳೂರು ನಗರದ ಪ್ರದೇಶ ಜನರಿಗೆ ಕುಡಿಯುವ ನೀರು ಒದಗಿಸುವ ಯೋಜನೆ ಸರ್ಕಾರದ ಮುಂದಿದೆ. ಇದಕ್ಕಾಗಿ ಕಲುಷಿತವಲ್ಲದ ಜಲಾಶಯವನ್ನಾಗಿ ಮಾಡಲು ಉದ್ದೇಶಿಸಲಾಗಿದೆ. ಈ ಹಂತದಲ್ಲೇ ಯಾವುದೇ ನಿಯಂತ್ರಣವಿಲ್ಲದೆ ಕಲ್ಮಶ ಹರಿಯುತ್ತಿದೆ.

ರಾಮನಗರದ ಬೈರಮಂಗಲದಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಬೈರಮಂಗಲ ಕೆರೆ ಪ್ರದೇಶದಲ್ಲಿ ಜಲಾಶಯವನ್ನು ನಿರ್ಮಿಸಲಾಗಿದೆ. ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ 1,018 ಎಕರೆ ವಿಸ್ತೀರ್ಣದಲ್ಲಿರುವ ಈ ಕೆರೆಗೆ ಇದೀಗ ಬಿಡದಿ ಕೈಗಾರಿಕೆ ಪ್ರದೇಶದಿಂದ ಕಲ್ಮಶದ ಹರಿವು ಹೆಚ್ಚಾಗಿದೆ. ಸಂಸ್ಕರಿಸಿದ ನೀರನ್ನೇ ಬಿಡಬೇಕೆಂಬ ನಿಯಮವಿದ್ದರೂ ಕೈಗಾರಿಕೆಗಳು ಅದನ್ನು ಪಾಲಿಸಿಲ್ಲ. ಹೀಗಾಗಿಯೇ ಕೆರೆ ಸಂರಕ್ಷಣೆ ಹಾಗೂ ಅಭಿವೃದ್ಧಿ ಪ್ರಾಧಿಕಾರ (ಕೆಸಿಎಲ್‌ಡಿಎ) ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ನೋಟಿಸ್ ಜಾರಿ ಮಾಡಿದೆ.

ಬಿಡದಿ ಕೈಗಾರಿಕೆ ಪ್ರದೇಶದ 2ನೇ ಹಂತದ ಪ್ರದೇಶದಲ್ಲಿ ಬೈರಮಂಗಲ ಕೆರೆ ಪ್ರದೇಶವನ್ನೇ ಒತ್ತುವರಿ ಮಾಡಿಕೊಳ್ಳಲಾಗಿದೆ. ಬಫರ್ ಝೋನ್ ಅನ್ನೂ ಬಿಡಲಾಗಿಲ್ಲ. ಈ ಬಗ್ಗೆ ಸರ್ವೆ ನಡೆಸಿ, ಎಲ್ಲವನ್ನೂ ನಿಗದಿ ಮಾಡಬೇಕು ಎಂದು ಪರಿಸರ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

ಒತ್ತುವರಿ: ಬೈರಮಂಗಲ ಕೆರೆಯನ್ನು ಕಾವೇರಿ ನೀರಾವರಿ ನಿಗಮ ಸೇರಿ ಕೈಗಾರಿಕೆಗಳು ಒತ್ತುವರಿ ಮಾಡಿದೆ ಎಂದು ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್ ಅಧ್ಯಕ್ಷ ಯಲ್ಲಪ್ಪ ರೆಡ್ಡಿ ದೂರಿದರು.

‘ವೃಷಭಾವತಿ ನದಿ ನೀರು ಬೈರಮಂಗಲ ಕೆರೆಗೆ ಹರಿಯದಂತೆ ತಡೆಯಲು ಕಾವೇರಿ ನೀರಾವರಿ ನಿಗಮ ಬೈಪಾಸ್ ಚಾನಲ್ ನಿರ್ಮಿಸುತ್ತಿದೆ. ಪ್ರಥಮವಾಗಿ ಇವರು ಮಾಡಬೇಕಾದ ಕೆಲಸವೆಂದರೆ ಕೆರೆಯನ್ನು ರಕ್ಷಿಸಬೇಕು. ಆದರೆ, ಈ ಕೆರೆ ಗಡಿಯನ್ನೇ ಗುರುತಿಸಲಾಗಿಲ್ಲ. ಬಫರ್ ಝೋನ್ ಅನ್ನು ನಿರ್ಧರಿಸಿಲ್ಲ. ಒತ್ತುವರಿಯನ್ನು ತೆರವು ಮಾಡಿಲ್ಲ. ಕೈಗಾರಿಕೆ ಪ್ರದೇಶದಲ್ಲಿ ಹಲವು ಕಟ್ಟಡಗಳು ಬೈರಮಂಗಲ ಕೆರೆ ಅಂಗಳವನ್ನೇ ಒತ್ತುವರಿ ಮಾಡಿವೆ’ ಎಂದು 2020ರಲ್ಲೇ ಕಂದಾಯ, ಜಲಸಂಪನ್ಮೂಲ, ಸಣ್ಣ ನೀರಾವರಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆದಿದ್ದೆವು. ಆದರೆ ಈವರೆಗೆ ಕ್ರಮ ಕೈಗೊಂಡಿಲ್ಲ’ ಎಂದು ಆರೋಪಿಸಿದರು.

ಮಾಲಿನ್ಯ ನಿಯಂತ್ರಣ ಮಂಡಳಿಗೆ ಕೆರೆ ಪ್ರಾಧಿಕಾರ ನೋಟಿಸ್

ಬಿಡದಿ ಕೈಗಾರಿಕೆ ಪ್ರದೇಶದಿಂದ ಬೈರಮಂಗಲ ಕೆರೆಗೆ ಹೆಚ್ಚು ಕಲುಷಿತ ನೀರು ಹರಿದುಬರುತ್ತಿದ್ದು, ಜಲಾಶಯ ಮತ್ತಷ್ಟು ಕಲುಷಿತಗೊಳ್ಳುತ್ತಿದೆ. ಇದರಿಂದ ಜಲಚರಗಳಿಗೆ ಧಕ್ಕೆಯಾಗಿದ್ದು, ಸುತ್ತಮುತ್ತಲಿನ ಪರಿಸರದ ಮೇಲೂ ಪರಿಣಾಮ ಬೀರುತ್ತಿದೆ. ಹೀಗಾಗಿ ಸಂಸ್ಕರಿಸಿದ ನೀರು ಮಾತ್ರ ಕೆರೆಗೆ ಹರಿಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆದಿದ್ದಾರೆ.

ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ–2014 ಮತ್ತು ತದ ನಂತರದ ತಿದ್ದುಪಡಿಗಳು ಹಾಗೂ ರಾಷ್ಟ್ರೀಯ ಹಸಿರು ಪೀಠದ ಆದೇಶಗಳಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ವಡೇರಹಳ್ಳಿ ಪ್ರಾದೇಶಿಕ ಕೇಂದ್ರದ ಪರಿಸರ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಈ ಪತ್ರದ ಪ್ರತಿಯನ್ನು (ನ.2) ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ ಹಾಗೂ ಸಣ್ಣ ನೀರಾವರಿ ಇಲಾಖೆ ದಕ್ಷಿಣ ವಿಭಾಗದ ಮುಖ್ಯ ಎಂಜಿನಿಯರ್ ಅವರಿಗೂ ಕಳುಹಿಸಿದ್ದಾರೆ.

‘ದೇಶದಲ್ಲೇ ಮೊದಲಿಗೆ ತೃತೀಯ ಲಿಂಗಿಗಳಿಗೆ ಜಮೀನು ಮಂಜೂರು’

‘ನಮ್ಮನೆ ಸುಮ್ಮನೆ’ ಆಶ್ರಮ ನಿರ್ಮಾಣಕ್ಕೆ ಭೂಮಿಪೂಜೆ

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮವನ್ನು ಸಚಿವ ಆರ್‌.ಅಶೋಕ ಉದ್ಘಾಟಿಸಿದರು. ಚಿತ್ರದಲ್ಲಿ ಸಾಲುಮರದ ತಿಮ್ಮಕ್ಕ, ಮಂಜಮ್ಮ ಜೋಗತಿ, ಸಂತೋಷ ಭಾರತಿ ಗುರೂಜಿ, ಬಿಡಿಎ ಅಧ್ಯಕ್ಷ ಎಸ್‌.ಆರ್‌.ವಿಶ್ವನಾಥ್, ‘ನಮ್ಮನೆ ಸುಮ್ಮನೆ’ ಸಂಸ್ಥಾಪಕಿ ನಕ್ಷತ್ರ, ಬಿಜೆಪಿ ಮುಖಂಡ ಎಸ್‌.ಮುನಿರಾಜು ಇದ್ದಾರೆ

ನೆಲಮಂಗಲ: ‘ದೇಶದ ಇತಿಹಾಸದಲ್ಲೇ ಮಂಗಳಮುಖಿಯರಿಗೆ ಜಮೀನು ಮಂಜೂರು ಮಾಡಿಲ್ಲ. ‘ನಮ್ಮನೆ ಸುಮ್ಮನೆ’ ನಿರಾಶ್ರಿತರ ಆಶ್ರಮದ ನಕ್ಷತ್ರ ಅವರ ನಿರಂತರ ಪ್ರಯತ್ನ, ಶಾಸಕ ಎಸ್‌.ಆರ್‌.ವಿಶ್ವನಾಥ್ ಅವರ ಕಾಳಜಿಯಿಂದ ತೃತೀಯ ಲಿಂಗಿಗಳಿಗೆ 20 ಗುಂಟೆ ಜಮೀನು ಮಂಜೂರು ಮಾಡಿದ್ದೇವೆ’ ಎಂದು ಕಂದಾಯ ಸಚಿವ ಆರ್‌.ಅಶೋಕ ತಿಳಿಸಿದರು.

ಇಲ್ಲಿಗೆ ಸಮೀಪದ ದಾಸನಪುರ ಹೋಬಳಿ ಗಂಗೊಂಡನಹಳ್ಳಿಯಲ್ಲಿ ತೃತೀಯ ಲಿಂಗಿಯಾದ ನಕ್ಷತ್ರ ಅವರು ಸ್ಥಾಪಿಸಿರುವ ‘ನಮ್ಮನೆ ಸುಮ್ಮನೆ’ ನಿರಾಶ್ರಿತರ ಆಶ್ರಮಕ್ಕೆ ಜಮೀನು ಮಂಜೂರಾಗಿದ್ದು, ಅದರಲ್ಲಿ ಕಟ್ಟಡ ನಿರ್ಮಾಣ ಮಾಡಲು ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

‘ತೃತೀಯ ಲಿಂಗಿಗಳಲ್ಲಿ ಹಲವರು ವಿದ್ಯಾವಂತರಿದ್ದಾರೆ. ಅವರಿಗೂ ಉದ್ಯೋಗ ನೀಡಿದರೆ ಸ್ವಾವಲಂಬಿಗಳಾಗಿ ಬದುಕುತ್ತಾರೆ. ಇವರಿಗೆ ಇನ್ನೂ ಹೆಚ್ಚಿನ ಜಮೀನು ಮಂಜೂರು ಮಾಡಲು ಕ್ರಮ ಕೈಗೊಳ್ಳುತ್ತೇವೆ’ ಎಂದರು.

ಬಿಡಿಎ ಅಧ್ಯಕ್ಷ ಎಸ್‌.ಆರ್‌. ವಿಶ್ವನಾಥ್ ಮಾತನಾಡಿ, ‘ನಕ್ಷತ್ರ ಅವರು ಪ್ರಥಮ ಬಾರಿ ನನ್ನ ಬಳಿ ಜಾಗ ಕೇಳಲು ಬಂದಾಗ ಅಷ್ಟು ಗಂಭೀರವಾಗಿ ಪರಿಗಣಿಸಿರಲಿಲ್ಲ, ಅವರು ಛಲಬಿಡದೆ ಪದೇ ಪದೇ ಬಂದು ತಮ್ಮ ಕೆಲಸಗಳನ್ನು ವಿವರಿಸಿದ್ದರಿಂದ ಅರ್ಜಿ ಸ್ವೀಕರಿಸಿ, ಅಶೋಕ್ ಅವರ ಗಮನಕ್ಕೆ ತಂದೆ. ಗ್ರಾಮಸ್ಥರ ನೆರವಿನಿಂದ ಮುಖ್ಯರಸ್ತೆಯಲ್ಲಿ ಜಾಗ ಮಂಜೂರು ಮಾಡಿದ್ದೇವೆ’ ಎಂದರು.

‘ಹಿಂದೆ ಇದ್ದಂತಹ ಯಡಿಯೂರಪ್ಪ ಅವರ ಸರ್ಕಾರ ನಮ್ಮನ್ನು ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಿತ್ತು, ಪ್ರಸ್ತುತ ಬೊಮ್ಮಾಯಿ ಸರ್ಕಾರ ನಮಗೆ ಜಾಗ ನೀಡಿದೆ. ತೃತೀಯ ಲಿಂಗಿಗಳ ವೃತ್ತಿಪರ ತರಬೇತಿ, ಆಶ್ರಯ ಹಾಗೂ ಸಮಗ್ರ ಕಲ್ಯಾಣಕ್ಕಾಗಿ 5 ಎಕರೆ ಜಮೀನಿಗಾಗಿ ಮನವಿ ಮಾಡಿದ್ದೆ. ಶೀಘ್ರ ಅದನ್ನು ನೆರವೇರಿಸಿಕೊಡಬೇಕು’ ಎಂದು ಜಾನಪದ ಅಕಾಡೆಮಿಯ ಮಾಜಿ ಅಧ್ಯಕ್ಷೆ ಮಂಜಮ್ಮ ಜೋಗತಿ ಕೇಳಿಕೊಂಡರು.

ಸಂಸ್ಥೆಯ ಸಂಸ್ಥಾಪಕಿ ನಕ್ಷತ್ರ ಮನೆಯಿಂದ ಹೊರ ದಬ್ಬಿಸಿಕೊಂಡು ತಾವು ಪಟ್ಟ ಕಷ್ಟಗಳನ್ನು ನೆನೆದರು.

ಬಿಜೆಪಿ ಮುಖಂಡ ಎಸ್‌. ಮುನಿರಾಜು, ಬಿಜೆಪಿ ಮಂಡಲ ಅಧ್ಯಕ್ಷ ಹನುಮಯ್ಯ, ಕೊಳ್ಳಿಗಾನಹಳ್ಳಿ ವೆಂಕಟೇಶ್, ಮಾದನಾಯಕನಹಳ್ಳಿ ನಗರಸಭೆ ಆಯುಕ್ತ ಹನುಮಂತೇಗೌಡ, ಸಂತೋಷ ಭಾರತಿ ಗುರೂಜಿ ಇದ್ದರು. ಸಾಲುಮರದ ತಿಮ್ಮಕ್ಕ, ಜಾನಪದ ಕಲಾವಿದ ಅಪ್ಪಗೆರೆ ತಿಮ್ಮರಾಜು, ಬಿ.ಆರ್‌.ಹಿರೇಮಠ್, ಸಾಹಿತಿ ವೈಬಿಎಚ್ ಜಯದೇವ್ ಹಾಗೂ ಇನ್ನೂ ಕೆಲ ಸಾಧಕರಿಗೆ ‘ಶ್ರೇಷ್ಠ ಕನ್ನಡಿಗ ಪುನೀತ್ ರಾಜ್’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೆ.ಆರ್‌.ಪುರ ಇನ್‌ಸ್ಪೆಕ್ಟರ್ ನಂದೀಶ್ ಸಾವು ಪ್ರಕರಣ

ಇಬ್ಬರು ಸಚಿವರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ



ಕೆ.ಆರ್‌.ಪುರ ಠಾಣಾಧಿಕಾರಿಗೆ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ದೂರು ನೀಡಿದರು

ಕೆ.ಆರ್.ಪುರ: ಕರ್ತವ್ಯ ಲೋಪ ಆರೋಪದ ಅಡಿ ಅಮಾನತುಗೊಂಡಿದ್ದ ಕೆ.ಆರ್.ಪುರ ಇನ್‌ಸ್ಪೆಕ್ಟರ್ ಎಚ್.ಎಲ್.ನಂದೀಶ್ ಹೃದಯಾಘಾತದಿಂದ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಸಚಿವರು ಮತ್ತು ಇಬ್ಬರು ಹಿರಿಯ ಪೊಲೀಸ್ ಅಧಿಕಾರಿಗಳು ಸೇರಿ 6 ಜನರ ವಿರುದ್ಧ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ದೂರು ನೀಡಿದ್ದಾರೆ.

ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಅವರು ಗೃಹ ಸಚಿವ ಆರಗ ಜ್ಞಾನೇಂದ್ರ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ನಗರ ಪೊಲೀಸ್ ಆಯುಕ್ತ ಪ್ರತಾಪ ರೆಡ್ಡಿ, ಸಿಸಿಬಿ ಎಸಿಪಿ ರೀನಾ ಸುವರ್ಣ, ಬೈರತಿ ಬಸವರಾಜ ಸಹೋದರ ಗಣೇಶ್ ಮತ್ತು ಸಂಬಂಧಿ ಚಂದ್ರಪ್ಪ ವಿರುದ್ಧ ಸೆಕ್ಷನ್ 304 (ಎ) ಮತ್ತು 107 ಅಡಿಯಲ್ಲಿ ಎಫ್.ಐ.ಆರ್ ದಾಖಲಿಸುವಂತೆ ದೂರು ನೀಡಿದ್ದಾರೆ.

ನಂದೀಶ್ ಅವರು ಮಾನಸಿಕವಾಗಿ ನೊಂದು ಹೃದಯಾಘಾತದಿಂದ ಮರಣ ಹೊಂದಿದ್ದಾರೆ. ಬೈರತಿ ಬಸವರಾಜ ಅವರ ಸಂಬಂಧಿಗಳ ಕಿರುಕುಳವೇ ಇನ್‌ಸ್ಪೆಕ್ಟರ್ ನಂದೀಶ್ ಹೃದಯಾಘಾತಕ್ಕೆ ಕಾರಣ ಎಂದು ಅವರು ಆರೋಪಿಸಿದ್ದಾರೆ.

‘ಬೈರತಿ ಬಸವರಾಜ ಸಹೋದರ ಗಣೇಶ ಮತ್ತು ಸಂಬಂಧಿ ಚಂದ್ರಪ್ಪ ಅವರು ಹೇಳಿದಂತೆ ಕೇಳಲಿಲ್ಲ, ಅಕ್ರಮಗಳಿಗೆ ಸಹಕಾರ ನೀಡಲಿಲ್ಲ ಎಂಬ ಕಾರಣದಿಂದಾಗಿ ನಂದೀಶ್ ಅವರನ್ನು ಗುರಿಯಾಗಿಕೊಂಡಿದ್ದರು. ಗಣೇಶ್ ಮತ್ತು ಚಂದ್ರಪ್ಪ ಕ್ಷೇತ್ರದಲ್ಲಿ ಖಾಲಿ ಸೈಟ್‌ನಲ್ಲಿ ಬೇಲಿ ಹಾಕಿಸಿ ಹಣ ವಸೂಲಿ, ಸರ್ಕಾರಿ ಅಧಿಕಾರಿಗಳಿಂದ ಹಫ್ತಾ ವಸೂಲಿ, ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿದ್ದಾರೆ’ ಎಂದು ಅಬ್ರಹಾಂ ಆರೋಪಿಸಿದ್ದಾರೆ.

‘ಉಪ್ಪಾರಪೇಟೆಯಿಂದ ದಾಳಿ ನಡೆಸಲು ಬರುವ ಸಿಸಿಬಿ ಅಧಿಕಾರಿಗಳಿಗೆ ಮೆಜೆಸ್ಟಿಕ್, ಹೈಗ್ರೌಂಡ್ಸ್ ಪೊಲೀಸ್ ಠಾಣೆ, ಇಂದಿರಾ ನಗರದಲ್ಲಿರುವ ಪಬ್‌ಗಳು ಕಾಣಲಿಲ್ಲವೇ? ಗಣೇಶ್ ಮತ್ತು ಚಂದ್ರಪ್ಪ ಕುಮ್ಮಕ್ಕಿನಿಂದ ಉದ್ದೇಶಪೂರ್ವಕವಾಗಿ ಸಿಸಿಬಿಗೆ ಮಾಹಿತಿ ನೀಡಿ, ದಾಳಿ ನಡೆಸುವಂತೆ ಮಾಡಿದ್ದರು. ನಂದೀಶ್ ಅವರನ್ನು ಕೆಲಸದಿಂದ ಅಮಾನತು ಮಾಡುವಂತೆ ಒತ್ತಡ ಹಾಕಿದ್ದರು. ಹೀಗಾಗಿ, ಬೈರತಿ ಬಸವರಾಜ ಅವರು ಗೃಹ ಸಚಿವರಿಗೆ ಒತ್ತಡ ತಂದು ಕಮಿಷನರ್ ಮೂಲಕ ಅಮಾನತು ಆಗುವಂತೆ ಮಾಡಿದ್ದಾರೆ. ಅಲ್ಲದೇ ಪೋಸ್ಟಿಂಗ್‌ಗಾಗಿ ಬೈರತಿ ಬಸವರಾಜ ಹಾಗೂ ಗೃಹ ಸಚಿವರಿಗೆ ದೊಡ್ಡ ಮೊತ್ತ ನೀಡಿರುವ ಮಾಹಿತಿ ಇದೆ’ ಎಂದು ದೂರಿದ್ದಾರೆ.

ಅಮಾನತು ಮಾಡುವ ಮೊದಲು ನಂದೀಶ್ ಅವರಿಂದ ಮಾಹಿತಿ ಕೇಳಲಿಲ್ಲ. ಇದೆಲ್ಲವೂ ನಂದೀಶ್ ಸಾವಿಗೆ ಕಾರಣವಾಗಿದೆ. ಈ ಬಗ್ಗೆ ತನಿಖೆ ನಡೆಸಬೇಕು. ಆರೋಪಿಗಳ ವಿರುದ್ಧ ಎಫ್.ಐ.ಆರ್ ದಾಖಲಿಸಬೇಕು. ಇಲ್ಲದಿದ್ದರೆ ನ್ಯಾಯಾಲಯದ ಮೊರೆಹೋಗುವುದಾಗಿ ಅಬ್ರಹಾಂ ಎಚ್ಚರಿಸಿದ್ದಾರೆ.

ಇದೇ 5ರಂದು ಬಹುಮಾನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಕಥೆ ಮತ್ತು ಕವನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಸಮಾರಂಭ ನ. 5ರಂದು ಸಂಜೆ 4ಕ್ಕೆ ಬಸವನಗುಡಿಯ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಹಿರಿಯ ಸಾಹಿತಿ ರಹಮತ್ ತರೀಕೆರೆ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಕನ್ನಡದ ಸೃಜನಶೀಲತೆಯ ಸ್ವರೂಪದ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕಥೆ-ಕವನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆಯನ್ನೂ ಮಾಡಲಿದ್ದಾರೆ.

ಓದುಗರು ಹಾಗೂ ಸಾಹಿತ್ಯಾಸಕ್ತರೆಲ್ಲರಿಗೂ ಕಾರ್ಯಕ್ರಮಕ್ಕೆ ಸ್ವಾಗತ ಕೋರಲಾಗಿದೆ.

ಹಳ್ಳಿಗಳಲ್ಲಿ ಪುರುಷ ಸ್ವಸಹಾಯ ಸಂಘ

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮಕ್ಕೂ ಮುನ್ನ ಗಿಲಕಿಗಳನ್ನು ಹಿಡಿದು ಕಲಾವಿದರೊಂದಿಗೆ ಶಾಲಿನಿ ರಜನೀಶ್ ಬೆರೆತು ಸಂಭ್ರಮಿಸಿದ ಕ್ಷಣ —ಪ್ರಜಾವಾಣಿ ಚಿತ್ರ

ಬೆಂಗಳೂರು: ಪ್ರತಿ ಹಳ್ಳಿಯಲ್ಲೂ ಪುರುಷ ಸ್ವಸಹಾಯ ಸಂಘ ತೆರೆಯಲು ₹500 ಕೋಟಿ ಮೀಸಲಿಡಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದರು.

ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ ಸಂಘಟನೆಯ ರಾಜ್ಯ ನಿರ್ದೇಶಕರ ಕಾರ್ಯಾಲಯ ಹಾಗೂ ಕ್ಷೇತ್ರೀಯ ನಿರ್ದೇಶಕರ ಕಾರ್ಯಾಲಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ 29 ಸಾವಿರ ಹಳ್ಳಿಗಳಿದ್ದು, ಎಲ್ಲೆಡೆಯೂ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಪುರುಷ ಸ್ವಸಹಾಯ ಸಂಘಗಳನ್ನು ರಚಿಸುವ ಉದ್ದೇಶ ಇದೆ. ನೆಹರು ಯುವ ಕೇಂದ್ರ, ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್), ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಯುವ ಜನರಿಗೆ ವೃತ್ತಿ ತರಬೇತಿ ನೀಡಿ ಅವರ ಕೌಶಲ ಹೆಚ್ಚಿಸುವುದು ಇದರ ಉದ್ದೇಶ ಎಂದರು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯುವಜನ ಅಧಿಕಾರಿಗಳಿದ್ದು, ತಾಲ್ಲೂಕು ಮಟ್ಟದಲ್ಲೂ ಆಪ್ತ ಸಮಾಲೋಚಕರನ್ನು ನಿಯೋಜಿಸಿಕೊಳ್ಳಲಾಗುತ್ತಿದೆ. 28 ತಾಲ್ಲೂಕುಗಳಲ್ಲಿ ಈ ಹುದ್ದೆ ಖಾಲಿ ಇದ್ದು, ಭರ್ತಿ ಮಾಡಿಕೊಳ್ಳಲಾಗುವುದು ಎಂದು ವಿವರಿಸಿದರು.

ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಎಂ.ಪಿ. ಮುಲಾಯ್ ಮಹಿಲನ್, ನೆಹರು ಯುವ ಕೇಂದ್ರ ಸಂಘಟನೆ ಕ್ಷೇತ್ರೀಯ ನಿರ್ದೇಶಕ ಎಂ.ಎನ್.ನಟರಾಜ್ ಮಾತನಾಡಿದರು.

ಚಿತ್ರಾವಳಿ



ಒನ್ ಬೆಂಗಳೂರು ವೆಸ್ಟ್ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್‌ದಿಂದ 67ನೇ ಕರ್ನಾಟಕ ರಾಜ್ಯೋತ್ಸವವನ್ನು ಆಚರಣೆ ಮಾಡಲಾಯಿತು. ಕ್ರಿಶನ್ ಗೋಯಲ್, ಹರಿದಾಸ್ ಮೋತ, ಶಿವಪ್ರಭು, ತಿಲಕ್ ಕಪೂರ್, ಡಾ. ಸುರೇಶ್ ಗೋಗಿ, ಎನ್‌.ಟಿ ಶ್ರೀಧರ್ ಇದ್ದರು



ನಿಸರ್ಗ ಬಡಾವಣೆಯಲ್ಲಿ 67ನೇ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು. ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥೆಯ ಅಧ್ಯಕ್ಷ ವಿ. ಲಕ್ಷ್ಮೀನಾರಾಯಣ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಿ. ಶ್ಯಾಮಪ್ರಕಾಶ್, ಕೆ.ಎನ್‌. ರಂಗನಾಥ್, ಡಿ.ಎಂ ಲೋಕೇಶ್, ರವಿರಾಜ್ ಭಟ್ ಇದ್ದರು

ರಸ್ತೆ ಗುಂಡಿ ಪರಿಶೀಲನೆ: ಎನ್‌ಎಚ್‌ಎಐಗೆ ನಿರ್ದೇಶನ

ಒಂದನೇ ಪುಟದಿಂದ...

ಹಿರಿಯ ಅಧಿಕಾರಿ ಕಾಮಗಾರಿ ಪರಿಶೀಲಿಸಿ ವರದಿ ಸಲ್ಲಿಸಬೇಕು‘ ಎಂದು ನಿರ್ದೇಶಿಸಿದೆ.

‘ಬಿಬಿಎಂಪಿ ಸಲ್ಲಿಸಿರುವ ವರದಿಯ ಪ್ರಕಾರ, ರಸ್ತೆ ಕಾಮಗಾರಿ ಹಾಗೂ ರಸ್ತೆ ಗುಂಡಿ ಭರ್ತಿ ಮಾಡುವ ಕೆಲಸವನ್ನು ಖಾಸಗಿ ಗುತ್ತಿಗೆದಾರರಿಗೆ ನೀಡಲಾಗಿದೆ. ಆ ಕಾಮಗಾರಿ ತೃಪ್ತಿಕರವಾಗಿದೆ ಎಂಬುದಾಗಿ ಬಿಬಿಎಂಪಿಯೇ ಪ್ರಮಾಣೀಕರಿಸಿದೆ. ಈ ಕಾಮಗಾರಿಯ ಕುರಿತು ಮೂರನೇ ಸಂಸ್ಥೆಯಿಂದ ಅಧ್ಯಯನ ನಡೆಸಿಲ್ಲ’ ಎಂದು ನ್ಯಾಯಪೀಠ ಅತೃಪ್ತಿ ವ್ಯಕ್ತಪಡಿಸಿದೆ.

‘ಕಾಮಗಾರಿ ಕುರಿತ ಎಲ್ಲಾ ವರದಿಗಳನ್ನು ಎನ್‌ಎಚ್‌ಎಐಗೆ ಬಿಬಿಎಂಪಿ ಮುಖ್ಯ ಎಂಜಿನಿಯರ್ ಒದಗಿಸಬೇಕು. ವರದಿ ಕೈ ಸೇರಿದ ಬಳಿಕ ಎನ್‌ಎಚ್‌ಎಐ ಕಾಮಗಾರಿ ನಡೆದ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕಾರ್ಯದೇಶದ ಅನ್ವಯ ಕಾಮಗಾರಿ ನಡೆದಿದೆಯೇ? ಗುತ್ತಿಗೆದಾರರ ಕೆಲಸ ತೃಪ್ತಿಕರವಾಗಿದೆಯೇ? ಎಂಬುದನ್ನು ಸ್ವತಂತ್ರವಾಗಿ ಅಧ್ಯಯನ ನಡೆಸಿ ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸಬೇಕು‘ ಎಂದು ನ್ಯಾಯಪೀಠ ಆದೇಶಿಸಿದೆ.

‘ಬಿಬಿಎಂಪಿ ಅಧಿಕಾರಿಗಳು ಅಥವಾ ಗುತ್ತಿಗೆದಾರರಿಂದ ಏನಾದರೂ ಕರ್ತವ್ಯಲೋಪ ಉಂಟಾಗಿದ್ದರೆ, ಅದನ್ನು ವರದಿಯಲ್ಲಿ ಪ್ರತ್ಯೇಕವಾಗಿ ಉಲ್ಲೇಖಿಸಬೇಕು. ನ್ಯಾಯಾಲಯವು ಹೊರಡಿಸಿರುವ ಈ ಆದೇಶವು ಪಾಲಿಕೆ ಕೈಗೊಂಡಿರುವ ಕಾಮಗಾರಿಗೆ ಯಾವುದೇ ಅಡ್ಡಿ ಉಂಟು ಮಾಡುವುದಿಲ್ಲ. ಕಾಮಗಾರಿಗಳು ಮುಂದುವರಿಯಬೇಕು’ ಎಂದು ಇದೇ ವೇಳೆ ಸ್ಪಷ್ಟಪಡಿಸಲಾಗಿದೆ.

ತರಾಟೆ: ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, ಹೈಕೋರ್ಟ್‌ನ ಈ ಹಿಂದಿನ ಆದೇಶಗಳ ಅನುಸಾರ ಕೈಗೊಂಡಿರುವ ಅನುಪಾಲನಾ ವರದಿಯನ್ನು ಸಲ್ಲಿಸಿದರು. ವರದಿ ಪರಿಶೀಲಿಸಿದ ನ್ಯಾಯಪೀಠ, ‘ರಸ್ತೆ ಗುಂಡಿಗಳಿಂದ ಸಾರ್ವಜನಿಕರು ಪ್ರಾಣ ಕಳೆದುಕೊಳ್ಳುತ್ತಿದ್ದು, ನ್ಯಾಯಾಲಯದ ಆದೇಶಗಳನ್ನು ಬಿಬಿಎಂಪಿ ಸೂಕ್ತವಾಗಿ ಜಾರಿಗೊಳಿಸುತ್ತಿಲ್ಲ‘ ಎಂದು ಕಟುವಾಗಿ ತರಾಟೆಗೆ ತೆಗೆದುಕೊಂಡಿತು.

‘ನ್ಯಾಯಾಲಯದ ಆದೇಶಗಳು ಕೇವಲ ಕಾಗದದ ಮೇಲೆ ಮಾತ್ರ ಉಳಿದಿವೆ. ರಸ್ತೆ ಗುಂಡಿ ಮುಚ್ಚುವುದು ಬಿಬಿಎಂಪಿಯ ಸಾಂವಿಧಾನಿಕ ಹೊಣೆ. ಆದರೆ, ಪ್ರತಿ ವರ್ಷ ರಸ್ತೆ ಮುಚ್ಚಲಾಗುತ್ತಿದೆ. ಆದರೂ ರಸ್ತೆ ಗುಂಡಿ ಬೀಳುತ್ತಿವೆ. ಇದರ ಮಧ್ಯೆ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗೆ ಬಿಬಿಎಂಪಿಯೇ ದೃಢೀಕರಣ ನೀಡಿದೆ. ಹಾಗಾದರೆ, ಕಾಮಗಾರಿ ಗುಣಮಟ್ಟದಿಂದ ಕೂಡಿದೆ ಎಂಬುದನ್ನು ಹೇಗೆತಾನೇ ನಂಬಲು ಸಾಧ್ಯ’ ಎಂದು ನ್ಯಾಯಪೀಠ ಕಿಡಿಕಾರಿತು. ವಿಚಾರಣೆಯನ್ನು ಡಿಸೆಂಬರ್ 7ಕ್ಕೆ ಮುಂದೂಡಲಾಗಿದೆ.

ಹೆಸರಘಟ್ಟ ಉಳಿಸಿ ಅಭಿಯಾನಕ್ಕೆ ಭಾರಿ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಹೆಸರಘಟ್ಟ ಉಳಿಸಿ’ ಅಭಿಯಾನಕ್ಕೆ ವಿವಿಧ ಸಂಘಟನೆಗಳು ಮತ್ತು ನಾಗರಿಕರಿಂದ ಭಾರಿ ಬೆಂಬಲ ವ್ಯಕ್ತವಾಗಿದೆ.

ಜೀವ ವೈವಿಧ್ಯದ ತಾಣವಾಗಿರುವ ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಮೀಸಲು ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಒತ್ತಾಯಿಸಿ ವಿವಿಧ ಸಂಘಟನೆಗಳು ಕೆಲವು ದಿನಗಳಿಂದ ಸಹಿ ಅಭಿಯಾನ ಆರಂಭಿಸಿದ್ದವು.

‘ಹೆಸರಘಟ್ಟ ಉಳಿಸಲು ಪರಿಸರ ಪ್ರೇಮಿಗಳು ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದ್ದಾರೆ. ವಿವಿಧ ಸಂಘಟನೆಗಳು, ಸಂಸ್ಥೆಗಳ ಸದಸ್ಯರು ಸೇರಿದಂತೆ 75 ಸಾವಿರಕ್ಕೂ ಹೆಚ್ಚು ಮಂದಿ ಈ ಅಭಿಯಾನಕ್ಕೆ ಸಹಿ ಹಾಕಿದ್ದಾರೆ’ ಎಂದು ವೃಕ್ಷ ಫೌಂಡೇಷನ್ ಅಧ್ಯಕ್ಷ ವಿಜಯ್ ನಿಶಾಂತ್ ತಿಳಿಸಿದ್ದಾರೆ.

‘ಸಿಕಂದರಾಬಾದ್ ಇಸ್ಕಾನ್ ದೇವಸ್ಥಾನದ ಅಧ್ಯಕ್ಷ ಡಾ. ಸಹದೇವ ದಾಸ್ ಸೇರಿ ದೇಶದ ಹಲವೆಡೆಗಳಿಂದಲೂ ನಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರಿನ ಕೊನೆಯ ಹುಲ್ಲುಗಾವಲು ಪ್ರದೇಶ ಹೆಸರಘಟ್ಟ ಪ್ರಾಣಿಗಳು ಮತ್ತು ಮನುಷ್ಯ ಸಂಕುಲಕ್ಕೆ ಪ್ರಯೋಜನಕಾರಿಯಾಗಿದೆ. ಸರ್ಕಾರ ಹೆಸರಘಟ್ಟವನ್ನು ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಬೆಂಗಳೂರು ನವನಿರ್ಮಾಣ ವೇದಿಕೆ, ಕ್ರಾಂತಿಕಾರಿ ಕನ್ನಡಿಗರ ವೇದಿಕೆ, ಗಂಧದ ಗುಡಿ ಬಳಗ, ಕರುನಾಡ ಸೇವಕರು, ಹಲ್ಮಿಡಿ ಕೂಟದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಸಭೆ: 16ನೇ ರಾಜ್ಯ ವನ್ಯಜೀವಿ ಮಂಡಳಿ ಸಭೆ ಗುರುವಾರ ನಡೆಯಲಿದೆ. ಈ ಸಭೆಯಲ್ಲಿ ಹೆಸರಘಟ್ಟ ಕುರಿತು ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ಐದಾರು ತಿಂಗಳಲ್ಲೇ ವರ್ಗಾವಣೆ ಮಾಡುತ್ತಿರುವ ಸರ್ಕಾರ • ವಾರ್ಷಿಕ ಕಾರ್ಯಚಟುವಟಿಕೆಗೆ ತೊಡಕು

ಸಂಸ್ಕೃತಿ ಇಲಾಖೆ: 5 ವರ್ಷದಲ್ಲಿ 9 ನಿರ್ದೇಶಕರು


• ವರುಣ ಹೆಗಡೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ರಾಜ್ಯ ಸರ್ಕಾರವು ಐದಾರು ತಿಂಗಳ ಅವಧಿಯಲ್ಲೇ ವರ್ಗಾವಣೆ ಮಾಡುತ್ತಿದ್ದು, ಐದು ವರ್ಷಗಳಲ್ಲಿ 9 ನಿರ್ದೇಶಕರನ್ನು ಇಲಾಖೆ ಕಂಡಿದೆ.

ಪ್ರಕಾಶ್ ನಿಟ್ಟಾಲಿ ಅವರ ವರ್ಗಾವಣೆ ಬಳಿಕ ಅಧಿಕಾರ ವಹಿಸಿಕೊಂಡ ಕೆ.ಎಂ. ಜಾನಕಿ ಕೇವಲ 22 ದಿನ ಇಲಾಖೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಆ ಸ್ಥಾನಕ್ಕೆ ಮತ್ತೆ ಪ್ರಕಾಶ್ ನಿಟ್ಟಾಲಿ ಅವರನ್ನೇ ವರ್ಗಾವಣೆ ಮಾಡಲಾಗಿದೆ. ಇದರಿಂದಾಗಿ ಇಲಾಖೆಯ ಅಧಿಕಾರಿ ವರ್ಗಕ್ಕೂ ಗೊಂದಲ ಉಂಟಾಗಿದೆ.


ನಾಡಿನ ಭಾಷೆ ಮತ್ತು ಸಾಂಸ್ಕೃತಿಕ ಕ್ಷೇತ್ರವನ್ನು ಸಂರಕ್ಷಿಸಿ, ಸಂವರ್ಧಿಸುವ ಜವಾಬ್ದಾರಿಯನ್ನು ಇಲಾಖೆ ಹೊತ್ತಿದೆ. 1977ರಲ್ಲಿ ಪ್ರತ್ಯೇಕವಾಗಿ ಕಾರ್ಯಾರಂಭಿಸಿದ ಇಲಾಖೆ, ತನ್ನ ಕಾರ್ಯಚಟುವಟಿಕೆಯನ್ನು ವಿಸ್ತರಿಸಿಕೊಂಡಿದೆ. ಜಿಲ್ಲಾ ಮಟ್ಟದಲ್ಲಿ, ವಿಭಾಗ ಮಟ್ಟದಲ್ಲಿ ಕಚೇರಿಗಳನ್ನು ಹೊಂದಿದ್ದು, ಗ್ರಾಮ ಮಟ್ಟದಿಂದ ರಾಜಧಾನಿಯ ಮಟ್ಟದವರೆಗೆ ತನ್ನ ಚಟುವಟಿಕೆಗಳನ್ನು ನಡೆಸುತ್ತಿದೆ. ಈ ಇಲಾಖೆಗೆ ಸರ್ಕಾರವು ಪದೇ ಪದೇ ನಿರ್ದೇಶಕರನ್ನು ಬದಲಾಯಿಸುತ್ತಿರುವುದು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಅಸಮಾಧಾನಕ್ಕೂ ಕಾರಣವಾಗಿದೆ. ಈವರೆಗೆ 51 ನಿರ್ದೇಶಕರನ್ನು ಇಲಾಖೆ ಕಂಡಿದೆ.

ಪ್ರಜಾವಾಣಿ ವಿಶೇಷ



ಸಂಸ್ಕೃತಿ ಇಲಾಖೆ ಭಿನ್ನವಾಗಿದ್ದು, ಇಲ್ಲಿ ನಿಯಮಗಳಿಗಿಂತ ಕಲಾ ಸಂಪ್ರದಾಯ ಪ್ರಾಮುಖ್ಯ ಪಡೆಯುತ್ತದೆ. ಅಧಿಕಾರಿಗಳ ಬದಲಾವಣೆಯಿಂದ ಸಾಂಸ್ಕೃತಿಕ ಚಟುವಟಿಕೆಗೆ ಹಿನ್ನಡೆ ಆಗುತ್ತದೆ

ಶ್ರೀನಿವಾಸ ಜಿ. ಕಪ್ಪಣ್ಣ, ರಂಗಕರ್ಮಿ



ನಾಡಿಗೆ ಒಳ್ಳೆಯ ಹೆಸರು ತಂದುಕೊಡುವ ಸಂಸ್ಕೃತಿ ಇಲಾಖೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಕನಿಷ್ಠ ಎರಡು ವರ್ಷವಾದರೂ ಒಂದೇ ಸ್ಥಾನದಲ್ಲಿ ಇರಿಸಬೇಕು

ವೈ.ಕೆ. ಮುದ್ದುಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಜಿ ನಿರ್ದೇಶಕ

ಇಲಾಖೆಯಡಿ ಸಾಹಿತ್ಯ, ಜಾನಪದ, ನಾಟಕ ಸೇರಿ 13 ಅಕಾಡೆಮಿಗಳು ಕಾರ್ಯನಿರ್ವಹಿಸುತ್ತಿವೆ. ಅದೇ ರೀತಿ, 24 ಟ್ರಸ್ಟ್, ಪ್ರತಿಷ್ಠಾನಗಳು, ನಾಲ್ಕು ಪ್ರಾಧಿಕಾರಗಳು, ರಂಗಾಯಣಗಳು ಹಾಗೂ ಸಂಶೋಧನಾ ಕೇಂದ್ರವೂ ಇಲಾಖೆಯ ಭಾಗವಾಗಿವೆ. ನಿರ್ದೇಶಕರ ಬದಲಾವಣೆಯಿಂದಾಗಿ ಇವುಗಳ ಮುಖ್ಯಸ್ಥರಿಗೆ ವಿವಿಧ ಕಾರ್ಯಯೋಜನೆಗಳ ಬಗ್ಗೆ ಮನವರಿಕೆ ಮಾಡಿಸುವುದು ಸವಾಲಾಗಿ ಪರಿಣಮಿಸಿದೆ. ಅಲ್ಪಾವಧಿಯಲ್ಲೇ ನಿರ್ದೇಶಕರ ಬದಲಾವಣೆಯಿಂದ ಇಲಾಖೆಯ ವಾರ್ಷಿಕ ಕಾರ್ಯಚಟುವಟಿಕೆಗೆ ಹಿನ್ನಡೆಯಾಗುವ ಬಗ್ಗೆ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

‘ಇಲಾಖೆಯ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಕಾರ್ಯಚಟುವಟಿಕೆ ಬಗ್ಗೆ ತಿಳಿಯಲು ಕೆಲ ತಿಂಗಳು ಬೇಕಾಗುತ್ತದೆ. ಎರಡರಿಂದ ಮೂರು ವರ್ಷಗಳು ಒಂದೇ ಸ್ಥಾನದಲ್ಲಿ ಇದ್ದಾಗ ಮಾತ್ರ ಕ್ರಿಯಾಶೀಲರಾಗಿ ಕೆಲಸ ಮಾಡಲು ಸಾಧ್ಯ. ಅಲ್ಪಾವಧಿಗೆ ನಿರ್ದೇಶಕರನ್ನು ಬದಲಾಯಿಸುತ್ತಿರುವ ಸರ್ಕಾರದ ಕ್ರಮ ತಿಳಿಯದಾಗಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಇಲಾಖೆ ಕಡೆಗಣನೆ: ಬರ, ಪ್ರವಾಹ, ಕೋವಿಡ್ ಸೇರಿ ವಿವಿಧ ಕಾರಣಕ್ಕೆ ಸರ್ಕಾರವು ವರ್ಷದಿಂದ ವರ್ಷಕ್ಕೆ ಇಲಾಖೆಗೆ ನೀಡುವ ವಾರ್ಷಿಕ ಅನುದಾನವನ್ನು ಕಡಿತ ಮಾಡುತ್ತಿದೆ. ಇದರಿಂದಾಗಿ ಸಾಂಸ್ಕೃತಿಕ ಚಟುವಟಿಕೆಗಳೂ ಕುಂಠಿತವಾಗುತ್ತಿವೆ. ಧನಸಹಾಯದಂತಹ ಯೋಜನೆಗಳಿಗೆ ಅನುದಾನದ ಕೊರತೆ ಎದುರಾಗುತ್ತಿದೆ. 2018ರ ನ.30ರಂದು ಎನ್.ಆರ್. ವಿಶುಕುಮಾರ್ ಅವರ ನಿವೃತ್ತಿಯಿಂದ ಇಲಾಖೆಯ ನಿರ್ದೇಶಕ ಸ್ಥಾನ ತೆರವಾಗಿತ್ತು. 2019ರ ಜ.21ರ ವರೆಗೂ ಇಲಾಖೆಗೆ ಪೂರ್ಣಾವಧಿ ನಿರ್ದೇಶಕರು ಇರಲಿಲ್ಲ. ಬಲವಂತರಾವ್ ಪಾಟೀಲ ಅವರೇ ಪ್ರಭಾರ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು.

ನಿರ್ದೇಶಕ ಸ್ಥಾನದಲ್ಲಿದ್ದವರಲ್ಲಿ ಕೆಲವರು ಅನುದಾನದ ಕೊರತೆ, ಮುಂಬಡ್ತಿ ಸೇರಿ ವಿವಿಧ ಕಾರಣಕ್ಕೆ ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ತಾಳಿ, ವರ್ಗಾವಣೆಗೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದಾರೆ. ಕೆಎಎಸ್ ಅಧಿಕಾರಿಗಳಾಗಿದ್ದ ಎಸ್.ರಂಗಪ್ಪ ಹಾಗೂ ಪ್ರಕಾಶ್ ನಿಟ್ಟಾಲಿ ಅವರು ನಿರ್ದೇಶಕರಾಗಿದ್ದ ಅವಧಿಯಲ್ಲಿಯೇ ಐಎಎಸ್‌ಗೆ ಬಡ್ತಿ ಹೊಂದಿದ್ದರು. ಬಳಿಕ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿತ್ತು.

ವರ್ಷ ಪೂರ್ಣಗೊಳಿಸದ ನಿರ್ದೇಶಕರು

ಇಲಾಖೆಯ 41ನೇ ನಿರ್ದೇಶಕರಾಗಿ ನೇಮಕಗೊಂಡಿದ್ದ ಕೆ.ಎ. ದಯಾನಂದ, ಸುಮಾರು ಮೂರು ವರ್ಷ ಕಾರ್ಯನಿರ್ವಹಿಸಿದ್ದರು. ಬಳಿಕ ಅಧಿಕಾರವಹಿಸಿಕೊಂಡ ಎಂ.ಎಸ್. ಅರ್ಚನಾ, ಎನ್.ಆರ್. ವಿಶುಕುಮಾರ್, ಕೆ.ಎಂ. ಜಾನಕಿ, ಪ್ರಕಾಶ್ ನಿಟ್ಟಾಲಿ ಅವರು ನಿರ್ದೇಶಕರಾಗಿ ವರ್ಷ ಪೂರೈಸಿಲ್ಲ. ಎಸ್. ರಂಗಪ್ಪ ಅವರು ಎರಡು ವರ್ಷ ನಿರ್ದೇಶಕರಾಗಿದ್ದರು. ನಾಲ್ಕು ವರ್ಷದ ಅವಧಿಯಲ್ಲಿ ಜಾನಕಿ, ರಂಗಪ್ಪ ಹಾಗೂ ನಿಟ್ಟಾಲಿ ಅವರನ್ನು ತಲಾ ಎರಡು ಬಾರಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಪಿಎಸ್‌ಐ ಅಕ್ರಮ ನೇಮಕ; ಆರೋಪಿ ವಶಕ್ಕೆ



ಸುಪ್ರಿಯಾ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕ ಕುರಿತು ತನಿಖೆ ಕೈಗೊಂಡಿರುವ ಸಿಐಡಿ ಅಧಿಕಾರಿಗಳ ತಂಡವು ಬುಧವಾರ ಜೇವರ್ಗಿ ತಾಲ್ಲೂಕಿನ ಸುಪ್ರಿಯಾ ಮಲ್ಲಿಕಾರ್ಜುನ ಹುಂಡೇಕರ್ (26) ಎಂಬುವರನ್ನು ವಶಕ್ಕೆ ಪಡೆದಿದೆ.

ಪರೀಕ್ಷಾ ಕೇಂದ್ರದಲ್ಲಿ ಬ್ಲೂಟೂತ್ ಡಿವೈಸ್ ಬಳಸಿದ ಪ್ರಕರಣದಡಿ ಸುಪ್ರಿಯಾ ಅವರನ್ನು ಸಿಐಡಿ ತನಿಖಾಧಿಕಾರಿಗಳಾದ ಶಂಕರಗೌಡ ಪಾಟೀಲ, ಪ್ರಕಾಶ ರಾಠೋಡ ಅವರು ವಶಕ್ಕೆ ಪಡೆದಿದ್ದಾರೆ.

‘ಸರ್ಕಾರಿ ಪದವಿ ಕಾಲೇಜಿನಲ್ಲಿ ಬ್ಲೂಟೂತ್ ಡಿವೈಸ್ ಬಳಸಿ ಪಿಎಸ್‌ಐ ನೇಮಕ ಪರೀಕ್ಷೆ ಬರೆದ ಆರೋಪದಡಿ ದೂರು ದಾಖಲಾಗಿತ್ತು. ಈ ಬಗ್ಗೆ ನಡೆಸುತ್ತಿದ್ದ ತನಿಖೆಯಲ್ಲಿ ಸುಪ್ರಿಯಾ ಅವರ ಮೇಲಿದ್ದ ಸಂಶಯ ಖಚಿತವಾದ ಕಾರಣ ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದೇವೆ’ ಎಂದು ಸಿಐಡಿ ತನಿಖಾಧಿಕಾರಿ ಶಂಕರಗೌಡ ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

ಉದ್ಯಮಿ ಮನೆಯಲ್ಲಿ ಐ.ಟಿ ಶೋಧ

ಬೆಂಗಳೂರು: ತೆರಿಗೆ ವಂಚನೆ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯದ ಸಚಿವರೊಬ್ಬರ ಸಂಬಂಧಿಯಾಗಿರುವ ರಿಯಲ್ ಎಸ್ಟೇಟ್ ಉದ್ಯಮಿ ಚಂದ್ರಶೇಖರ್ ಎಂಬುವವರ ಮನೆಯ ಮೇಲೆ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ಬುಧವಾರ ದಾಳಿ ಮಾಡಿ ಶೋಧ ನಡೆಸಿದ್ದಾರೆ.

ಕಗ್ಗದಾಸಪುರದಲ್ಲಿರುವ ಚಂದ್ರಶೇಖರ್ ಮನೆಯ ಮೇಲೆ ದಾಳಿ ಮಾಡಿದ ಐ.ಟಿ ಅಧಿಕಾರಿಗಳು, ಹಲವು ಗಂಟೆಗಳ ಕಾಲ ಶೋಧ ನಡೆಸಿದರು. ರಿಯಲ್ ಎಸ್ಟೇಟ್ ವಹಿವಾಟು, ಬ್ಯಾಂಕ್‌ನಲ್ಲಿ ನಡೆಸಿರುವ ಹಣಕಾಸು ವಹಿವಾಟು, ತೆರಿಗೆ ಪಾವತಿಗೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.

ಕಾರು ಬಾವಿಗೆ ಬಿದ್ದು ತಂದೆ, ಮಗ ಸಾವು

ಕಣ್ಣೂರು, ಕೇರಳ (ಪಿಟಿಐ): ಮಗನಿಗೆ ಕಾರು ಚಾಲನಾ ತರಬೇತಿ ನೀಡುತ್ತಿದ್ದ ವೇಳೆ ಕಾರು ನಿಯಂತ್ರಣ ತಪ್ಪಿ ಮನೆಯ ಬಾವಿಗೆ ಬಿದ್ದುದರಿಂದ ತಂದೆ ಹಾಗೂ ಮಗ ಮೃತಪಟ್ಟಿರುವ ಘಟನೆ ಕೇರಳದ ಕಣ್ಣೂರಿನ ನೆಲ್ಲಿಕುನ್ನು ಗ್ರಾಮದಲ್ಲಿ ನಡೆದಿದೆ.

ಮನೆಯ ಬಳಿ ನಿಲ್ಲಿಸಿದ್ದ ಕಾರಿನಲ್ಲಿ ತರಬೇತಿ ನೀಡುತ್ತಿದ್ದ ವೇಳೆ ಈ ಘಟನೆ ನಡೆದಿದ್ದು, ತಂದೆ ಮ್ಯಾಥುಕುಟ್ಟಿ (55) ಸ್ಥಳದಲ್ಲೇ ಮೃತಪಟ್ಟಿದ್ದು, ಪುತ್ರ ವೆನ್ಸ್ ಮ್ಯಾಥ್ಯೂಗೆ (18) ಹೆಚ್ಚಿನ ಗಾಯಗಳಾಗಿದ್ದು ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಸಿ, ಎಸ್‌ಟಿ ನೌಕರರ ಸಂಘದಿಂದ ಸಿಎಸ್‌ಗೆ ಮನವಿ

‘ರೋಸ್ಟರ್’ನಲ್ಲಿ ಹುದ್ದೆ ‘ಮೀಸಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗೆ (ಎಸ್‌ಸಿ) ಶೇ 17, ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಶೇ 7 ಮೀಸಲಾತಿ ನಿಗದಿಪಡಿಸುವ ಸಂದರ್ಭದಲ್ಲಿ, 99 ಹುದ್ದೆಗಳ ಮೂರು ವರ್ತುಲಗಳ ರೋಸ್ಟರ್‌ನಲ್ಲಿ ಮೀಸಲಾತಿ ಹುದ್ದೆಗಳನ್ನು ನಿಗದಿಪಡಿಸುವ ಕುರಿತಂತೆ ಮುಖ್ಯ ಕಾರ್ಯದರ್ಶಿ (ಸಿಎಸ್) ವಂದಿತಾ ಶರ್ಮಾ ಅವರಿಗೆ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ ಬುಧವಾರ ಮನವಿ ಸಲ್ಲಿಸಿದೆ.

‘ಒಟ್ಟು 99 ಹುದ್ದೆಗಳಲ್ಲಿ 33 ಹುದ್ದೆಗಳ ಮೊದಲ ಎರಡು ವರ್ತುಲದಲ್ಲಿ ಪರಿಶಿಷ್ಟ ಜಾತಿಗೆ (ಎಸ್‌ಸಿ) 1, 7, 14, 21, 27, 33ನೇ ಹುದ್ದೆ (ಒಟ್ಟು 12) ಹಾಗೂ ಮೂರನೇ ವರ್ತುಲದಲ್ಲಿ 1, 7, 14, 21, 27ನೇ ಹುದ್ದೆ ನಿಗದಿಪಡಿಸಿದರೆ ಹೆಚ್ಚಳಗೊಳಿಸಿದ ಮೀಸಲಾತಿಯಂತೆ 17 ಹುದ್ದೆಗಳನ್ನು ನೀಡಿದಂತಾಗುತ್ತದೆ. ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಮೊದಲ ಎರಡು ವರ್ತುಲದಲ್ಲಿ 2,9,16ನೇ ಹುದ್ದೆ (ಒಟ್ಟು 6) ಹಾಗೂ ಮೂರನೇ ವರ್ತುಲದಲ್ಲಿ 2ನೇ ಹುದ್ದೆಯನ್ನು ನಿಗದಿಪಡಿಸಿದರೆ 7 ಹುದ್ದೆ ನೀಡಿದಂತಾಗುತ್ತದೆ’ ಎಂದು ಮನವಿಯಲ್ಲಿ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ವಿವರಿಸಿದ್ದಾರೆ.

‘ಪರಿಶಿಷ್ಟ ಜಾತಿಯ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಆ ಹುದ್ದೆಗಳ ಸಂಖ್ಯೆಗೆ ಸೀಮಿತಗೊಳಿಸಿ ಅರ್ಹ ನೌಕರರ ಲಭ್ಯತೆಯನ್ನು ಪರಿಗಣಿಸಿ, ಒಂದು ರೋಸ್ಟರ್ ವರ್ತುಲದಲ್ಲಿ ಗರಿಷ್ಠ 10 ಹೆಚ್ಚುವರಿ ಹುದ್ದೆಗಳನ್ನು ಪರಿಗಣಿಸಿ ಬಡ್ತಿ ನೀಡಬೇಕು. ಪರಿಶಿಷ್ಟ ಪಂಗಡದ ಬ್ಯಾಕ್ ಲಾಗ್ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಗರಿಷ್ಠ ಮೂರು ಹೆಚ್ಚುವರಿ ಹುದ್ದೆಗಳನ್ನು ಪರಿಗಣಿಸಿ ಬಡ್ತಿ ನೀಡಬೇಕು. ಆ ಮೂಲಕ, ಎಸ್‌ಸಿ ಮತ್ತು ಎಸ್‌ಟಿ ಸಮುದಾಯಕ್ಕೆ ಹೆಚ್ಚಳಗೊಳಿಸಿದ ಮೀಸಲಾತಿ ಪ್ರಮಾಣವನ್ನು ಯಾವುದೇ ಗೊಂದಲ ಇಲ್ಲದೆ ಪರಿಹರಿಸಬಹುದು’ ಎಂದೂ ಅವರು ತಿಳಿಸಿದ್ದಾರೆ.



ಎಸ್‌ಸಿ, ಎಸ್‌ಟಿ ವರ್ಗಕ್ಕೆ ಮೀಸಲಾತಿ ಹೆಚ್ಚಳಗೊಳಿಸಿದ ಹುದ್ದೆಗಳನ್ನು ರೋಸ್ಟರ್‌ನಲ್ಲಿ ಯಾವುದೇ ಗೊಂದಲ ಇಲ್ಲದೆ ಹಂಚಿಕೆ ಮಾಡುವ ಕುರಿತಂತೆ ಸರ್ಕಾರಕ್ಕೆ ನಾವು ಮನವಿ ಸಲ್ಲಿಸಿದ್ದೇವೆ

ಡಿ. ಚಂದ್ರಶೇಖರಯ್ಯ, ಅಧ್ಯಕ್ಷ, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ

ಸುದ್ದಿ 2 ನಿಮಿಷ

ಶಾಸಕ ತಿಪ್ಪಾರೆಡ್ಡಿ ಹನಿಟ್ರ್ಯಾಪ್‌ಗೆ ಯುವತಿ ಯತ್ನ: ಸೈಬರ್ ಠಾಣೆಗೆ ದೂರು

ಚಿತ್ರದುರ್ಗ: ಬಿಜೆಪಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರಿಗೆ ವಿಡಿಯೊ ಕರೆ ಮಾಡಿದ ಯುವತಿಯೊಬ್ಬಳು ಹನಿಟ್ರ್ಯಾಪ್‌ಗೆ ಯತ್ನಿಸಿದ್ದು, ಸೈಬರ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಶಾಸಕರ ಮೊಬೈಲ್ ಫೋನ್‌ಗೆ ವಿಡಿಯೊ ಕರೆ ಮಾಡಿದ ಯುವತಿ, ಅಶ್ಲೀಲವಾಗಿ ವರ್ತಿಸಿದ್ದಾರೆ. ಇದರಿಂದ ಅನುಮಾನಗೊಂಡ ಶಾಸಕರು ಕರೆ ಕಡಿತಗೊಳಿಸಿದ್ದಾರೆ. ಪದೇಪದೇ ಕರೆ ಮಾಡಿದ ಬಳಿಕ ವಾಟ್ಸ್‌ಆ್ಯಪ್‌ಗೆ ಅಶ್ಲೀಲ ವಿಡಿಯೊಗಳನ್ನು, ನಗ್ನ ಫೋಟೊಗಳನ್ನು ಕಳುಹಿಸಿದ್ದಾರೆ.

‘ಅ. 31ರಂದು ಬೆಳಿಗ್ಗೆ ವಿಡಿಯೊ ಕರೆ ಮಾಡಿದ ಯುವತಿ ಸರಿಯಾಗಿ ಮಾತನಾಡಲಿಲ್ಲ. ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ಪ್ರಶ್ನೆ ಮಾಡಿದರೂ ಉತ್ತರಿಸಲಿಲ್ಲ. ಅನುಮಾನಗೊಂಡು ಕರೆ ಕಡಿತಗೊಳಿಸಿದೆ. ಮತ್ತೆ ಕರೆ ಮಾಡಿದಾಗಲೂ ಸ್ಪಂದಿಸಲಿಲ್ಲ. ಆ ಬಳಿಕ ವಾಟ್ಸ್‌ಆ್ಯಪ್‌ಗೆ ಅಶ್ಲೀಲ ಚಿತ್ರ, ವಿಡಿಯೊ ಬಂದವು. ತಕ್ಷಣ ಆ ಮೊಬೈಲ್ ಸಂಖ್ಯೆಯನ್ನು ಬ್ಲಾಕ್ ಮಾಡಿದೆ’ ಎಂದು ತಿಪ್ಪಾರೆಡ್ಡಿ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದ್ದಾರೆ.

ಶಾಸಕರು ಈ ವಿಚಾರವನ್ನು ಪೊಲೀಸರ ಗಮನಕ್ಕೆ ತಂದಿದ್ದಾರೆ. ಕಾರ್ಯಪ್ರವೃತ್ತರಾದ ಪೊಲೀಸರು ಐಟಿ ಕಾಯ್ದೆಯ 66 (ಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ವಿಡಿಯೊ ಕರೆ ಮಾಡಿದ ಯುವತಿಯ ಮೊಬೈಲ್ ಫೋನ್ ನೆಟ್‌ವರ್ಕ್ ಒಡಿಶಾದಲ್ಲಿ ಪತ್ತೆಯಾಗಿದೆ.

ಪೊಲೀಸ್ ತಂಡ ರಚನೆ: ಸೈಬರ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿದ್ದು, ತನಿಖೆ ಆರಂಭವಾಗಿದೆ ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಮಾಹಿತಿ ನೀಡಿದರು.



ಕೆರೆಯಲ್ಲಿ ಮುಳುಗಿ ನಾಲ್ವರ ಸಾವು

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಕೆರೆಯಲ್ಲಿ ಬಿದ್ದ ಸಹೋದರನ ರಕ್ಷಣೆಗೆ ಹೋಗಿದ್ದ ಅಕ್ಕ, ಸಹೋದರ ಸೇರಿದಂತೆ ನಾಲ್ವರು ನೀರಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಚನ್ನಹಳ್ಳಿ ತಾಂಡದಲ್ಲಿ ಬುಧವಾರ ನಡೆದಿದೆ.

ನಂದಿಬೇವೂರು ತಾಂಡದ ಅಶ್ವಿನಿ (17), ಅವರ ಸಹೋದರ ಅಭಿಷೇಕ (14), ಚನ್ನಹಳ್ಳಿ ತಾಂಡದ ಕಾವ್ಯ (19) ಮತ್ತು ತುಂಬಿನಕೇರಿ ತಾಂಡದ ಅಪೂರ್ವ(14) ಮೃತರು. ಸ್ಥಳೀಯ ಈಜುಪಟುಗಳು ನಾಲ್ಕೈದು ಗಂಟೆ ಶೋಧ ನಡೆಸಿ, ಮೃತದೇಹ ಹೊರತೆಗೆದಿದ್ದಾರೆ.

ಸಂಬಂಧಿಕರ ಮನೆಗೆ ಬಂದಿದ್ದ ಮಕ್ಕಳು ಕೆರೆ ನೋಡಲು ಹೋಗಿದ್ದರು. ಈ ವೇಳೆ ಅಭಿಷೇಕ ಆಯತಪ್ಪಿ ಕೆರೆಗೆ ಬಿದ್ದಿದ್ದಾರೆ. ಇದನ್ನು ಗಮನಿಸಿದ ಅವರ ಸಹೋದರಿ ಅಶ್ವಿನಿ ಹಾಗೂ ಮತ್ತಿಬ್ಬರು ಧಾವಿಸಿದ್ದಾರೆ. ಎಲ್ಲರೂ ನೀರಲ್ಲಿ ಮುಳುಗಿದ್ದಾರೆ. ವಿಷಯ ತಿಳಿದು ಕೆರೆಯ ದಂಡೆಯಲ್ಲಿ ನೂರಾರು ಜನ ಸೇರಿದ್ದರು. ಮೃತರ ಪೋಷಕರು, ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

ದಿನವಿಡಿ ಮಳೆ: ಮಲೆನಾಡಾದ ಕೋಲಾರ!

ಕೋಲಾರ: ಜಿಲ್ಲೆ ಹಾಗೂ ನಗರದಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆ ಮತ್ತು ಮೋಡ ಮುಸುಕಿದ ವಾತಾವರಣದಿಂದಾಗಿ ಬಯಲುಸೀಮೆಯು ಮಲೆನಾಡಿನಂತಾಗಿದೆ.

ಬುಧವಾರ ದಿನವಿಡೀ ಮಳೆಯಾಗಿದ್ದು, ಬೆಳಿಗ್ಗಿನಿಂದಲೇ ಮೋಡ ಕವಿದ ವಾತಾವರಣವಿತ್ತು. ನಗರ ಸೇರಿದಂತೆ ಗ್ರಾಮಾಂತರ ಪ್ರದೇಶದ ಬಹುತೇಕ ರಸ್ತೆಗಳು ಜಲಾವೃತಗೊಂಡಿವೆ. ಬಂಗಾರಪೇಟೆ ತಾಲ್ಲೂಕಿನ ಮಾವಳ್ಳಿಯಲ್ಲಿ 3 ಸೆಂ.ಮೀ ಮಳೆಯಾಗಿದೆ.

ಜಿಲ್ಲೆಯಲ್ಲಿ ಜನವರಿ 1ರಿಂದ ನ. 2ರವರೆಗೆ ಒಟ್ಟು 107 ಸೆಂ.ಮೀ (1,076 ಮಿ.ಮೀ.) ಮಳೆಯಾಗಿದೆ. ವಾಡಿಕೆ ಪ್ರಕಾರ ಜಿಲ್ಲೆಯ ಇಲ್ಲಿವರೆಗಿನ ವಾಡಿಕೆ ಮಳೆ 66 ಸೆಂ.ಮೀ (660 ಮಿ.ಮೀ.). ಶೇ 63ರಷ್ಟು ಹೆಚ್ಚುವರಿ ಮಳೆಯಾಗಿದೆ.

ಜಿಟಿಜಿಟಿ ಮಳೆ ಹಾಗೂ ಮೋಡ ಕವಿದ ವಾತಾವರಣದಿಂದ ಶ್ರೀನಿವಾಸಪುರ ಮತ್ತು ಕೋಲಾರ ತಾಲ್ಲೂಕು ಸೇರಿದಂತೆ ಜಿಲ್ಲೆಯ ವಿವಿಧೆಡೆ ತೋಟಗಾರಿಕೆ ಬೆಳೆಗಳು ಜಮೀನಿನಲ್ಲಿಯೇ ಕೊಳೆಯುತ್ತಿವೆ.

ಕೊಡಗಿನಲ್ಲೂ ಮಳೆ: ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ ಬುಧವಾರ ಬಿರುಸಿನಿಂದ ಮಳೆ ಸುರಿದಿದೆ. ಶನಿವಾರಸಂತೆ ಭಾಗದಲ್ಲೂ ಉತ್ತಮ ಮಳೆಯಾಗಿದೆ.

₹ 7.6 ಲಕ್ಷ ಕೋಟಿ ಹೂಡಿಕೆ

ಒಂದನೇ ಪುಟದಿಂದ...

₹ 5.58 ಲಕ್ಷ ಕೋಟಿ ಹೂಡಿಕೆಗೆ ಸಂಬಂಧಿಸಿದ ವಲಯ ಹಾಗೂ ಕಂಪನಿಗಳ ವಿವರಗಳನ್ನು ಪ್ರಧಾನಿ ಭಾಷಣದ ನಂತರದಲ್ಲಿ, ಉದ್ಘಾಟನಾ ಸಮಾರಂಭದಲ್ಲಿಯೇ ಪ್ರಕಟಿಸಲಾಯಿತು. ಸಂಜೆ ಹೊತ್ತಿಗೆ ಸುದ್ದಿಗೋಷ್ಠಿ ನಡೆಸಿದ ಸಚಿವ ಮುರುಗೇಶ ನಿರಾಣಿ, ಒಪ್ಪಂದದ ಒಟ್ಟು ಮೊತ್ತ ₹7.6 ಲಕ್ಷ ಕೋಟಿಗೆ ಮುಟ್ಟಿದೆ ಎಂದು ವಿವರಿಸಿದರು.

ಬುಧವಾರ ಅಂತಿಮಗೊಂಡ ಒಪ್ಪಂದಗಳ ಪ್ರಕಾರ ಹೆಚ್ಚಿನ ಪ್ರಮಾಣದ ಹೂಡಿಕೆಯು ಗ್ರೀನ್ ಹೈಡ್ರೋಜನ್ (ಇದನ್ನು ಇಂಧನವಾಗಿ ಬಳಸಲಾಗುತ್ತದೆ) ವಲಯದಲ್ಲಿ ಆಗಲಿದೆ. ಅಲ್ಲದೆ, ನವೀಕರಿಸಬಹುದಾದ ಇಂಧನ ವಲಯದಲ್ಲಿ ಕೂಡ ವಿವಿಧ ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ಹಣ ತೊಡಗಿಸಲಿವೆ.

ಮುಂದಿನ ಏಳು ವರ್ಷಗಳಲ್ಲಿ ಒಟ್ಟು ₹ 1 ಲಕ್ಷ ಕೋಟಿ ಹಣವನ್ನು ಅದಾನಿ ಸಮೂಹವು ರಾಜ್ಯದಲ್ಲಿ ಹೂಡಿಕೆ ಮಾಡಲಿದೆ ಎಂದು ಕರಣ್ ಅದಾನಿ ತಿಳಿಸಿದರು.

ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ವಲಯದಲ್ಲಿ ಸಮೂಹವು ಹೆಚ್ಚಿನ ಹೂಡಿಕೆ ಮಾಡಲಿದೆ. ರಾಜ್ಯದ ಸಿಮೆಂಟ್ ತಯಾರಿಕಾ ವಲಯದಲ್ಲಿ ಸಮೂಹವು ವ್ಯಾಪ್ತಿ ವಿಸ್ತರಿಸಿಕೊಳ್ಳಲಿದೆ. ಮಂಗಳೂರು ವಿಮಾನ ನಿಲ್ದಾಣದಲ್ಲಿ ಚಟುವಟಿಕೆ ಹೆಚ್ಚಿಸಲಾಗುವುದು. ಕರಾವಳಿ ಭಾಗದಲ್ಲಿ ಅದಾನಿ ವಿಲ್ಮರ್ ಕಂಪನಿಯು ತನ್ನ ವಹಿವಾಟು ವಿಸ್ತರಿಸಲಿದೆ ಎಂದು ಅವರು ವಿವರ ನೀಡಿದರು.

‘ನಾವು ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಒಟ್ಟು ₹ 50 ಸಾವಿರ ಕೋಟಿ ಹೂಡಿಕೆ ಮಾಡಲಿದ್ದೇವೆ. ಈ ಮೊತ್ತದಲ್ಲಿ ಹೆಚ್ಚಿನ ಪಾಲು ಕರ್ನಾಟಕದಲ್ಲಿ ಹೂಡಿಕೆ ಆಗಲಿದೆ’ ಎಂದು ಸ್ಟರ್ಲೈಟ್ ಪವರ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಪ್ರತೀಕ್ ಅಗರ್ವಾಲ್ ಹೇಳಿದರು.

ರಾಜ್ಯದಲ್ಲಿ ಮುಂದಿನ ಐದು ವರ್ಷಗಳಲ್ಲಿ ಒಟ್ಟು ₹ 1 ಲಕ್ಷ ಕೋಟಿಯಷ್ಟು ಹೂಡಿಕೆ ಮಾಡುವ ಆಲೋಚನೆ ಇರುವುದಾಗಿ ಸಜ್ಜನ್ ಜಿಂದಾಲ್ ಹೇಳಿದರು. ಖನಿಜಗಳ ಹರಾಜಿನ ಬಗ್ಗೆ ಸರ್ಕಾರ ಪರಿಶೀಲಿಸಬೇಕು ಎಂದು ಅವರು ಮನವಿ ಮಾಡಿದರು. ಕಂಪನಿಯು ಉಕ್ಕು ಉತ್ಪಾದನಾ ಘಟಕ, ನವೀಕರಿಸಬಹುದಾದ ಇಂಧನ ಹಾಗೂ ಬಂದರು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವ ಆಲೋಚನೆ ಹೊಂದಿದೆ.

ಉದ್ಯೋಗ ಸೃಜಿಸಿದವರಿಗೆ ಹೆಚ್ಚು ಉತ್ತೇಜನ: ಸಿ.ಎಂ ಬೊಮ್ಮಾಯಿ

ಒಂದನೇ ಪುಟದಿಂದ...

‘ರಾಜ್ಯದಲ್ಲಿ ಉದ್ಯೋಗ ಸೃಜನೆಗೆ ಪ್ರೋತ್ಸಾಹ ನೀಡುವುದಕ್ಕಾಗಿಯೇ ನೀತಿಯನ್ನು ಜಾರಿಗೊಳಿಸಲಾಗಿದೆ. ಹೂಡಿಕೆದಾರರಿಗೆ ಈಗ ಇರುವ ಉತ್ತೇಜನ, ವಿನಾಯ್ತಿಗಳಲ್ಲಿ ಯಾವು ದನ್ನೂ ಕಡಿತಗೊಳಿಸುವುದಿಲ್ಲ. ಅದರೆ, ಹೆಚ್ಚಿನ ಉದ್ಯೋಗ ಸೃಷ್ಟಿಗೆ ಪೂರಕವಾಗಿ ಸರ್ಕಾರದ ಕಡೆಯಿಂದ ಹೆಚ್ಚು ಪ್ರೋತ್ಸಾಹ ದೊರೆಯಲಿದೆ’ ಎಂದರು.

ಸಮ್ಮೇಳನದಲ್ಲಿ ನಡೆಯುವ ಹೂಡಿಕೆ ಒಪ್ಪಂದಗಳ ಅನುಷ್ಠಾನಕ್ಕೆ ಅಗತ್ಯವಿರುವ ಎಲ್ಲ ಅನುಮತಿಗಳನ್ನು ಮೂರು ತಿಂಗಳೊಳಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಲಿದೆ. ಈ ಒಪ್ಪಂದಗಳು ಕಾಗದದ ಮೇಲಷ್ಟೆ ಉಳಿಯಬಾರದು. ಹೂಡಿಕೆದಾರರು ಕೂಡ ಗಂಭೀರತೆಯಿಂದ ಯೋಜನೆಗಳ ಅನುಷ್ಠಾನಕ್ಕೆ ಕೆಲಸ ಮಾಡಬೇಕು ಎಂದು ಹೇಳಿದರು.

2023ರ ಮೇ ತಿಂಗಳಿನಲ್ಲಿ ಚುನಾವಣೆ ನಡೆಯಲಿದೆ. ರಾಜ್ಯದಲ್ಲಿ ಮತ್ತೆ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬರಲಿದೆ. 2025ರ ಜನವರಿಯಲ್ಲಿ ಮುಂದಿನ ಜಾಗತಿಕ ಹೂಡಿಕೆದಾರರ ಸಮ್ಮೇಳನ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಪ್ರಕಟಿಸಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಕೇಂದ್ರ ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ರಾಜ್ಯದ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಣ್ಣ ಕೈಗಾರಿಕಾ ಸಚಿವ ಎಂ.ಟಿ.ಬಿ. ನಾಗರಾಜ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ, ಕೈಗಾರಿಕಾ ಆಯುಕ್ತೆ ಗುಂಜನ್ ಕೃಷ್ಣ, ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉಪಸ್ಥಿತರಿದ್ದರು.

ಬ್ರ್ಯಾಂಡ್ ಬೆಂಗಳೂರಿಗೆ ಶ್ಲಾಘನೆ

‘ಪ್ರತಿಭೆ ಮತ್ತು ತಂತ್ರಜ್ಞಾನದ ಕುರಿತು ಚರ್ಚಿಸುವಾಗಲೆಲ್ಲ ‘ಬ್ರ್ಯಾಂಡ್ ಬೆಂಗಳೂರು’ ಹೆಸರು ಮುಂಚೂಣಿಗೆ ಬರುತ್ತದೆ. ಬೆಂಗಳೂರಿನ ಹೆಸರು ಭಾರತದಲ್ಲಿ ಮಾತ್ರವಲ್ಲ ಇಡೀ ಜಗತ್ತಿನ ಗಮನವನ್ನೇ ಸೆಳೆಯುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದರು.
ಭಾಷಣ ಆರಂಭಿಸುವಾಗಲೇ ಕನ್ನಡಿಗರಿಗೆ ಕರ್ನಾಟಕ ರಾಜ್ಯೋತ್ಸವದ ಶುಭಾಶಯ ಹೇಳಿದ ಪ್ರಧಾನಿ, ‘ಕರ್ನಾಟಕವು ಪರಂಪರೆ, ತಂತ್ರಜ್ಞಾನ, ಪರಿಸರ, ಸಂಸ್ಕೃತಿ ಎಲ್ಲವೂ ಮೇಳೈಸಿರುವ ಸುಂದರ ನೆಲ’ ಎಂದರು.

ಕರ್ನಾಟಕ ಈಗ ಜಾಗತಿಕ ಸ್ಪರ್ಧಿ: ಪ್ರಧಾನಿ ಮೋದಿ

ಒಂದನೇ ಪುಟದಿಂದ...

ದೇಶದ 500 ಫಾರ್ಚ್ಯೂನ್ ಕಂಪನಿಗಳಲ್ಲಿ 400 ಕರ್ನಾಟಕದಲ್ಲಿವೆ. ದೇಶದಲ್ಲಿ ಬೃಹತ್ ಪ್ರಮಾಣದ ವಹಿವಾಟು ನಡೆಸುವ 100 ನವೋದ್ಯಮಗಳಲ್ಲಿ (ಯೂನಿಕಾರ್ನ್) 40 ಕರ್ನಾಟಕದ ಒಳಗಿವೆ. ‘ಡಬ್ಬಲ್ ಎಂಜಿನ್’ ಸರ್ಕಾರದ ಆಡಳಿತದಲ್ಲಿ ಕರ್ನಾಟಕದಲ್ಲಿ ಎಲ್ಲವೂ ಅತ್ಯಂತ ವೇಗವಾಗಿ ನಡೆಯುತ್ತಿದೆ. ಹೀಗಾಗಿ ಜಗತ್ತಿನ ಹೂಡಿಕೆದಾರರೆಲ್ಲರೂ ಈ ರಾಜ್ಯದತ್ತ ಆಸಕ್ತಿ ತೋರುತ್ತಿದ್ದಾರೆ ಎಂದು ತಿಳಿಸಿದರು.

ಈ ಹೂಡಿಕೆದಾರರ ಸಮ್ಮೇಳನವು ಸ್ಪರ್ಧಾತ್ಮಕತೆ ಮತ್ತು ಸಹಕಾರ ಒಕ್ಕೂಟ ವ್ಯವಸ್ಥೆಯ ಮಿಶ್ರಣದ ಅತ್ಯುತ್ತಮ ಮಾದರಿ. ಹಲವು ರಾಷ್ಟ್ರಗಳ ಹೂಡಿಕೆದಾರರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದು, ಹಲವು ಸಾವಿರ ಕೋಟಿ ರೂಪಾಯಿ ಹೂಡಿಕೆ ಒಪ್ಪಂದಗಳಿಗೆ ಸಹಿ ಬೀಳಲಿದೆ. ಹೊಸ ಹೊಸ ಕ್ಷೇತ್ರಗಳಲ್ಲಿ ಹೂಡಿಕೆಗೆ ಹೆಚ್ಚಿನ ಅವಕಾಶ ಕಲ್ಪಿಸುವ ಕುರಿತು ಯೋಚಿಸಬೇಕಾಗಿದೆ ಎಂದರು.

ಆರ್ಥಿಕ ವ್ಯವಸ್ಥೆ ಸುಭದ್ರ: ಕೋವಿಡ್ ಮತ್ತು ಯುದ್ಧಗಳ ಕಾರಣದಿಂದ ಜಗತ್ತಿನ ಹಲವು ರಾಷ್ಟ್ರಗಳು ಆರ್ಥಿಕ ಕುಸಿತ ಎದುರಿಸುತ್ತಿವೆ. ಆದರೆ, ಭಾರತದ ಆರ್ಥಿಕತೆಯ ಬುನಾದಿ ಭದ್ರವಾಗಿದೆ. ದೇಶವು ಆರ್ಥಿಕ ಕುಸಿತ ಅಪಾಯದಿಂದ ದೂರವಿದ್ದು, ಹೂಡಿಕೆದಾರರು ಇಲ್ಲಿ ವಹಿವಾಟು ನಡೆಸಲು ಉತ್ಸುಕರಾಗಿದ್ದಾರೆ ಎಂದು ಮೋದಿ ಹೇಳಿದರು.

ಹೂಡಿಕೆದಾರರಿಗೆ ಉತ್ತೇಜನ ನೀಡುವುದಕ್ಕಾಗಿ ತಮ್ಮ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಅನುಪಯುಕ್ತವಾಗಿದ್ದ 1,500 ಮೀರಿದ ಕಾನೂನುಗಳನ್ನು ಮತ್ತು ಸಾವಿರಾರು ನಿಯಮಗಳನ್ನು ರದ್ದುಗೊಳಿಸಲಾಗಿದೆ. ಹೂಡಿಕೆದಾರರಿಗೆ ಕೆಂಪುಪಟ್ಟಿಯ ಕಿರಿಕಿರಿಯ ಕಾಲ ಮುಗಿದಿದೆ. ಕೆಂಪುಹಾಸಿನ ಸ್ವಾಗತ ನೀಡುವ ವಾತಾವರಣವನ್ನು ಸೃಷ್ಟಿಸಲಾಗಿದೆ ಎಂದು ಹೇಳಿದರು.

ವೇದಾವತಿಯಲ್ಲಿ ರಾಜಕೀಯ ‘ಹೈ ಡ್ರಾಮಾ’


ಒಂದನೇ ಪುಟದಿಂದ...

ಈ ಸ್ಥಳಕ್ಕೆ ಅಕ್ಟೋಬರ್ 29ರಂದು ನಾಗೇಂದ್ರ ಭೇಟಿ ನೀಡಿ, ನವೆಂಬರ್ 1ರಿಂದ ನೀರು ಬಿಡಿಸುವುದಾಗಿ ರೈತರಿಗೆ ಭರವಸೆ ನೀಡಿದ್ದರು.

ಈ ಮಧ್ಯೆ, ಜಿಲ್ಲಾ ಉಸ್ತುವಾರಿ ಸಚಿವ ಬಿ.ಶ್ರೀರಾಮುಲು ನವೆಂಬರ್ 1ರಂದು ಮಂಗಳವಾರ ಮಧ್ಯಾಹ್ನ ಸ್ಥಳಕ್ಕೆ ಬಂದಿದ್ದು, ಕಾಲುವೆಗೆ ನೀರು ಹರಿಸುವವರೆಗೆ ಅಲ್ಲೇ ಮೊಕ್ಕಾಂ ಹೂಡುವುದಾಗಿ ಪ್ರಕಟಿಸಿದರು. ‘ನಾನು ಬಂದಿದ್ದರಿಂದ ಮೂರು ದಿನದಲ್ಲಿ ಆಗುವ ಕೆಲಸ ಎರಡು ದಿನಗಳಲ್ಲಿ ಆಗಿದೆ. ತಕ್ಷಣ ನೀರು ಕೊಡದಿದ್ದರೆ ಕರ್ನಾಟಕ ಹಾಗೂ ಆಂಧ್ರದ ಮೂರು ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾಳಾಗಲಿದೆ ಎಂಬ ಕಾರಣಕ್ಕೆ ಬಂದಿದ್ದೇನೆ’ ಸಚಿವರು ಹೇಳಿದರು.

ಸಚಿವರೇ ನದಿ ದಂಡೆಯಲ್ಲಿ ಬೀಡು ಬಿಟ್ಟಿದ್ದರಿಂದ ಇಡೀ ಜಿಲ್ಲಾಡಳಿತವೇ ಸ್ಥಳಕ್ಕೆ ದೌಡಾಯಿಸಿತ್ತು. ಜಿಲ್ಲಾಧಿಕಾರಿ ಪವನ ಕುಮಾರ್ ಮಾಲಪಾಟಿ, ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಎಸ್. ಮಂಜುನಾಥ್, ಎಸ್.ಪಿ ರಂಜಿತ್ ಕುಮಾರ್ ಬಂಡಾರು, ತಹಶೀಲ್ದಾರ್ ವಿಶ್ವನಾಥ್ ಸೇರಿದಂತೆ ಎಲ್ಲ ಅಧಿಕಾರಿಗಳು ಸಚಿವರ ಜತೆಯಲ್ಲೇ ಇದ್ದರು. ಈ ಸುದ್ದಿ ತಿಳಿಯುತ್ತಿದ್ದಂತೆ ಶಾಸಕ ನಾಗೇಂದ್ರ ಮಧ್ಯರಾತ್ರಿಯೇ ಬೆಂಬಲಿಗರೊಂದಿಗೆ ಸ್ಥಳಕ್ಕೆ ಧಾವಿಸಿದರು. ‘ಕ್ಯಾಂಪ್ ಫೈರ್’ ಹಾಕಿಕೊಂಡು ಬೆಂಕಿ ಕಾಯಿಸುತ್ತಾ ಕುಳಿತಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ರೈತರಿಗೆ ನೀರು ಕೊಡಿಸಿಯೇ ಜಾಗ ಬಿಡುವುದಾಗಿ ಶಪಥ ಮಾಡಿದ್ದರೆ, ಅತ್ತ ರಿಪೇರಿ ಕೈಗೊಂಡಿರುವ ತುಂಗಭದ್ರಾ ಮಂಡಳಿಯ ಅಧಿಕಾರಿಗಳು ಕೈಕೈ ಹಿಸುಕಿಕೊಳ್ಳುತ್ತಿದ್ದರು. ಇವರಿಂದಾಗಿ ಕೆಲಸ ವಿಳಂಬವಾಗುತ್ತಿದೆ ಎಂದು ತೆರೆಮರೆಯಲ್ಲಿ ದೂರುತ್ತಿದ್ದರು.



ಬಳ್ಳಾರಿ ತಾಲ್ಲೂಕಿನ ಬಿ.ಡಿ. ಹಳ್ಳಿಯ ವೇದಾವತಿ ಸೇತುವೆ ಕೆಳಗೆ ಮಂಗಳವಾರ ರಾತ್ರಿ ಮಲಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು



ಸೇತುವೆ ಕೆಳಗೆ ಬುಧವಾರ ಬೆಳಗಿನ ಜಾವದಿಂದ ಬೆಂಬಲಿಗರ ಜತೆ ಕೂತ ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ (ಬಲದಿಂದ ಎರಡನೆಯವರು).

ಹೊಸ ಸೇತುವೆ ನಿರ್ಮಾಣಕ್ಕೆ ₹ 300 ಕೋಟಿ ವೆಚ್ಚವಾಗಲಿದೆ. ಕರ್ನಾಟಕ ತನ್ನ ಪಾಲು ಕೊಡಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದಕ್ಕೆ ಒಪ್ಪಿದ್ದಾರೆ. ಕೇಂದ್ರ ಜಲ ಸಂಪನ್ಮೂಲ ಸಚಿವರ ಜತೆಯೂ ಮಾತನಾಡಲಾಗಿದೆ

ಬಿ. ಶ್ರೀರಾಮುಲು, ಜಿಲ್ಲಾ ಉಸ್ತುವಾರಿ ಸಚಿವ

ಆಂಧ್ರ ಸರ್ಕಾರವೂ ಹೊಸ ಸೇತುವೆ ನಿರ್ಮಾಣಕ್ಕೆ ಪ್ರಸ್ತಾವನೆ ಸಿದ್ಧಪಡಿಸಿದೆ. ತ್ವರಿತವಾಗಿ ನೆರೆಯ ಕರ್ನಾಟಕದ ಜತೆ ಜಲ ಸಂಪನ್ಮೂಲ ಸಚಿವರು ಚರ್ಚಿಸಲಿದ್ದಾರೆ. ನಮ್ಮ ಪಾಲಿನ ಹಣ ಭರಿಸಲು ನಾವು ಸಿದ್ಧರಿದ್ದೇವೆ

ಗುಮ್ಮನೂರು ಜಯರಾಂ, ಆಂಧ್ರ ಕಾರ್ಮಿಕ ಸಚಿವ

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...

ಬರವಣಿಗೆ ಕಲಿಸಿದ ಪತ್ರಿಕೆ

ನಮ್ಮದು ಮೊದಲ ತಲೆಮಾರಿನ ಶಿಕ್ಷಣ, ನನ್ನ ಶೈಕ್ಷಣಿಕ ಅವಧಿಯಲ್ಲಿ ಕನ್ನಡ ಅಕ್ಷರವ ತಿದ್ದಿ ತೀಡಿ ಕಲಿಸುವ ಪಾತ್ರ ವಹಿಸಿದ್ದು ನನ್ನ ಹೆಮ್ಮೆಯ ಪ್ರಜಾವಾಣಿ ಪತ್ರಿಕೆ. ಬುದ್ಧಿಕಂಡಾಗಿನಿಂದಲೂ ಈ ಪತ್ರಿಕೆಯನ್ನು ಹೊರತು ಬೇರೆ ಪತ್ರಿಕೆಯನ್ನು ಓದಲು ಮನಸ್ಸು ಒಪ್ಪುವುದಿಲ್ಲ. ಒಂದು ದಿನ ಪ್ರಜಾವಾಣಿ ಓದದಿದ್ದರೆ ಶೂನ್ಯ ಅವರಿಸಿದಂತೆಯೇ. ಪತ್ರಿಕೆಯ ಜಾತ್ಯತೀತ ಸಂಕೇತ ಮತ್ತು ನಿಲುವು ನನ್ನನ್ನು ಈ ಪತ್ರಿಕೆಯ ವ್ಯಸನಿಯಾಗಿಸಿದಲ್ಲದೆ, ಸಾಮಾಜಿಕ ಜ್ಞಾನಾರ್ಜನೆ ವೃದ್ಧಿಸಿದ ಕೀರ್ತಿಯೂ ಇದರದೆ.

ನನ್ನ ದಿನಚರಿ ಸಾಗುವುದೇ ಪ್ರಜಾವಾಣಿಯೊಂದಿಗೆ. ಸಮಾಜದ ಅಂಕುಡೊಂಕುಗಳ ಬಗ್ಗೆ ನನ್ನ ಕಿರು ಬರವಣಿಗೆಗೆ ಸ್ಥಳ ಕಲ್ಪಿಸಿ ಒಂದಷ್ಟು ಮಂದಿ ನನ್ನನ್ನು ಗುರುತಿಸುವಂತೆ ಮಾಡಿದೆ. ಪತ್ರಿಕೆಯು ನಾಲ್ಕೂವರೆ ದಶಕಗಳಿಂದ ನನ್ನ ಸಂಗಾತಿ ಆಗಿರುವುದಕ್ಕೆ ಧನ್ಯವಾದಗಳು.

ಚಂದ್ರಶೇಖರ ಪುಟ್ಟಪ್ಪ, ಚಾಮರಾಜಪೇಟೆ

ಕನ್ನಡಿಗರ ಸಾಕ್ಷಿಪ್ರಜ್ಞೆ

ನಾನು 1965ರಿಂದಲೂ ಪ್ರಜಾವಾಣಿಯನ್ನು ಓದುತ್ತಿದ್ದೇನೆ. ಸುದ್ದಿ ಅಂದರೆ ಪ್ರಜಾವಾಣಿ ಅನ್ನೋ ಮಾತಿದೆ. ಸಾಮಾಜಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಪತ್ರಿಕೆಯ ಪಾತ್ರ ಮಹತ್ವದ್ದು. ಇದು ಕನ್ನಡಿಗರ ಸಾಕ್ಷಿಪ್ರಜ್ಞೆ. ಯಾರ ಭಾವನೆಯನ್ನೂ ಕೆರಳಿಸದೆ, ನಾಜೂಕಾಗಿ ಸತ್ಯದ ಅನಾವರಣ ಮಾಡೋ ಶಕ್ತಿ ಇದೆ. 1990ರಲ್ಲಿ ನಾನು ಬರೆದ ‘ಆರೋಗ್ಯ ಭಾಗ್ಯ’ ಅಂಕಣ 12 ವಾರ ಪ್ರಕಟವಾಯಿತು. ಅದು ಎಲ್ಲಾ ವರ್ಗದವರ ಮೆಚ್ಚುಗೆಗೆ ಒಳಗಾಯ್ತು. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕೆ.ಟಿ. ಗಟ್ಟಿ, ಕೆ.ಎಸ್. ನಿಸಾರ್ ಅಹಮದ್ ಅವರಂಥ ದಿಗ್ಗಜರೆಲ್ಲಾ ಪ್ರತಿಕ್ರಿಯಿಸಿದರು. ಈ ಪತ್ರಿಕೆಯು ನನ್ನ ಸುಪ್ತ ಪ್ರತಿಭೆಗೆ ಅವಕಾಶ ಕೊಟ್ಟಿತು.

ಡಾ. ಬಿ.ಟಿ. ರುದ್ರೇಶ್, ಹೋಮಿಯೋಪತಿ ತಜ್ಞ, ಬೆಂಗಳೂರು

ಆರು ದಶಕದ ನಂಟು



ಪ್ರಜ್ಞಾವಂತ ಕನ್ನಡ ಜನತೆಯ ನೆಚ್ಚಿನ ಪತ್ರಿಕೆಯಾಗಿರುವ ಪ್ರಜಾವಾಣಿಯೊಡನೆ ನನಗಿರುವ ಬಾಂಧವ್ಯ ಸುಮಾರು ಅರವತ್ತು ವರ್ಷಗಳಷ್ಟು ಹಿಂದಿನದು.

ಅಲ್ಲಿನ ಒಂದು ಕಾಲದ ಹಿರಿಯರ ಪ್ರೀತಿಯ ಮತ್ತು ಸಾಮಾಜಿಕ ನ್ಯಾಯದ ಪರವಾದ ಆತ್ಮೀಯತೆಯ ಒಡನಾಟ ಅಸಾಧಾರಣವಾದದ್ದು.

ನನ್ನ ಹೆಚ್ಚಿನ ಕಥೆ, ಕವನ, ವಿಮರ್ಶೆ, ವೈಚಾರಿಕ ಬರಹಗಳು - ಈ ಪತ್ರಿಕೆಯಲ್ಲಿ ಉದ್ದಕ್ಕೂ ಬೆಳಕು ಕಂಡಿವೆ. ನಮ್ಮ ವಿಚಾರವಾದಿ ಹೋರಾಟಗಳು, ಸರಳ ಮದುವೆಯ ಚಳವಳಿ, ಬಂಡಾಯ ಸಾಹಿತ್ಯ ಸಮ್ಮೇಳನ ಹಾಗೂ ಸೂಕ್ಷ್ಮ ಸಂವೇದನಾಶೀಲ ಚಿಂತನೆಗಳ ಗೋಷ್ಠಿ-ಶಿಬಿರ-ಉಪನ್ಯಾಸಗಳಿಗೆ ಈ ಪತ್ರಿಕೆ ನೀಡಿದ ಉತ್ತೇಜನ ನಿಜಕ್ಕೂ ದೊಡ್ಡದು.

ಈ ಆಪತ್ಕಾಲದಲ್ಲೂ ಕೂಡ ಕನ್ನಡಿಗರ ಅಂತರಂಗದ ಸತತ ಕನ್ನಡಿಯಾಗಿರುವ ಪ್ರಜಾವಾಣಿ ಪತ್ರಿಕೆಯು ಜನತೆಯ ಬದುಕಿನ ಜೀವನಾಡಿಯಾಗಿ ಬೆಳೆಯಲೆಂದು ಹೃದಯ ತುಂಬಿ ಹಾರೈಸುತ್ತೇನೆ.

ಪ್ರೊ.ಕಾಳೇಗೌಡ ನಾಗವಾರ, ಸಾಹಿತಿ, ಮೈಸೂರು

ನೊಂದವರಿಗೆ ಬೆಳಕು



‘ಪ್ರಜಾವಾಣಿ’ 75ನೇ ಅಮೃತ ಮಹೋತ್ಸವ ನೋಡಿ ತುಂಬಾ ಖುಷಿಯಾಯಿತು. ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾದ ಬರಹ ಎಲ್ಲರನ್ನೂ, ಎಲ್ಲವನ್ನೂ ಒಳಗೊಳ್ಳುವ ಮಾತುಗಳು ಅರ್ಥಪೂರ್ಣವಾಗಿದ್ದವು. ಕಳೆದ 75 ವರ್ಷಗಳಲ್ಲಿ ‘ಪ್ರಜಾವಾಣಿ’ಯಲ್ಲಿ ದುಡಿದ ಎಲ್ಲಾ ಕೈಗಳಿಗೆ ಮತ್ತು ಮನಸ್ಸುಗಳಿಗೆ ವಂದನೆಗಳು.

ಪತ್ರಿಕೆಯನ್ನು ಪ್ರಾರಂಭಿಸಿದವರಿಗೆ ಇಂತಹ ದೂರದೃಷ್ಟಿ ಮತ್ತು ಸಾಮಾಜಿಕ ಕಾಳಜಿಯಿತ್ತು ಎನ್ನುವುದರಲ್ಲಿ ಅನುಮಾನವಿಲ್ಲ.

ನಾನು 9ನೇ ತರಗತಿಯಲ್ಲಿದ್ದಾಗ, ಯಾವುದೋ ಒಂದು ಪ್ರಶ್ನೆಗೆ ಯಾರೂ ಉತ್ತರ ಹೇಳಲಿಲ್ಲ. ಕನ್ನಡದ ಮೇಷ್ಟ್ರು ನರಸಿಂಹಾಚಾರ್, ‘ನೀವು ನಾಳೆಯಿಂದ ಪತ್ರಿಕೆ ಓದಿ ಒಂದೊಂದು ವಿಷಯದ ಬಗ್ಗೆ ಹೇಳಬೇಕು’ ಎಂದರು. ಆ ಮಾತು, ‘ಪ್ರಜಾವಾಣಿ’ಯನ್ನು ಓದುವಂತೆ ಮಾಡಿತು. ದಲಿತರ ಮೇಲೆ ದೌರ್ಜನ್ಯವಾದಾಗಲೆಲ್ಲಾ ಅತಿ ಹೆಚ್ಚು ಸಂಪಾದಕೀಯವನ್ನು ಬರೆದ ಪತ್ರಿಕೆ ‘ಪ್ರಜಾವಾಣಿ’ ಒಂದೇ. ಪತ್ರಿಕೆ ಹೀಗೆಯೇ ಸಾಗಿ ಶತಮಾನೋತ್ಸವಕ್ಕೆ ಮುನ್ನಡೆಯಲಿ.

ಸುಬ್ಬು ಹೊಲೆಯಾರ್
ಕವಿ, ಬೆಂಗಳೂರು

ವಿವಿಧ ಬಗೆಯ ತಿನಿಸು ಸವಿಯಲು ನೂಕುನುಗ್ಗಲು

ಎಣ್ಣೆರಹಿತ ಪಾಪ್‌ಕಾರ್ನ್, ಮಸಾಜ್ ಯಂತ್ರದ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಣ್ಣೆ ಇಲ್ಲದೆ ಪಾಪ್ ಕಾರ್ನ್, ಸಂಡಿಗೆ-ಹಪ್ಪಳ ಆಗುತ್ತಾ? ನೋಡೋಣ ಒಂದು ಕೊಡಿ... ಇದರ ಮೇಲೆ ನಿಂತರೆ ಒತ್ತಡ ಕಡಿಮೆಯಾಗುತ್ತಾ? ನಿಂತು ನೋಡುವೆ... ಈ ಯಂತ್ರದಿಂದ ಮಸಾಜ್ ಮಾಡಿಕೊಂಡರೆ ಎಲ್ಲ ನೋವೂ ಹೋಗುತ್ತಾ...?'

ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದ ಪ್ರಥಮ ದಿನ ಬುಧವಾರ ಪ್ರದರ್ಶನ ಕೇಂದ್ರದ ಕೆಲವು ಮಳಿಗೆಗಳಲ್ಲಿ ಇಂತಹ ಪ್ರಶ್ನೆಗಳಿದ್ದವು. ತಿನಿಸು ಸವಿಯಲು, ಮಸಾಜ್ ಮಾಡಿಸಿಕೊಳ್ಳಲು ನೂಕುನುಗ್ಗಲು ಉಂಟಾಗಿತ್ತು. ಆದರೆ, ಇತರೆ ಮಳಿಗೆಗಳಲ್ಲಿ ಒಂದಿಬ್ಬರು ಮಾತ್ರ ಇದ್ದರು. ಹಲವು ಮಳಿಗೆಗಳು ಆರಂಭವೇ ಆಗಿರಲಿಲ್ಲ.

ಬೋಂಡಾ, ಬಜ್ಜಿ, ಸಮೋಸಾ ಬಿಟ್ಟು ಎಣ್ಣೆ ಇಲ್ಲದೆ ಎಲ್ಲವನ್ನೂ ಕರಿಯಬಹುದು ಎಂದು ಮಳಿಗೆಯವರು ಹೇಳುತ್ತಿದ್ದರೆ, ಸಾಕಷ್ಟು ಮಂದಿ ಬಂದು ಅದರ ರುಚಿ ನೋಡುತ್ತಿದ್ದರು. ಅಕ್ಕಪಕ್ಕದ ಮಳಿಗೆಯವರೂ ಈ ಯಂತ್ರದ ಬಗ್ಗೆ ವಿಚಾರಿಸಲು ನಿಂತಿದ್ದರು. ಕಡಲೆಬೀಜ, ಪಾಪ್‌ಕಾರ್ನ್, ಸಂಡಿಗೆ, ಹಪ್ಪಳದ ರುಚಿ ನೋಡಲು ನೂಕುನುಗ್ಗಲು ಅಲ್ಲಿತ್ತು.

ಇನ್ನು ಮಸಾಜ್ ಯಂತ್ರದ ಮಳಿಗೆಗಳಲ್ಲಿ ಅದರ ಪ್ರಯೋಜನ ತಿಳಿದುಕೊಂಡು, ಅದರ ಸೌಲಭ್ಯವನ್ನೂ ಪಡೆದುಕೊಳ್ಳಲು ಸಾಕಷ್ಟು ಮಂದಿ ಸಾಲುಗಟ್ಟಿದ್ದರು. ಬಿಡುವಿನ ವೇಳೆಯಲ್ಲಿ ಪೊಲೀಸ್ ಸಿಬ್ಬಂದಿಯೂ ಈ ಯಂತ್ರಗಳ ಮಾಹಿತಿ ಪಡೆದು, ಕಾಲುಚಾಚಿ ಕುಳಿತುಕೊಂಡು ಮಸಾಜ್ ಮಾಡಿಸಿಕೊಂಡರು. 'ಒತ್ತಡ ಎಲ್ಲ ಹೋಗುತ್ತಂತೆ ಸರ್, ತೆಗೆದುಕೊಳ್ಳಿ' ಎಂದು ಸಹೋದ್ಯೋಗಿಗಳು ಹೇಳುತ್ತಿದ್ದದ್ದು ಸಾಮಾನ್ಯವಾಗಿತ್ತು.

ಸಾವಯವ ತಿನಿಸು, ಆರೋಗ್ಯಕರ ಪಾನೀಯಗಳ ಮಳಿಗೆಗಳಲ್ಲೂ ವಿಚಾರಣೆ ಸಾಕಷ್ಟಿತ್ತು. ಎಳನೀರು ಪೌಡರ್, ದ್ರಾಕ್ಷಾರಸ (ವೈನ್) ಮಳಿಗೆಗಳಲ್ಲಿ ಅದರ ಸ್ಯಾಂಪಲ್‌ಗೆ ಭಾರಿ ಬೇಡಿಕೆ ಇದ್ದರೂ, ಅದು ಲಭ್ಯವಿರಲಿಲ್ಲ. ಒಂದು ಬಾಕ್ಸ್‌ನಂತಿರುವ ಉಪಕರಣವನ್ನು ಮನೆ ಪ್ಲಗ್‌ಗೆ ಅಳವಡಿಸಿದರೆ ಶೇ 30ರಷ್ಟು ವಿದ್ಯುತ್ ಉಳಿತಾಯವಾಗುತ್ತದೆ ಎಂಬ ಮಳಿಗೆಯ ಪ್ರಾತ್ಯಕ್ಷಿಕೆ ಗಮನಸೆಳೆಯುತ್ತಿತ್ತು.

ಪರಿಸರ ಸ್ನೇಹಿಯಾದ ತೆಂಗಿನ ಒಣಗಿನ ಎಲೆಗಳಿಂದ ತಯಾರಿಸಲಾದ ಪೆನ್ ಹಾಗೂ ಸ್ಟ್ರಾ ಆಕರ್ಷಿಸಿದವು. ಮರುಬಳಸಬಹುದಾದ ಹತ್ತಿಯ ಬ್ಯಾಗ್‌ಗಳನ್ನು ಗ್ರಾಹಕರು ಕೇಳಿದ ಅಳತೆ ಹಾಗೂ ವಿನ್ಯಾಸದಲ್ಲಿ ಒದಗಿಸುವ ಬಾಗಲಕೋಟೆಯ ಪ್ರಿಂಟ್ ಪಾರ್ಕ್ ಹೆಚ್ಚು ಗ್ರಾಹಕರನ್ನು ಸೆಳೆಯಿತು.

ಗಂಧದಮರ ಕಳವು ಯತ್ನ: ಇಬ್ಬರನ್ನು ಹಿಡಿದ ಗ್ರಾಮಸ್ಥರು

ಹರಿಹರ: ತಾಲ್ಲೂಕಿನ ದೇವರಬೆಳಕೆರೆ ಗ್ರಾಮದಲ್ಲಿ ಮನೆ ಮುಂದೆ ಬೆಳೆಸಿದ್ದ ಗಂಧದ ಮರ ಕಳವಿಗೆ ಮಂಗಳವಾರ ಬೆಳಗಿನ ಜಾವ ಯತ್ನಿಸಿದ ಇಬ್ಬರನ್ನು ಗ್ರಾಮಸ್ಥರು ಸೆರೆ ಹಿಡಿದಿದ್ದು, ನಾಲ್ವರು ಪರಾರಿಯಾಗಿದ್ದಾರೆ.

ಮಂಜುಗೌಡರ ಮನೆ ಅಂಗಳದಲ್ಲಿ ಇದ್ದ 20 ವರ್ಷ ಹಳೆಯ ಗಂಧದ ಮರವನ್ನು ಕಳವು ಮಾಡಲು ಆರು ಮಂದಿಯ ತಂಡ ಕಾರಿನಲ್ಲಿ ಬಂದಿತ್ತು. ಆರೋಪಿಗಳು ಇವರ ಹಾಗೂ 8–10 ಮನೆಗಳ ಬಾಗಿಲುಗಳಿಗೆ ಹೊರಗಡೆಯಿಂದ ಚಿಲಕ ಹಾಕಿದ್ದರು. ಮನೆ ಅಂಗಳದಲ್ಲಿ ಮಲಗಿದ್ದ ಮಂಜುಗೌಡರ ಪುತ್ರ ಎಚ್ಚರಗೊಂಡು ಬಾಗಿಲನ್ನು ತೆರೆದು ಎಲ್ಲರೂ ಹೊರಕ್ಕೆ ಬರಲು ಅನುವು ಮಾಡಿಕೊಟ್ಟರು. ನಂತರ ಅಕ್ಕಪಕ್ಕದ ಮನೆಯ ಚಿಲಕಗಳನ್ನೂ ತೆರೆದರು. ಆಗ ಆರೋಪಿಗಳ ಪೈಕಿ ನಾಲ್ವರು ಕಾರು ಹತ್ತಿ ಪರಾರಿಯಾದರು. ನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಗ್ರಾಮಸ್ಥರು ಇಬ್ಬರು ಆರೋಪಿಗಳನ್ನು ಬೆನ್ನಟ್ಟಿ ಹಿಡಿದರು.

ಆರೋಪಿಗಳಾದ ಹಳೆಬೀಡು ನಿವಾಸಿ ಲವಕುಮಾರ್, ತುಮಕೂರಿನ ಮೊಹಮ್ಮದ್ ಇಮ್ರಾನ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.



ರಸಪ್ರಶ್ನೆ ಸ್ಪರ್ಧೆ ವಿಜೇತರು

'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಮಾಸ್ಟರ್ ಮೈಂಡ್' ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಶಾಲಾ ರಸಪ್ರಶ್ನೆಯಲ್ಲಿ ಗೆದ್ದ ವಿದ್ಯಾರ್ಥಿ–ವಿದ್ಯಾರ್ಥಿನಿಯರು. ನಿಂತವರು (ಎಡದಿಂದ): ಸೀನಿಯರ್ಸ್ ವಿಭಾಗ: ವಿನ್ನರ್ಸ್–ಕೋರಮಂಗಲ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಫರೀದ್ ಕಿದ್ವಾಯಿ ಹಾಗೂ ಅನಂತ್ ಆನಂದ್; ರನ್ನರ್ ಅಪ್–ಪದ್ಮನಾಭನಗರ ಕಾರ್ಮೆಲ್ ಶಾಲೆಯ ಆದಿತ್ಯ ನಿಖಿಲ್ ಹಾಗೂ ನಿಶ್ಚಲ್ ವಿಶ್ವನಾಥ್; ಕ್ವಿಜ್ ಮಾಸ್ಟರ್ ಅರುಳ್ ಮಣಿ, ಮೊದಲ ರನ್ನರ್ ಅಪ್–ರಾಜಾಜಿನಗರ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಆರುಷ್ ಮಿಶ್ರಾ ಹಾಗೂ ಸಾಚಿ ಜೈನ್; 2ನೇ ರನ್ನರ್ ಅಪ್–ಸೇಂಟ್ ಜೋಸೆಫ್ಸ್ ಬಾಲಕರ ಶಾಲೆಯ ನಿಖಿಲ್ ಹಾಗೂ ಶಿಶಿರ್. ಕುಳಿತವರು (ಎಡದಿಂದ): ಜೂನಿಯರ್ ವಿಭಾಗ: ರಾಜಾಜಿನಗರ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಸಿದ್ಧಾರ್ಥ್ ಹಾಗೂ ಸಮರ್ಥ್, ರನ್ನರ್ ಅಪ್–ಹುಳಿಮಾವು ಬಿಜಿಎಸ್‌ಎನ್‌ಪಿಎಸ್‌ನ ಅದಿತಿ ರಂಜನ್ ಹಾಗೂ ಪ್ರಣವ್ ಸುಬ್ರಮಣಿಯನ್; ಮೊದಲ ರನ್ನರ್ ಅಪ್–ಯಶವಂತಪುರ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಆರವ್ ಜೈನ್ ಹಾಗೂ ಪ್ರಣವ್ ಹರೀಶ್. –ಪ್ರಜಾವಾಣಿ ಚಿತ್ರ

ಡಿಕೆಶಿ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣ

ಇ.ಡಿಗೆ ದೆಹಲಿ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮತ್ತೊಮ್ಮೆ ತನಿಖೆ ನಡೆಸುತ್ತಿರುವುದನ್ನು ಪ್ರಶ್ನಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಅರ್ಜಿಯ ಸಂಬಂಧ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ದೆಹಲಿ ಹೈಕೋರ್ಟ್ ಬುಧವಾರ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಮುಕ್ತಾ ಗುಪ್ತ ಹಾಗೂ ಅನಿಷ್ ದಯಾಳ್ ಅವರನ್ನು ಒಳಗೊಂಡ ಪೀಠವು ವಿಚಾರಣೆ ನಡೆಸಿ, ಪ್ರತಿಕ್ರಿಯೆ ನೀಡಲು ಜಾರಿ ನಿರ್ದೇಶನಾಲಯಕ್ಕೆ ಡಿಸೆಂಬರ್ 15ರ ವರೆಗೆ ಕಾಲಾವಕಾಶ ನೀಡಿತು. ಆದರೆ, ಪ್ರಕರಣದ ತನಿಖೆಗೆ ನ್ಯಾಯಾಲಯ ತಡೆಯಾಜ್ಞೆ ನೀಡಿಲ್ಲ. ಈ ಬಗ್ಗೆ ಯಾವುದೇ ಅರ್ಜಿ ಸಲ್ಲಿಕೆಯಾಗಿಲ್ಲ ಎಂದು ಪೀಠ ತಿಳಿಸಿತು.

2017ರಲ್ಲಿ ಶಿವಕುಮಾರ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ಆಗ, ದೆಹಲಿಯ ವಿವಿಧ ಸ್ಥಳಗಳಲ್ಲಿ ₹ 8.59 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು. ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ತನಿಖೆ ನಡೆಸಿತ್ತು.

ಈ ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಕೆಯಾಗಿ ಇ.ಡಿ.ವಿಶೇಷ ನ್ಯಾಯಾಲಯದಲ್ಲಿ ಈಗಾಗಲೇ ವಿಚಾರಣೆ ನಡೆಯುತ್ತಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮರು ತನಿಖೆ ನಡೆಸುತ್ತಿದೆ ಎಂದು ಆರೋಪಿಸಿ ಶಿವಕುಮಾರ್ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಸೆಕ್ಷನ್ 13ರ ಸಾಂವಿಧಾನಿಕ ಮಾನ್ಯತೆಯನ್ನು ಸಹ ಶಿವಕುಮಾರ್ ಪ್ರಶ್ನೆ ಮಾಡಿದ್ದಾರೆ.

ಶಿವಕುಮಾರ್ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿ, 'ಒಂದು ಬಾರಿ ಕಾನೂನುಬಾಹಿರ ಮಾರ್ಗದಿಂದ ಪಡೆದ ಹಣವನ್ನು ಅಕ್ರಮ ಆಸ್ತಿ ಸಂಗ್ರಹಣೆಗಾಗಿ ವಿನಿಯೋಗಿಸಲಾಗಿದೆ ಎಂದು ಸಾಬೀತಾದಲ್ಲಿ, ಮತ್ತೊಂದು ಹಣ ಅಕ್ರಮ ವರ್ಗಾವಣೆಯ ಪ್ರಕರಣ ದಾಖಲಿಸಲಾಗದು' ಎಂದರು.

'3.5 ಲಕ್ಷ ಜನರ ಉದ್ಯೋಗ ನಷ್ಟ'

ಹೈದರಾಬಾದ್ (ಪಿಟಿಐ): ನೋಟುಗಳ ಅಮಾನ್ಯೀಕರಣ ಹಾಗೂ ಜಿಎಸ್‌ಟಿಯ ಅಸಮರ್ಪಕ ಅನುಷ್ಠಾನದಿಂದಾಗಿ ಕರ್ನಾಟಕದ ಬಳ್ಳಾರಿಯಲ್ಲಿನ ಜೀನ್ಸ್ ಉಡುಪುಗಳ ಉದ್ಯಮದ ದುಡಿಯುತ್ತಿದ್ದ 3.5 ಲಕ್ಷಕ್ಕೂ ಹೆಚ್ಚು ಜನರು ತಮ್ಮ ಉದ್ಯೋಗ ಕಳೆದುಕೊಳ್ಳುವಂತಾಯಿತು ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಟೀಕಿಸಿದರು. ಸಮೀಪದ ಮುತ್ತಂಗಿಯಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.



ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಬೆಂಗಳೂರು ವೃತ್ತದ ಜಾಗೃತಿ ಸಪ್ತಾಹ ಕಾರ್ಯಕ್ರಮವನ್ನು ಸಿಬಿಐ ಡಿವೈಎಸ್‌ಪಿ ಸತೀಶ್ ಚಂದ್ರ ಝಾ ಈಚೆಗೆ ಉದ್ಘಾಟಿಸಿದರು. ದಕ್ಷಿಣ ವಲಯದ ವ್ಯವಸ್ಥಾಪಕ ನಿರ್ದೇಶಕ ಸುಭಾಶಿಶ್ ಭಟ್ಟಾಚಾರ್ಯ, ನೆಟ್‌ವರ್ಕ್–2ನ ಜನರಲ್ ಮ್ಯಾನೇಜರ್ ಸಂದೀಪ್ ಭಟ್ನಾಗರ್, ನೆಟ್‌ವರ್ಕ್–3ರ ಜನರಲ್ ಮ್ಯಾನೇಜರ್ ಅನುರಾಗ್ ಜೋಷಿ, ಬಿಸಿಡಿ ಜನರಲ್ ಮ್ಯಾನೇಜರ್ ಶ್ರೀಧರ ನಾರಾಯಣ ಕುಲಕರ್ಣಿ, ಜಾಗೃತಿ ವಿಭಾಗದ ಉಪ ಜನರಲ್ ಮ್ಯಾನೇಜರ್ ರಮೇಶ್ ಎಸ್. ಇದ್ದರು.

'ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ: ವರದಿ ಮಾಡದಿರುವುದು ಅಪರಾಧ'

ನವದೆಹಲಿ: ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಬಗ್ಗೆ ಮಾಹಿತಿ ಇದ್ದಾಗ್ಯೂ, ಅದನ್ನು ವರದಿ ಮಾಡದೇ ಇರುವುದು ಗಂಭೀರ ಅಪರಾಧವಾಗುತ್ತದೆ ಎಂದು ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.



ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಹಾಗೂ ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠ, 'ಇಂಥ ಪ್ರಕರಣಗಳನ್ನು ವರದಿ ಮಾಡದಿರುವುದು ತಪ್ಪಿತಸ್ಥರು ಎಸಗಿರುವ ಅಪರಾಧವನ್ನು ಮರೆಮಾಚುವ ಪ್ರಯತ್ನವಾಗುತ್ತದೆ' ಎಂದು ಕಟುವಾಗಿ ಹೇಳಿದೆ.

2019ರಲ್ಲಿ ಮಹಾರಾಷ್ಟ್ರದ ಶಾಲೆಯೊಂದರ 17 ಬುಡಕಟ್ಟು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದ ಬಗ್ಗೆ ವರದಿ ನೀಡುವಲ್ಲಿ ವೈದ್ಯರೊಬ್ಬರು ವಿಫಲರಾಗಿದ್ದರು. ಅವರ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ರದ್ದು ಮಾಡಿ ಬಾಂಬೆ ಹೈಕೋರ್ಟ್ ಆದೇಶಿಸಿತ್ತು. ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.


ನಗರದಲ್ಲಿ ಇಂದು

ಅಖಿಲ ಕರ್ನಾಟಕ ಕವಿಗಳ 10ನೇ ಸಮ್ಮೇಳನ: ಸಮ್ಮೇಳನಾಧ್ಯಕ್ಷ: ಸಿದ್ಧರಾಮ ಹೊನ್ಕಲ್, ಸಾನ್ನಿಧ್ಯ: ರಮಾನಂದ ಗುರೂಜಿ, ಉದ್ಘಾಟನೆ: ಎಚ್.ಟಿ ಪೋತೆ, ಅತಿಥಿಗಳು: ಬಿ.ಟಿ ಲಲಿತಾ ನಾಯಕ್, ಎಲ್.ಎನ್ ಮುಕುಂದರಾಜ್, ಬಿ.ವಿ ಸತ್ಯನಾರಾಯಣರಾವ್, ಆಯೋಜನೆ: ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9.30, ವೇದಿಕೆ ಕಾರ್ಯಕ್ರಮ ಮಧ್ಯಾಹ್ನ 2

ಮಾನಸಿಕ ಆರೋಗ್ಯ ಸಂತೆ: ಅತಿಥಿಗಳು: ಡಾ.ಎಸ್ ಕಲ್ಯಾಣ ಸುಂದರಂ, ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಆಯೋಜನೆ ಮತ್ತು ಸ್ಥಳ: ನಿಮ್ಹಾನ್ಸ್, ಬೆಳಿಗ್ಗೆ 10

ಯಜ್ಞವಲ್ಕ್ಯ ಗುರುಗಳ ರಥೋತ್ಸವ ಮತ್ತು ಚತುರ್ವೇದ ಪಂಡಿತರಿಗೆ ಸನ್ಮಾನ: ಸಾನ್ನಿಧ್ಯ: ವಿದ್ಯಾವಿಶ್ವೇಶ್ವರ ಭಾರತೀ ಸ್ವಾಮೀಜಿ, ಅತಿಥಿಗಳು: ಹಾರನಹಳ್ಳಿ ಅಶೋಕ್, ಭಾನುಪ್ರಕಾಶ್ ಶರ್ಮ, ಅಧ್ಯಕ್ಷತೆ: ವೈ.ವಿ ವೇಣುಗೋಪಾಲಕೃಷ್ಣ, ಆಯೋಜನೆ: ಶುಕ್ಲಯಜುಃಶಾಖಾ ಟ್ರಸ್ಟ್, ಸ್ಥಳ:ಚಾಮರಾಜಪೇಟೆ, ಬೆಳಿಗ್ಗೆ 10.30, ಸಭಾ ಕಾರ್ಯಕ್ರಮ 11.30


ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಹಬ್ಬ-2022, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸಿ ಸೋಮಶೇಖರ್, ಅಧ್ಯಕ್ಷತೆ: ಅರಳಿ ನಾಗರಾಜ್ ಗಂಗಾವತಿ, ಬಿ. ಶಿವಕುಮಾರ್, ಆಯೋಜನೆ: ಸ್ವರ್ಣಭೂಮಿ ಫೌಂಡೇಷನ್, ಕರ್ನಾಟಕ ರಾಜ್ಯ ಶಿಕ್ಷಕರ ಸಾಹಿತ್ಯ ಪರಿಷತ್ತು, ಸ್ಥಳ: ಕುವೆಂಪು ಸಭಾಂಗಣ, ಕಸಾಪ, ಚಾಮರಾಜಪೇಟೆ, ಬೆಳಿಗ್ಗೆ 10.30



ರಂಜನಿ ಕೀರ್ತಿ

ಹರಿದಾಸ ವೈಭವ: ಗಾಯನ: ರಂಜನಿ ಕೀರ್ತಿ, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7.30

ಲಂಕೇಶರ ನಾಟಕಗಳು: ಒಂದು ವಿಶೇಷ ಉಪನ್ಯಾಸ: ಅಧ್ಯಕ್ಷತೆ: ಅವಿರಾಮ್ ಶರ್ಮ, ಪ್ರಾಸ್ತಾವಿಕ: ಪದ್ಮಿನಿ ನಾಗರಾಜು, ಉಪನ್ಯಾಸ: ನಟರಾಜ್ ಹುಳಿಯಾರ್, ಉಪಸ್ಥಿತಿ: ಬೆಳಕೆರೆ ಲಿಂಗರಾಜಯ್ಯ, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಬಿಎಂಎಸ್ ಕಾಲೇಜ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ವಿ.ವಿ. ಪುರ, ಬೆಳಿಗ್ಗೆ 11.30



ನಟರಾಜ್ ಹುಳಿಯಾರ್

ಕೃಷಿ ಮೇಳ-2022: ಉದ್ಘಾಟನೆ: ಥಾವರಚಂದ ಗೆಹಲೋತ್, ಅತಿಥಿಗಳು: ಬಿ.ಸಿ ಪಾಟೀಲ್, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಆಯೋಜನೆ ಮತ್ತು ಸ್ಥಳ: ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಳಿಗ್ಗೆ 11

ಡಾ ಟಿ.ಎಚ್. ಲವಕುಮಾರ್ ಅವರ ಸಮಾಧಿಗಳು ಪ್ರತಿಭಟಿಸುವುದಿಲ್ಲ ಕವನ ಸಂಕಲನ ಬಿಡುಗಡೆ: ಬಂಜಗೆರೆ ಜಯಪ್ರಕಾಶ್, ಕೃತಿ ಕುರಿತು: ಎಚ್.ಎಲ್ ಪುಷ್ಪ, ಅಧ್ಯಕ್ಷತೆ: ಚಾರ್ಲ್ಸ್ ಲಸ್ರಾಡೋ ಯೇ.ಸ, ಆಯೋಜನೆ ಮತ್ತು ಸ್ಥಳ: ಸಂತ ಜೋಸೆಫರ್ ವಾಣಿಜ್ಯ ಕಾಲೇಜು, ಬ್ರಿಗೇಡ್ ರಸ್ತೆ, ಸಂಜೆ 5



ಬಂಜಗೆರೆ ಜಯಪ್ರಕಾಶ್

ಪರಿಸರದಲ್ಲಿ ಹಾವು ಮತ್ತು ನಾವು ಉಪನ್ಯಾಸ: ಬಾಣಸಂದ್ರ ಜಿ. ರವಿಕುಮಾರ್, ಅತಿಥಿಗಳು: ಎಂ.ಸಿ ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ದಾಸವಾಣಿ: ಗಾಯನ: ಸುಶ್ರಾವ್ಯ ಆಚಾರ್ಯ ಮತ್ತು ಸಂಗಡಿಗರು, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಕೆಂಗೇರಿ ಉಪನಗರ, ಸಂಜೆ 6.30



ಸುಶ್ರಾವ್ಯ ಆಚಾರ್ಯ

'ದೆಹಲಿಯನ್ನು 'ಗ್ಯಾಸ್ ಚೇಂಬರ್' ಮಾಡಿದ ಎಎಪಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್‌ನಲ್ಲಿ ಭತ್ತದ ಕೂಳೆ ಸುಡುವುದನ್ನು ತಗ್ಗಿಸುವಲ್ಲಿ ಎಎಪಿ ಸರ್ಕಾರ ವಿಫಲವಾಗಿದೆ. ಈ ಮೂಲಕ ರಾಷ್ಟ್ರ ರಾಜಧಾನಿ ದೆಹಲಿಯನ್ನು 'ಗ್ಯಾಸ್ ಚೇಂಬರ್'ಆಗಿ ಎಎಪಿ ಪರಿವರ್ತಿಸಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಬುಧವಾರ ವಾಗ್ದಾಳಿ ನಡೆಸಿದ್ದಾರೆ.

'ಪಂಜಾಬ್‌ನಲ್ಲಿ ಕಳೆದ ವರ್ಷ ಭತ್ತದ ಕೂಳೆ ಸೇರಿದಂತೆ ಕೃಷಿ ತ್ಯಾಜ್ಯ ಸುಡುವ ಪ್ರಮಾಣ ಶೇ 19ರಷ್ಟು ಹೆಚ್ಚಾಗಿದೆ. ಹರಿಯಾಣದಲ್ಲಿ ಪ್ರಮಾಣದಲ್ಲಿ ಶೇ 30.6ರಷ್ಟು ಇಳಿಕೆ ಕಂಡುಬಂದಿದೆ' ಎಂದು ಅವರು ಸಾಮಾಜಿಕ ಮಾಧ್ಯಮಗಳಲ್ಲಿ ಬರೆದುಕೊಂಡಿದ್ದಾರೆ.

'ದೆಹಲಿ ಹಾಗೂ ಉಪನಗರಗಳಲ್ಲಿ ಗಾಳಿಯ ಗುಣಮಟ್ಟ ತೀವ್ರವಾಗಿ ಕುಸಿಯುತ್ತಿದ್ದು, ಜನರು ತೊಂದರೆ ಅನುಭವಿಸುವಂತಾಗಿದೆ' ಎಂದಿದ್ದಾರೆ.

'ಕಳೆದ ವರ್ಷ ಸೆಪ್ಟೆಂಬರ್ 15ರಿಂದ ನವೆಂಬರ್ 2ರ ವರೆಗಿನ ಅವಧಿಯಲ್ಲಿ ಪಂಜಾಬ್‌ನಲ್ಲಿ ಕೂಳೆ ಸುಡುವ ಪ್ರಕರಣಗಳ ಸಂಖ್ಯೆ 1,266 ಇತ್ತು. ಈ ವರ್ಷ ಇದೇ ಅವಧಿಯಲ್ಲಿ 3,025 ಪ್ರಕರಣಗಳು ಕಂಡುಬಂದಿದ್ದು, ಶೇ 139ರಷ್ಟು ಹೆಚ್ಚಳ ಕಂಡುಬಂದಿದೆ' ಎಂದೂ ಅವರು ಹೇಳಿದ್ದಾರೆ.

ಉನ್ನತ ಶಿಕ್ಷಣ ಸಚಿವ ಸಿ.ಎನ್‌. ಅಶ್ವತ್ಥನಾರಾಯಣ ಹೇಳಿಕೆ

ಎಸ್‌ಜೆಪಿ ಕ್ಯಾಂಪಸ್‌ಗೆ ನಾಲ್ವಡಿ ಹೆಸರು

ಪ್ರಜಾವಾಣಿ ವಾರ್ತೆ



ಡಿಪ್ಲೊಮಾ ಪದವೀಧರರ ಘಟಿಕೋತ್ಸವದಲ್ಲಿ ಪದಕ ಪಡೆದ ವಿದ್ಯಾರ್ಥಿಗಳ ಜೊತೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಪಿ.ಪ್ರದೀಪ್ ಇದ್ದಾರೆ

ಬೆಂಗಳೂರು: 'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಚಿರಸ್ಥಾಯಿಗೊಳಿಸುವ ಉದ್ದೇಶದಿಂದ ಏಳು ತಾಂತ್ರಿಕ ಶಿಕ್ಷಣ ಕಾಲೇಜುಗಳನ್ನು ಒಳಗೊಂಡಿರುವ ಬೆಂಗಳೂರಿನ ಎಸ್.ಜೆ. ಪಾಲಿಟೆಕ್ನಿಕ್ (ಎಸ್‌ಜೆಪಿ) ಕ್ಯಾಂಪಸ್‌ಗೆ ಅವರ ಹೆಸರು ಇಡಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಇದೇ ಮೊದಲ ಬಾರಿಗೆ ನಡೆದ ಡಿಪ್ಲೊಮಾ ಪದವೀಧರರ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, 'ತಾಂತ್ರಿಕ ಶಿಕ್ಷಣ ಆಯುಕ್ತಾಲಯವನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಧ್ಯೇಯೋದ್ದೇಶ ಮತ್ತು ದೂರದೃಷ್ಟಿಗಳನ್ನು ಪ್ರತಿಬಿಂಬಿಸುವಂತೆ ರೂಪಿಸಲಾಗುವುದು' ಎಂದರು.

'ಈ ಕ್ಯಾಂಪಸ್ಸಿನಲ್ಲಿ ಎಸ್.ಜೆ. ಪಾಲಿಟೆಕ್ನಿಕ್, ಮಹಿಳೆಯರ ಸರ್ಕಾರಿ ಪಾಲಿಟೆಕ್ನಿಕ್, ಜಿಆರ್‌ಐಸಿ ಪಾಲಿಟೆಕ್ನಿಕ್, ಎಸ್.ಆರ್.ಸಿ.ಐ.ಬಿ.ಎಂ, ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ ಮತ್ತು ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿವೆ. ಅವೆಲ್ಲವೂ ನಾಲ್ವಡಿಯವರ ಕೊಡುಗೆಗಳಾಗಿವೆ' ಎಂದು ವಿವರಿಸಿದರು.

2022ರಲ್ಲಿ ಡಿಪ್ಲೊಮಾ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ನೀಡಲಾಯಿತು. ವಿವಿಧ ವಿಭಾಗಗಳ ರ‍್ಯಾಂಕ್ ವಿಜೇತರಿಗೆ ಚಿನ್ನ ಮತ್ತು ಬೆಳ್ಳಿ ಪದಕ ಪ್ರದಾನ ಮಾಡಲಾಯಿತು.

ಸಚಿವರು ಮಾತನಾಡಿ, 'ರಾಜ್ಯದ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಈಗ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು, ಅವರಲ್ಲಿ ಶೇ 30ರಷ್ಟು ಬಾಲಕಿಯರಿದ್ದಾರೆ. ಎನ್‌ಇಪಿಗೆ ಅನುಗುಣವಾಗಿ ತಾಂತ್ರಿಕ ಶಿಕ್ಷಣದಲ್ಲಿ ಶೇ 40ರಷ್ಟು ಬೋಧನೆ ಮತ್ತು ಶೇ 60ರಷ್ಟು ಪ್ರಾಯೋಗಿಕತೆಯನ್ನು ಅಳವಡಿಸಿಕೊಳ್ಳಲಾಗಿದ್ದು, ಇದರಿಂದ ಡಿಪ್ಲೊಮಾ ಪದವೀಧರರಿಗೆ ಕನಸಿನ ಉದ್ಯೋಗಗಳು ಸಿಗುತ್ತಿವೆ' ಎಂದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್ ಮಾತನಾಡಿ, 'ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಇಂಗ್ಲಿಷ್‌ನಲ್ಲಿ ಬೋಧನೆ ನಡೆಯುತ್ತಿದ್ದರೂ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಅಪಾರ ಪ್ರಯೋಜನವಾಗಿದೆ. ಇನ್ನು ನಾಲ್ಕು ತಿಂಗಳಲ್ಲಿ ಡಿಪ್ಲೊಮಾದ ಎಲ್ಲ ತರಗತಿಗಳೂ ಸ್ಮಾರ್ಟ್‌ಕ್ಲಾಸ್ ರೂಮುಗಳಾಗಲಿವೆ' ಎಂದರು.

ಚಿನ್ನದ ಪದಕಕ್ಕೆ 70ರ ವೃದ್ಧ ಪಾತ್ರ!

ಸಿವಿಲ್ ಡಿಪ್ಲೊಮಾದಲ್ಲಿ ಶಿರಸಿಯ 70ರ ಹಿರಿಯರಾದ ನಾರಾಯಣ ಭಟ್ ಶೇ 94.88ರಷ್ಟು ಅಂಕ ಗಳಿಸುವ ಮೂಲಕ ಪ್ರಥಮ ರ‍್ಯಾಂಕ್ ಪಡೆದುಕೊಂಡು, ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದು ವಿಶೇಷವಾಗಿತ್ತು. ಉಳಿದಂತೆ ರ‍್ಯಾಂಕ್ ವಿಜೇತರಾದ ಕೆ.ಎಸ್. ಸುಮಂತ ಉಪಾಧ್ಯಾಯ, ಶುಭಂಕರ್ ಚಕ್ರವರ್ತಿ, ದರ್ಶನ್, ಶಿವಾನಿ ಶ್ರೀಕಾಂತ ಕಲ್ಬುರ್ಗಿ, ಅಂಕಿತ್ ಶೆಟ್ಟಿ, ಆರ್.ಎಲ್. ಚಂದನಾ, ಕೆ.ಎಚ್. ಯಶಸ್ವಿನಿ, ಡಿ.ಎಸ್. ಐಶ್ವರ್ಯಾ, ಅಂಕಿತಾ, ವಿಜೇತ್, ಆರ್. ವಿಜಯ್, ಸ್ವಾತಿ ಕಾಂಬಳೆ, ಅನಿತಾ ಎರೆಸೇಮಿ, ಶರತ್ ಕುಮಾರ್, ಗೀತಾ ಹಂಗಳಕಿ, ರುಜಾರಿಯೊ ಮಿನಿನ್ ಡಿಸೋಜ, ಡಿ.ಎಂ. ವನುಶ್ರೀ ಸೇರಿದಂತೆ ಇನ್ನೂ ಹಲವರಿಗೆ ಸಚಿವರು ಪದಕ ಪ್ರದಾನ ಮಾಡಿದರು.

ರಕ್ಷಣಾ ಕಣ್ಗಾವಲಿನ ಬ್ಯಾಲಿಸ್ಟಿಕ್ ಕ್ಷಿಪಣಿ ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ವಿವಿಧ ರೀತಿಯ ಗುರಿಗಳನ್ನು ಭೇದಿಸುವ ಸಾಮರ್ಥ್ಯದ, ದೇಶೀಯವಾಗಿ ಅಭಿವೃದ್ಧಿಪಡಿಸಲಾದ 2ನೇ ಹಂತದ ಬ್ಯಾಲಿಸ್ಟಿಕ್ ಮಿಸೈಲ್ ಡಿಫೆನ್ಸ್ (ಬಿಎಂಡಿ) ಇಂಟರ್‌ಸೆಪ್ಟರ್ ಎಡಿ-1 ಕ್ಷಿಪಣಿಯ ಉಡಾವಣಾ ಪರೀಕ್ಷೆಯನ್ನು ಭಾರತ ಬುಧವಾರ ಯಶಸ್ವಿಯಾಗಿ ನಡೆಸಿದ್ದು, ರಕ್ಷಣಾ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆ ಮೂಡಿಸಿದೆ.

ಒಡಿಶಾ ಕರಾವಳಿಯ ಎಪಿಜೆ ಅಬ್ದುಲ್ ಕಲಾಂ ದ್ವೀಪದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ರಕ್ಷಣಾ ಕಣ್ಗಾವಲಿನ ಈ ಕ್ಷಿಪಣಿಯನ್ನು ಎಲ್ಲ ರೀತಿಯ ಶಸ್ತ್ರಾಸ್ತ್ರಗಳ ವ್ಯವಸ್ಥೆಯೊಂದಿಗೆ ಪ್ರಯೋಗಿಸಿತು ಎಂದು ರಕ್ಷಣಾ ಸಚಿವಾಲಯವು ತಿಳಿಸಿದೆ.

'ಇದೊಂದು ಅನನ್ಯ ಪ್ರಕಾರದ ಕಣ್ಗಾವಲು ಕ್ಷಿಪಣಿ. ವಿಶ್ವದ ಕೆಲವೇ ರಾಷ್ಟ್ರಗಳ ಬಳಿ ಇರುವ ಸುಧಾರಿತ ತಂತ್ರಜ್ಞಾನಗಳನ್ನು ಇದು ಒಳಗೊಂಡಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬಣ್ಣಿಸಿದ್ದಾರೆ.

ಎಡಿ–1 ದೀರ್ಘ ವ್ಯಾಪ್ತಿಯ ಕಣ್ಗಾವಲು ಕ್ಷಿಪಣಿಯಾಗಿದೆ.

'ಕುಟುಂಬದಲ್ಲಿ ಯಾರಾದರೂ ಮೃತಪಟ್ಟರೆ ಮಾತ್ರ ರಜೆ'

ಸಿಬ್ಬಂದಿಯ ಆಕ್ರೋಶಕ್ಕೆ ಕಾರಣವಾದ ಡಿಸಿಪಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಿಬ್ಬಂದಿ, ಅಧಿಕಾರಿಗಳಿಗೆ ರಜೆ ನೀಡುವ ವಿಚಾರದಲ್ಲಿ ಆಗ್ನೇಯ ವಿಭಾಗದ ಡಿಸಿಪಿ ಅವರು ಅ.28ರಂದು ಹೊರಡಿಸಿರುವ ಆದೇಶವು ವಿವಾದಕ್ಕೆ ಕಾರಣವಾಗಿದೆ.

ಪೊಲೀಸರಿಂದ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಡಿಸಿಪಿ ಸಿ.ಕೆ. ಬಾಬಾ ಅವರು ಸ್ಪಷ್ಟನೆ ನೀಡಿ ಪತ್ರ ಬರೆದಿದ್ದಾರೆ. 'ಜ್ಞಾಪನಾ ಪತ್ರವನ್ನು ವಿಭಿನ್ನ ರೀತಿಯಲ್ಲಿ ಅರ್ಥೈಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕೋರಿಕೆಗೆ ತಕ್ಕಂತೆ ರಜೆ ನೀಡಲಾಗುತ್ತಿದೆ' ಎಂದು ಸ್ಪಷ್ಟನೆ ನೀಡಿದ್ದಾರೆ.

ಆದೇಶದಲ್ಲಿ ಏನಿತ್ತು?: 'ಆಗ್ನೇಯ ವಿಭಾಗದ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾನ್‌ಸ್ಟೆಬಲ್‌ನಿಂದ ಇನ್‌ಸ್ಪೆಕ್ಟರ್ ಹುದ್ದೆಯ ತನಕ ಬೇರೆ ಬೇರೆ ಕಾರಣಕ್ಕೆ ರಜೆ ಮೇಲೆ ತೆರಳುತ್ತಿದ್ದಾರೆ. ಠಾಣೆ ಹಾಗೂ ಕಚೇರಿ ಕರ್ತವ್ಯಕ್ಕೆ ತೊಂದರೆ ಆಗುತ್ತಿರುವ ಕಾರಣದಿಂದ ಇನ್ನು ಮುಂದೆ ಯಾವುದೇ ಠಾಣೆಯ ಅಧಿಕಾರಿ, ಸಿಬ್ಬಂದಿ ಗಂಭೀರ ಸ್ವರೂಪದ ಕಾಯಿಲೆಯಿಂದ ಬಳಲುತ್ತಿದ್ದರೆ ಹಾಗೂ ಮನೆಗಳಲ್ಲಿ ಯಾರಾದರೂ ಮೃತಪಟ್ಟಲ್ಲಿ ಮಾತ್ರ ರಜೆಯ ಮೇಲೆ ತೆರಳಲು ಸೂಚಿಸಲಾಗಿದೆ. ಪದೇ ಪದೇ ಯಾವುದೇ ಸಕಾರಣವಿಲ್ಲದೇ ರಜೆಯ ಮೇಲೆ ತೆರಳಿದಲ್ಲಿ ಅವರ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಯಾವುದೇ ಠಾಣೆಯ ಠಾಣಾಧಿಕಾರಿಗಳು ಹಾಗೂ ಎಸಿಪಿ ಅವರು ಮೇಲಿನ ಕಾರಣ ಹೊರತುಪಡಿಸಿ ಬೇರೆ ರಜೆಗೆ ಶಿಫಾರಸು ಮಾಡದಂತೆ ಸೂಚಿಸಲಾಗಿದೆ. ಕಚೇರಿಗೆ ಬಂದು ರಜೆಯ ಶಿಫಾರಸು ಮಾಡಿದರೂ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ರಜೆ ಬೇಕಾದವರು ಡಿಸಿಪಿ ಅವರಿಂದ ರಜೆ ಮಂಜೂರು ಮಾಡಿಸಿಕೊಂಡೇ ಹೋಗಬೇಕು' ಎಂಬ ಆದೇಶಕ್ಕೆ ಪೊಲೀಸ್ ಸಿಬ್ಬಂದಿಯಿಂದ ಆಕ್ರೋಶ ವ್ಯಕ್ತವಾಗಿದೆ.

'ಸದಾ ನಾವು ಒತ್ತಡದಲ್ಲಿಯೇ ಕೆಲಸ ಮಾಡುತ್ತಿದ್ದೇವೆ. ರಜೆ ನೀಡದಿದ್ದರೆ ಹೇಗೆ? ಡಿಸಿಪಿ ಆದೇಶವು ಸರಿಯಲ್ಲ' ಎಂದು ಹೆಸರು ಹೇಳಲು ಬಯಸದ ಸಿಬ್ಬಂದಿಯೊಬ್ಬರು ಆಕ್ರೋಶ ಹೊರಹಾಕಿದ್ದಾರೆ.

ಆಕ್ರೋಶ ಹೆಚ್ಚಾದ ಮೇಲೆ ಸ್ಪಷ್ಟನೆ ನೀಡಿರುವ ಡಿಸಿಪಿ ಬಾಬಾ ಅವರು, '28ರ ಆದೇಶ ಕೆಲವರು ವಿಭಿನ್ನ ರೀತಿಯಲ್ಲಿ ಅರ್ಥೈಸಿಕೊಂಡಿದ್ದರಿಂದ ಗೊಂದಲ ಉಂಟಾಗಿದೆ. ರಾಜ್ಯೋತ್ಸವ, ಸೂಕ್ಷ್ಮ ಬಂದೋಬಸ್ತ್ ಗಮನದಲ್ಲಿಟ್ಟುಕೊಂಡು ಆಡಳಿತಾತ್ಮಕ ದೃಷ್ಟಿಯಿಂದ ಜ್ಞಾಪನಾ ಪತ್ರ ನೀಡಲಾಗಿತ್ತು. ಅಧಿಕಾರಿಗಳು ಸಕಾರಣವಿಲ್ಲದೆ ದೀರ್ಘಕಾಲಿಕ ರಜೆಯ ಮೇಲೆ ತೆರಳುವುದನ್ನು ತಾತ್ಕಾಲಿಕವಾಗಿ ಮುಂದೂಡುವ ಉದ್ದೇಶದಿಂದ ಹಾಗೂ ಕಚೇರಿಯ ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳಿಗೆ ಮಾತ್ರ ಈ ಪತ್ರ ನೀಡಲಾಗಿತ್ತು' ಎಂದು ಹೇಳಿದ್ದಾರೆ.

ಪಿಸ್ತೂಲ್ ತೋರಿಸಿ ಬೆದರಿಕೆ



ಚಂದನ್



ವರದರಾಜು

ಬೆಂಗಳೂರು: ಮನೆ ಭೋಗ್ಯದ ಹಣ ವಾಪಸ್ ನೀಡುವ ವಿಚಾರದಲ್ಲಿ ಗಲಾಟೆ ನಡೆದು, ಭೋಗ್ಯದಾರರಿಗೆ ಮನೆ ಮಾಲೀಕ ರಾಮಚಂದ್ರಪ್ಪ ಎಂಬುವವರ ಕಡೆಯವರು ಪಿಸ್ತೂಲ್ ತೋರಿಸಿ ಬೆದರಿಕೆ ಹಾಕಿದ್ದು, ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮುದ್ದಿನಪಾಳ್ಯದ ರಾಯಲ್ ಬೋರ್‌ವೆಲ್ಸ್‌ನ ಅನಿಲ್, ಭರತ್, ವರದರಾಜು ಹಾಗೂ ಚಂದನ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ವರದರಾಜು ಹಾಗೂ ಚಂದನ್ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ರಾಮಚಂದ್ರಪ್ಪ ಅವರ ಮನೆಯನ್ನು ಪಿ. ಕೌಶಿಕ್ ಚಿರಾಗ್ ಎಂಬುವವರು ₹ 8 ಲಕ್ಷಕ್ಕೆ ಭೋಗ್ಯಕ್ಕೆ ಪಡೆದಿದ್ದರು. ಮನೆ ಖಾಲಿ ಮಾಡಿ ಹಣ ವಾಪಸ್ ನೀಡುವ ವಿಚಾರದಲ್ಲಿ ರಾಮಚಂದ್ರಪ್ಪ ಹಾಗೂ ಭರತ್ ಎಂಬುವವರು ಕೌಶಿಕ್ ತಾಯಿ ಜೊತೆಗೆ ಗಲಾಟೆ ನಡೆಸಿದ್ದರು.

'ಭರತ್‌ಗೆ ಕೌಶಿಕ್ ಕರೆ ಮಾಡಿ ತಾಯಿ ಜತೆಗೆ ಗಲಾಟೆ ನಡೆಸಿದ ವಿಚಾರವನ್ನು ಪ್ರಶ್ನಿಸಿದ್ದರು. ಕೌಶಿಕ್ ಹಾಗೂ ನಂದನ್ ಅವರು ಮುದ್ದಿನಪಾಳ್ಯ ಮುಖ್ಯರಸ್ತೆಯ ರಾಯಲ್ ಬೋರ್‌ವೆಲ್ ಕಚೇರಿಗೆ ಖುದ್ದು ತೆರಳಿ ಭರತ್ ಅವರ ಎದುರೇ ಮತ್ತೆ ಗಲಾಟೆ ವಿಚಾರವನ್ನು ಪ್ರಸ್ತಾಪಿಸಿದ್ದರು. ಅಲ್ಲಿ ಗಲಾಟೆ ನಡೆದು ಇಬ್ಬರ ಮೇಲೆ ಹಲ್ಲೆ ನಡೆಸಲಾಗಿದೆ. ಕೊಠಡಿಯಲ್ಲಿ ಕೂಡಿ ಹಲ್ಲೆ ನಡೆಸಲಾಗಿದೆ. ಭೋಗ್ಯಕ್ಕೆ ಬಂದು ಮನೆ ಖಾಲಿ ಮಾಡುವುದನ್ನು ಬಿಟ್ಟು ಕಚೇರಿಗೆ ಬಂದು ಪ್ರಶ್ನೆ ಮಾಡುವಷ್ಟು ಧೈರ್ಯ ಬಂತೇ ಎಂದು ಆರೋಪಿ ಅನಿಲ್ ಇಬ್ಬರ ಹಣೆಗೂ ಪಿಸ್ತೂಲ್ ಇಟ್ಟು ಬೆದರಿಕೆ ಹಾಕಿದ್ದಾನೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಕೌಶಿಕ್, ನಂದನ್‌ಗೆ ಚಾಕುವಿನಿಂದ ತಿವಿದು ಗಾಯಗೊಳಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಭೌಗೋಳಿಕ ಸಮಗ್ರತೆ ರಕ್ಷಣೆ: ಪಾಕ್‌ಗೆ ಬೆಂಬಲ ಘೋಷಿಸಿದ ಚೀನಾ

ಪ್ರಜಾವಾಣಿ ವಾರ್ತೆ

ನವದೆಹಲಿ: ತನ್ನ ಸಾರ್ವಭೌಮತೆ ಹಾಗೂ ಭೌಗೋಳಿಕ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಪಾಕಿಸ್ತಾನಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಚೀನಾ ಬುಧವಾರ ಘೋಷಿಸಿದೆ.

ಪಾಕಿಸ್ತಾನ ಆಕ್ರಮಿಸಿಕೊಂಡಿರುವ ತನ್ನ ಪ್ರದೇಶವನ್ನು ಮರುವಶ ಮಾಡಿಕೊಳ್ಳುವುದಾಗಿ ಇತ್ತೀಚೆಗೆ ಭಾರತ ಹೇಳಿತ್ತು. ಇದರ ಬೆನ್ನಲ್ಲೇ ಈಗ ಪಾಕಿಸ್ತಾನಕ್ಕೆ ಚೀನಾ ಈ ಅಭಯ ನೀಡಿರುವುದು ಗಮನಾರ್ಹ.

ಚೀನಾಕ್ಕೆ ಭೇಟಿ ನೀಡಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಅವರು, ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದರು. ಈ ವೇಳೆ, ಜಿನ್‌ಪಿಂಗ್ ಅವರಿಂದ ಈ ಭರವಸೆ ಹೊರಬಿದ್ದಿದೆ.

ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸುವ ಮೂಲಕ ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಲು ಷಿ ಹಾಗೂ ಷರೀಫ್ ಚರ್ಚಿಸಿದ್ದಾರೆ.

ಈ ಬೆಳವಣಿಗೆ ಬಗ್ಗೆ ಭಾರತ ಕಳವಳ ಹಾಗೂ ಆಕ್ಷೇಪ ವ್ಯಕ್ತಪಡಿಸಿದೆ. ಉಭಯ ದೇಶಗಳ ಈ ನಡೆ ದೇಶದ ಸಾರ್ವಭೌಮತೆಯನ್ನು ಕುಗ್ಗಿಸುವ ಹುನ್ನಾರವಾಗಿದೆ ಎಂದೂ ಭಾರತ ಹೇಳಿದೆ.

ಗಿಲ್ಗಿಟ್, ಬಾಲ್ಟಿಸ್ತಾನ ಸೇರಿದಂತೆ ಪಾಕಿಸ್ತಾನ ಆಕ್ರಮಿತ ಪ್ರದೇಶಗಳು ಮರುವಶವಾಗದ ಹೊರತು ಭಾರತದ ಅಭಿವೃದ್ಧಿಯ ಪಯಣ ಪೂರ್ಣಗೊಳ್ಳುವುದಿಲ್ಲ ಎಂದು ಅಕ್ಟೋಬರ್ 27ರಂದು ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್ ಹೇಳಿದ್ದರು.

ಎನ್‌ಎಚ್‌ವಿಪಿ ಶಾಲೆಯ ಕಾರ್ಯಕ್ರಮದಲ್ಲಿ ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಸಲಹೆ

'ಅಂಕವಲ್ಲ, ಮಾನವೀಯ ಮೌಲ್ಯ ಮುಖ್ಯ'

ಪ್ರಜಾವಾಣಿ ವಾರ್ತೆ



ಬನಶಂಕರಿಯ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆಯಲ್ಲಿ ಮಾನವೀಯ ಮೌಲ್ಯಗಳ ಪ್ರಯೋಗಾಲಯಕ್ಕೆ ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಬುಧವಾರ ಚಾಲನೆ ನೀಡಿ ಮಕ್ಕಳೊಂದಿಗೆ ಸಂವಾದ ನಡೆಸಿದರು. ಶಾಲೆಯ ಸದಸ್ಯ ಕಾರ್ಯದರ್ಶಿ ಐಶ್ವರ್ಯ ಡಿ.ಕೆ.ಎಸ್‌. ಹೆಗ್ಡೆ, ಡಾ. ಬಿಂದು ಹರಿ ಇದ್ದರು.

ಬೆಂಗಳೂರು: 'ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗಳಿಸುವ ಅಂಕಕ್ಕೆ ಮಾತ್ರ ಪ್ರಾಮುಖ್ಯ ನೀಡಬಾರದು. ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಿದರೆ ಅದು ಅವರ ಜೀವನಕ್ಕೆ ಆಧಾರವಾಗುತ್ತದೆ' ಎಂದು ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಹೇಳಿದರು.

ಬನಶಂಕರಿಯಲ್ಲಿರುವ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆಯಲ್ಲಿ ಮಾನವೀಯ ಮೌಲ್ಯಗಳ ಶಿಕ್ಷಣ ಪ್ರಯೋಗಾಲಯಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಹೆಚ್ಚು ಅಂಕ ಗಳಿಸಲು ಪೋಷಕರು ಮಕ್ಕಳ ಮೇಲೆ ಒತ್ತಡ ಹಾಕುತ್ತಾರೆ. ಶೇ 90ರಷ್ಟು ಅಂಕ ಗಳಿಸಿದರೂ ಸಮಾಧಾನ ಇರುವುದಿಲ್ಲ. ಪಕ್ಕದ ಮನೆಯ ಮಕ್ಕಳು, ಇತರೆ ವಿದ್ಯಾರ್ಥಿಗಳೊಂದಿಗೆ ಹೋಲಿಕೆ ಮಾಡುತ್ತಾರೆ. ಇದು ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಂಕಗಳೇ ಸರ್ವಸ್ವ ಅಲ್ಲ. ಜೀವನದಲ್ಲಿ ಮಾನವೀಯ ಮೌಲ್ಯಗಳೊಂದಿಗೆ, ಎಲ್ಲ ಪರಿಸ್ಥಿತಿಯನ್ನೂ ಧೈರ್ಯ ಎದುರಿಸುವ ಆತ್ಮವಿಶ್ವಾಸವನ್ನು ಅವರಲ್ಲಿ ಬೆಳೆಸಬೇಕು' ಎಂದು ಕರೆ ನೀಡಿದರು.

'ನನ್ನ ಹಲವು ವಿದ್ಯಾರ್ಥಿಗಳು ಅತ್ಯುತ್ತಮ ಅಂಕ ಗಳಿಸಿದ್ದರೂ ಅವರು ಜೀವನದಲ್ಲಿ ಯಶಸ್ಸು ಸಾಧಿಸದಿರುವ ಸಾಕಷ್ಟು ಉದಾಹರಣೆಗಳಿವೆ. ಮಕ್ಕಳ ತಪ್ಪುಗಳನ್ನು ಮೊದಲು ಮನೆಯಲ್ಲಿ ಅದರಲ್ಲೂ ತಾಯಿ ಸರಿಪಡಿಸಬೇಕು' ಎಂದರು.

'ಮಾನವೀಯ ಮೌಲ್ಯಗಳನ್ನು ಶಿಕ್ಷಣದ ಜೊತೆಗೆ ಹೇಳಿಕೊಟ್ಟು, ಅವರ ಪ್ರಶ್ನೆಗಳಿಗೆ ಇಲ್ಲಿಯೇ ಉತ್ತರ ಕಂಡುಕೊಳ್ಳುವ ಪ್ರಯೋಗಾಲಯಗಳು ಬಹಳ ಮುಖ್ಯ. ಇಂತಹ ಪ್ರಯೋಗಾಲಯಗಳು ರಾಜ್ಯದ ಎಲ್ಲ ಶಾಲೆಗಳಲ್ಲೂ ಇರಬೇಕು ಎಂಬುದು ನನ್ನ ಬಯಕೆ' ಎಂದರು.

'ನಮ್ಮ ಪ್ರಾಂಶುಪಾಲರು ಹಾಗೂ ಅವರ ತಂಡ ಮಾನವೀಯ ನಾಯಕರನ್ನು ಪರಿಚಯಿಸುವ ಪರಿಕಲ್ಪನೆಗೆ ಮುಂದಾಗಿದ್ದಾರೆ. ನಿಮಗೆ ನೀವೇ ನಾಯಕರು. ನೀವು ನಿಮ್ಮಲ್ಲಿರುವ ಪ್ರತಿಭೆ, ಮಾಹಿತಿಯನ್ನು ಬೇರೆಯವರೊಂದಿಗೆ ಹಂಚಿಕೊಳ್ಳಬೇಕು, ಬೇರೆಯವರ ಬಗ್ಗೆ ಕಾಳಜಿ ಹೊಂದಿರಬೇಕು' ಎಂದು ನ್ಯಾಷನಲ್ ಎಜುಕೇಷನ್ ಫೌಂಡೇಷನ್ (ಎನ್‌ಇಎಫ್) ಅಧ್ಯಕ್ಷ ಡಿ.ಕೆ. ಶಿವಕುಮಾರ್ ನುಡಿದರು.

'ಮೂರು ವರ್ಷಗಳ ಹಿಂದೆ ಮಾನವೀಯ ಮೌಲ್ಯಾಧಾರಿತ ಶಿಕ್ಷಣದ ಆಲೋಚನೆ ಆರಂಭವಾಯಿತು. ನಮ್ಮ ಪ್ರಾಂಶು ಪಾಲರು ಹಾಗೂ ಶಿಕ್ಷಕರ ತಂಡದ ಪರಿಶ್ರಮದೊಂದಿಗೆ ಈ ಪ್ರಯೋಗಾಲಯ ಜೀವ ತಾಳಿದೆ. ಮುಂದಿನ ಐದಾರು ವರ್ಷದಲ್ಲಿ ಇದರ ಪ್ರಭಾವ ಅರಿವಾಗಲಿದೆ' ಎಂದು ಸಂಸ್ಥೆಯ ಟ್ರಸ್ಟಿ ಕಾರ್ಯದರ್ಶಿ ಐಶ್ವರ್ಯ ಡಿ.ಕೆ.ಎಸ್. ಹೆಗ್ಡೆ ಹೇಳಿದರು.

ಡಾ. ಬಿಂದು ಹರಿ, ಹೆಚ್ಚುವರಿ ಟ್ರಸ್ಟಿ ಕಾರ್ಯದರ್ಶಿ ವೆಂಕಟಪ್ಪ, ಟ್ರಸ್ಟಿಗಳಾದ ಡಿ.ಕೆ. ಸುರೇಶ್, ಉಷಾ ಶಿವಕುಮಾರ್, ಶಶಿಕುಮಾರ್, ಕೆ. ಶ್ರೀನಿವಾಸ್, ಪ್ರಾಂಶುಪಾಲರಾದ ನಿರ್ಮಲಾ ಕೃಷ್ಣನ್, ಉಪ ಪ್ರಾಂಶುಪಾಲರಾದ ಲಿಜು ಉಪಸ್ಥಿತರಿದ್ದರು.

ಒಂದಾದ ದಸಂಸ ಹತ್ತು ಬಣಗಳು: ಬೆಂಗಳೂರಿನಲ್ಲಿ ಐಕ್ಯತಾ ಸಮಾವೇಶ

ಡಿ.6ಕ್ಕೆ 'ದಲಿತರ ಸಾಂಸ್ಕೃತಿಕ ಪ್ರತಿರೋಧ'

ಪ್ರಜಾವಾಣಿ ವಾರ್ತೆ



ಮೈಸೂರಿನ ಪುರಭವನದಲ್ಲಿ ದಲಿತ ಸಂಘರ್ಷ ಸಮಿತಿ ಐಕ್ಯ ಹೋರಾಟ ಚಾಲನಾ ಸಮಿತಿಯು ಬುಧವಾರ ಆಯೋಜಿಸಿದ್ದ ದಸಂಸ ವಿಭಾಗೀಯ ಸಮಾವೇಶವನ್ನು ಮುಖಂಡ ಮಾವಳ್ಳಿ ಶಂಕರ್ ಅವರು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿದರು. ದಸಂಸ ವಿವಿಧ ಬಣಗಳ ಬೆಟ್ಟಯ್ಯ ಕೋಟೆ, ಎನ್.ಮುನಿಸ್ವಾಮಿ, ಡಾ.ಡಿ.ಜಿ.ಸಾಗರ್, ವಿ.ನಾಗರಾಜ್, ಎನ್.ವೆಂಕಟೇಶ ಇದ್ದರು.

ಮೈಸೂರು: 'ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ರಕ್ಷಣೆಗಾಗಿ ದಲಿತ ಸಂಘರ್ಷ ಸಮಿತಿಯ ಎಲ್ಲ ಹತ್ತು ಬಣಗಳೂ ಒಂದಾಗಿವೆ. ಅದರ ಅಂಗವಾಗಿ ಡಿ.6ರಂದು 'ದಲಿತರ ಸಾಂಸ್ಕೃತಿಕ ಪ್ರತಿರೋಧ'- ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶವನ್ನು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ದಸಂಸ ಮುಖಂಡ ಇಂದೂಧರ ಹೊನ್ನಾಪುರ ತಿಳಿಸಿದರು.

'1970ರ ನಂತರ ದಲಿತ ಸಂಘರ್ಷ ಸಮಿತಿ ವಿವಿಧ ಬಣಗಳಾಗಿ ಒಡೆದುಹೋಗಿತ್ತು. ಸಂವಿಧಾನವನ್ನು ಕೋಮುವಾದದಿಂದ ರಕ್ಷಿಸಲು ಮತ್ತೆ ಒಂದಾಗಿ ಸಮಾವೇಶ ಆಯೋಜಿಸುತ್ತಿವೆ' ಎಂದು ಬುಧವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಅಂಬೇಡ್ಕರ್ ಪರಿನಿರ್ವಾಣ ದಿನದಂದು ಬೆಳಿಗ್ಗೆ 11ಕ್ಕೆ ದಸಂಸ ಮುಖಂಡರಾದ ದೇವನೂರ ಮಹದೇವ, ಎಸ್.ಮರಿಸ್ವಾಮಿ, ಕೋಟಿಗಾನಹಳ್ಳಿ ರಾಮಯ್ಯ, ರಾಮದೇವ ರಾಕೆ, ಸಿ.ಬಸವಲಿಂಗಯ್ಯ ಸೇರಿದಂತೆ ಸಂಘಟನೆಯ ಎಲ್ಲರೂ ಭಾಗವಹಿಸಲಿದ್ದಾರೆ' ಎಂದರು.

'ಬ್ರಾಹ್ಮಣ್ಯ, ಮನುಧರ್ಮವನ್ನು ಬಿಜೆಪಿ ಮೂಲಕ ಸ್ಥಾಪಿಸಲು ಆರ್‌ಎಸ್‌ಎಸ್ ಮುಂದಾಗಿದೆ. ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕಾಪಾಡುವುದು ಇಂದಿನ ತುರ್ತು. ಇಂದಿರಾಗಾಂಧಿ ಸರ್ವಾಧಿಕಾರದ ವಿರುದ್ಧ ದಸಂಸ ಅಂದು ಹೋರಾಡಿತ್ತು. ಇದೀಗ ಮತ್ತೆ ಬಿಜೆಪಿ, ಮೋದಿ ಸರ್ವಾಧಿಕಾರದ ವಿರುದ್ಧ ಹೋರಾಡಲಿದೆ. ಸಾಂಸ್ಕೃತಿಕ ಚಳವಳಿ ನಡೆಸಲಿದೆ' ಎಂದರು.

ಮುಖಂಡ ಡಾ.ಡಿ.ಜಿ.ಸಾಗರ್ ಮಾತನಾಡಿ, 'ಮೀಸಲಾತಿಯನ್ನು ಕಿತ್ತು ಹಾಕಲೆಂದು ಸಾರ್ವಜನಿಕ ಉದ್ದಿಮೆಗಳ ಮಾರಾಟ ನಡೆದಿದೆ. ಬಂಡವಾಳಶಾಹಿಗಳ ಸಾಲ ಮನ್ನಾ ಮಾಡಿ ಬಡವರ ಮೇಲೆ ತೆರಿಗೆ ಹೊರೆಯನ್ನು ಬಿಜೆಪಿ ಸರ್ಕಾರ ಹೊರಿಸಿದೆ' ಎಂದು ದೂರಿದರು.

ಮುಖಂಡರಾದ ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ಅಣ್ಣಯ್ಯ, ಎನ್.ವೆಂಕಟೇಶ್, ವಿ.ನಾಗರಾಜ್, ಎನ್.ಮುನಿಸ್ವಾಮಿ, ಬೆಟ್ಟಯ್ಯಕೋಟೆ, ಆಲಗೂಡು ಶಿವಕುಮಾರ್ ಇದ್ದರು.

ವಿಭಾಗೀಯ ಸಮಾವೇಶ: 'ಐಕ್ಯತಾ ಸಮಾವೇಶದ ಪೂರ್ವಭಾವಿಯಾಗಿ, ನಗರದ ಪುರಭವನದಲ್ಲಿ ಸಮಿತಿಯ ವಿಭಾಗೀಯ ಸಮಾವೇಶ ನಡೆಯಿತು. ದಸಂಸದ ಎಲ್ಲ ಬಣಗಳ ಮುಖಂಡರು ಪಾಲ್ಗೊಂಡಿದ್ದರು. ಉಳಿದ ವಿಭಾಗಗಳಲ್ಲೂ ಸಮಾವೇಶ ನಡೆಯಲಿದೆ' ಎಂದು ಸಮಿತಿ ಮುಖಂಡರಲ್ಲಿ ಒಬ್ಬರಾದ ಎನ್.ಮುನಿಸ್ವಾಮಿ ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆ: ಒಬ್ಬ ವಶಕ್ಕೆ

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ ಪ್ರಕರಣ ಸಂಬಂಧ ಕಾನೂನು ಸಂಘರ್ಷಕ್ಕೆ ಒಳಪಟ್ಟ ಒಬ್ಬ ಬಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಅದೇ ಗ್ರಾಮದ 16 ವರ್ಷದ ಬಾಲಕ ಬಯಲು ಬಹಿರ್ದೆಸೆಗೆ ಹೋಗಿದ್ದ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಕೊಲೆ ಮಾಡಿದ್ದು ವಿಚಾರಣೆಯಲ್ಲಿ ತಿಳಿದು ಬಂದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ 'ಪ್ರಜಾವಾಣಿ'ಗೆ ತಿಳಿಸಿದರು.

'ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿದ್ದ ಬಾಲಕ ಮೊಬೈಲ್ ಫೋನ್‌ನಲ್ಲಿ ಎಲ್ಲಾ ತರಹದ ವಿಡಿಯೊಗಳನ್ನು ನೋಡುತ್ತಿದ್ದ. ಬಯಲು ಬಹಿರ್ದೆಸೆಗೆ ಹೋಗುತ್ತಿದ್ದ ಬಾಲಕಿಯನ್ನು ಬಲವಂತವಾಗಿ ಎತ್ತಿಕೊಂಡು ಹೋಗಿ ಅತ್ಯಾಚಾರ ಎಸಗಿ, ಕೊಲೆ ಮಾಡಿದ್ದಾಗಿ ವಿಚಾರಣೆಯಲ್ಲಿ ಒಪ್ಪಿದ್ದಾನೆ. ವೈದ್ಯಕೀಯ ತಪಾಸಣೆಗೆ ಒಳಪಡಿಸಿದ ಬಳಿಕ ಆತನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು' ಎಂದರು.

ಪ್ರವೀಣ್ ಕುಟುಂಬಕ್ಕೆ ಬಿಜೆಪಿಯಿಂದ ₹60 ಲಕ್ಷ ವೆಚ್ಚದಲ್ಲಿ ಮನೆ ನಿರ್ಮಾಣ

ಪ್ರಜಾವಾಣಿ ವಾರ್ತೆ



ಪ್ರವೀಣ್ ನೆಟ್ಟಾರು

ಸುಳ್ಯ (ದಕ್ಷಿಣ ಕನ್ನಡ): ಹತ್ಯೆಯಾದ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ದಿವಂಗತ ಪ್ರವೀಣ್ ನೆಟ್ಟಾರು ಅವರ ಕುಟುಂಬಕ್ಕೆ ಬಿಜೆಪಿಯಿಂದ ಮನೆ ನಿರ್ಮಿಸಿಕೊಡಲಾಗುತ್ತಿದ್ದು, ಬುಧವಾರ ಭೂಮಿಪೂಜೆ ನೆರವೇರಿಸಲಾಯಿತು.

ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ದಕ್ಷಿಣ ಕನ್ನಡ ಸಂಸದರೂ ಆಗಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, 'ಪ್ರವೀಣ್ ನೆಟ್ಟಾರು ಕುಟುಂಬದವರಿಗೆ ಬೆಳ್ಳಾರೆ ಸಮೀಪದ ನೆಟ್ಟಾರುವಿನಲ್ಲಿ 2,700 ಚದರ ಅಡಿ ವಿಸ್ತೀರ್ಣದ ಮನೆ ನಿರ್ಮಿಸುತ್ತಿದ್ದು, ಅಂದಾಜು ₹60 ಲಕ್ಷ ವೆಚ್ಚವಾಗಲಿದೆ. ಸಂಪೂರ್ಣ ವೆಚ್ಚವನ್ನು ಪಕ್ಷದಿಂದಲೇ ಭರಿಸಲಾಗುವುದು. ಮುಗದಿಂದ ಗುತ್ತಿಗೆ ಕಂಪನಿಗೆ ಕಾಮಗಾರಿ ವಹಿಸಿದ್ದು, 2023ರ ಮೇ ವೇಳೆಗೆ ಮನೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವುದಾಗಿ ಗುತ್ತಿಗೆದಾರರು ತಿಳಿಸಿದ್ದಾರೆ' ಎಂದು ಹೇಳಿದರು.

'ಪ್ರವೀಣ್ ಅವರು ಪಕ್ಷ ಮತ್ತು ಸಂಘಟನೆಗಾಗಿ ದುಡಿದಿದ್ದಾರೆ. ಅವರ ಅಗಲಿಕೆ ಪಕ್ಷಕ್ಕೆ, ಸಂಘಟನೆಗೆ ದೊಡ್ಡ ನಷ್ಟ. ಮನೆ ನಿರ್ಮಿಸಬೇಕು ಎಂಬ ಅವರ ಕನಸನ್ನು ನನಸು ಮಾಡಲು ಪಕ್ಷವು ಕ್ರಮ ಕೈಗೊಂಡಿದೆ. ಕುಟುಂಬದವರ ನಿರೀಕ್ಷೆಯ ಪ್ರಕಾರ, ಕುಟುಂಬದ ವಾಸ್ತವ್ಯದಲ್ಲಿರುವ ಜಾಗದಲ್ಲೇ ಮನೆ ನಿರ್ಮಿಸಲಾಗುತ್ತಿದೆ. ಅವರ ಕುಟುಂಬದ ಜೊತೆಗೆ ಪಕ್ಷ ಮತ್ತು ಸಂಘಟನೆ ಇದ್ದು ಎಲ್ಲಾ ಸಹಾಯ-ಸಹಕಾರ ನೀಡಲು ಬದ್ಧರಾಗಿದ್ದೇವೆ. ಅದರ ಮೊದಲ ಹಂತವಾಗಿ ಮನೆ ನಿರ್ಮಾಣ ಕಾರ್ಯವನ್ನು ಆರಂಭಿಸಲಾಗಿದೆ' ಎಂದು ತಿಳಿಸಿದರು.

ತಮ್ಮ ಕುಟುಂಬದ ಬೆಂಬಲಕ್ಕೆ ನಿಂತಿದ್ದಕ್ಕಾಗಿ ಪಕ್ಷದ ಮುಖಂಡರಿಗೆ ಧನ್ಯವಾದ ಹೇಳಿದ ಪ್ರವೀಣ್ ಅವರ ಪತ್ನಿ ನೂತನ ಕುಮಾರಿ, 'ಪತಿಯನ್ನು ಹತ್ಯೆ ಮಾಡಿದವರನ್ನು ಬಂಧಿಸಿ ಶಿಕ್ಷೆ ವಿಧಿಸಬೇಕು' ಎಂದು ಆಗ್ರಹಿಸಿದರು.

ಪ್ರವೀಣ್ ಅವರ ತಂದೆ ಶೇಖರ ಪೂಜಾರಿ, ತಾಯಿ ರತ್ನಾವತಿ ಹಾಗೂ ಕುಟುಂಬ ವರ್ಗದವರು, ಸಚಿವರಾದ ಎಸ್.ಅಂಗಾರ, ಕೋಟ ಶ್ರೀನಿವಾಸ ಪೂಜಾರಿ, ಪುತ್ತೂರು ಶಾಸಕ ಸಂಜೀವ ಮಠಂದೂರು, ರಾಜ್ಯ ಮೀನುಗಾರಿಕಾ ನಿಗಮದ ಅಧ್ಯಕ್ಷ ಎ.ವಿ. ತೀರ್ಥರಾಮ ಹಾಗೂ ಪಕ್ಷದ ಮುಖಂಡರು ಭಾಗವಹಿಸಿದ್ದರು.

ಪ್ರವೀಣ್ ಕುಟುಂಬಕ್ಕೆ ರಾಜ್ಯ ಸರ್ಕಾರ ₹25 ಲಕ್ಷ ಪರಿಹಾರ ನೀಡಿದೆ. ಬಿಜೆಪಿಯಿಂದ ₹25 ಲಕ್ಷ ಹಾಗೂ ಬಿಜೆಪಿ ಯುವ ಮೋರ್ಚಾದಿಂದ ₹15 ಲಕ್ಷ ನೆರವು ನೀಡಲಾಗಿದೆ. ಪ್ರವೀಣ್ ಅವರ ಪತ್ನಿ ನೂತನ ಕುಮಾರಿ ಅವರಿಗೆ ಮುಖ್ಯಮಂತ್ರಿ ಸಚಿವಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ ನೌಕರಿ ನೀಡಿದ್ದು, ದಕ್ಷಿಣ ಕನ್ನಡದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಲು ಅವರಿಗೆ ಅವಕಾಶ ಕಲ್ಪಿಸಲಾಗಿದೆ.

6ರಂದು ಖರ್ಗೆ ರಾಜ್ಯಕ್ಕೆ: ಸ್ವಾಗತಕ್ಕೆ 'ಸರ್ವೋದಯ ಸಮಾವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿಯ ನೂತನ ಅಧ್ಯಕ್ಷರಾದ ಬಳಿಕ ಇದೇ 6ರಂದು ರಾಜ್ಯಕ್ಕೆ ಮೊದಲ ಬಾರಿಗೆ ಮಲ್ಲಿಕಾರ್ಜುನ ಖರ್ಗೆ ಬರಲಿದ್ದು ಅವರನ್ನು ಅದ್ದೂರಿಯಾಗಿ ಸ್ವಾಗತಿಸಲು ಅರಮನೆ ಮೈದಾನದಲ್ಲಿ 'ಸರ್ವೋದಯ ಸಮಾವೇಶ' ಹಮ್ಮಿಕೊಳ್ಳಲು ರಾಜ್ಯ ಕಾಂಗ್ರೆಸ್ ನಿರ್ಧರಿಸಿದೆ.

'ಅಂದು ಮಧ್ಯಾಹ್ನ 2.35ಕ್ಕೆ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಪಕ್ಷದ ನೂರಾರು ನಾಯಕರು, ರಾಜ್ಯದ ವಿವಿಧ ಮೂಲೆಗಳ ಸಾವಿರಾರು ಕಾರ್ಯಕರ್ತರು ಭಾಗವಹಿಸಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಬೇರೆ ರಾಜ್ಯಗಳಿಗೆ ಪ್ರವಾಸ ಹೋಗುವ ಮೊದಲು ಸ್ವಂತ ರಾಜ್ಯಕ್ಕೆ ಹೋಗಬೇಕೆಂದು ಖರ್ಗೆ ಬಯಸಿದ್ದಾರೆ. ಹೀಗಾಗಿ, ಪಕ್ಷದ ಎಲ್ಲ ನಾಯಕರು ಚರ್ಚಿಸಿ, ನ. 6ರಂದು ಬರುವಂತೆ ಅವರಿಗೆ ಮನವಿ ಮಾಡಿದ್ದೇವೆ. 6ರಂದು ಬೆಳಿಗ್ಗೆ 10.50ಕ್ಕೆ ನಗರಕ್ಕೆ ತಲುಪಲಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

'ಖರ್ಗೆಯವರ ಸ್ವಾಗತ ಕಾರ್ಯಕ್ರಮಕ್ಕೆ ಪಕ್ಷ ಮಾತ್ರವಲ್ಲದೆ, ಹಲವು ಸಂಘಟನೆಗಳು ಕೂಡ ಬೆಂಬಲ ನೀಡಿವೆ. ಈ ಸಮಾವೇಶಕ್ಕೆ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ವಾರ್ಡ್ ಚುನಾವಣೆಯಲ್ಲಿ ಗೆದ್ದವರು, ಸೋತವರು, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್, ಕಿಸಾನ್ ಘಟಕ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಘಟಕ ಸೇರಿದಂತೆ ವಿವಿಧ ಘಟಕಗಳ ಮುಖಂಡರು ಬರುವಂತೆ ತಿಳಿಸಲಾಗಿದೆ' ಎಂದೂ ಅವರು ಹೇಳಿದರು.

ಕೌನ್ಸೆಲಿಂಗ್ ವಿಳಂಬ: ತಪ್ಪದ ಸಂಕಷ್ಟ

ಪ್ರಜಾವಾಣಿ ವಾರ್ತೆ

ಮಂಗಳೂರು: 'ವೃತ್ತಿಪರ ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಕೌನ್ಸೆಲಿಂಗ್ ವಿಳಂಬದಿಂದಾಗಿ ವಿದ್ಯಾರ್ಥಿಗಳು ಸಂಕಷ್ಟ ಎದುರಿಸುತ್ತಿದ್ದಾರೆ. ಅರೆ ವೈದ್ಯಕೀಯ ಕೋರ್ಸ್‌ಗಳ ತರಗತಿಗಳು ಆರಂಭವಾಗಿ ಒಂದೂವರೆ ತಿಂಗಳು ಕಳೆದರೂ ಸರ್ಕಾರಿ ಕೋಟಾದ ಸೀಟುಗಳ ಕೌನ್ಸೆಲಿಂಗ್ ಮುಗಿದಿಲ್ಲ' ಎಂದು ವಿಧಾನಸಭೆಯ ವಿರೋಧಪಕ್ಷದ ಉಪನಾಯಕ ಯು.ಟಿ.ಖಾದರ್ ಟೀಕಿಸಿದರು.

ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರದ ವಿಳಂಬ ನೀತಿಯಿಂದಾಗಿ ವಿದ್ಯಾರ್ಥಿಗಳಿಗೆ ಒಂದೂವರೆ ತಿಂಗಳ ಕಲಿಕಾ ಅವಧಿಯೇ ನಷ್ಟವಾಗಿದೆ. ಸಿಇಟಿಯಲ್ಲಿ ಉತ್ತಮ ಅಂಕ ಪಡೆದ ಕೆಲವು ವಿದ್ಯಾರ್ಥಿಗಳು ನಿರ್ದಿಷ್ಟ ಕಾಲೇಜಿನಲ್ಲಿ ಸೀಟು ಸಿಗಬಹುದು ಎಂಬ ನಿರೀಕ್ಷೆಯಿಂದ ಭಾಗಶಃ ಶುಲ್ಕ ಪಾವತಿಸಿ ತರಗತಿಗಳಿಗೆ ಹಾಜರಾಗುತ್ತಿದ್ದಾರೆ. ಅದೇ ಕಾಲೇಜಿನಲ್ಲಿ ಸೀಟು ಖಚಿತವಾಗದಿದ್ದರೆ ಅವರು ಶುಲ್ಕವನ್ನು ಕಳೆದುಕೊಳ್ಳಬೇಕಾಗುತ್ತದೆ. ಸಾಲ ಮಾಡಿ ಮಕ್ಕಳ ಶುಲ್ಕ ಹೊಂದಿಸಿದ ಪೋಷಕರೂ ಇದರಿಂದ ಕಳವಳಗೊಂಡಿದ್ದಾರೆ' ಎಂದರು.

'ಕೋವಿಡ್ ಸಂದರ್ಭದಲ್ಲಿ ದ್ವಿತೀಯ ಪಿ.ಯು ಪರೀಕ್ಷೆಗೆ ಹಾಜರಾಗದೆಯೇ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸಿಇಟಿ ಅಂಕ ಹಂಚಿಕೆಯಲ್ಲೂ ಸರ್ಕಾರ ಎಡವಿದೆ. ಸಿಇಟಿ ಕೌನ್ಸೆಲಿಂಗ್ ವಿಳಂಬವಾಗುವುದಕ್ಕೆ ಸರ್ಕಾರ ಮುಂದಾಲೋಚನೆ ಇಲ್ಲದ ನಿರ್ಧಾರಗಳೇ ಕಾರಣ. ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ನಡೆಸದ ಸರ್ಕಾರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ನೆರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ ಪಿ.ಯು ಪರೀಕ್ಷೆಯ ಫಲಿತಾಂಶ ಪ್ರಕಟಣೆ ತಡವಾಗುತ್ತಿದೆ. ಇದರಿಂದಾಗಿ ನಮ್ಮ ರಾಜ್ಯದ ಕಾಲೇಜುಗಳ ಅರೆವೈದ್ಯಕೀಯ ಕೋರ್ಸ್‌ಗಳ ಮ್ಯಾನೇಜ್‌ಮೆಂಟ್ ಕೋಟಾ ಸೀಟ್‌ಗಳು ಅನ್ಯ ರಾಜ್ಯದ ವಿದ್ಯಾರ್ಥಿಗಳ ಪಾಲಾಗುತ್ತಿವೆ. ಪಿ.ಯು ಫಲಿತಾಂಶ ಹಾಗೂ ಸಿಇಟಿ ಕೌನ್ಸೆಲಿಂಗ್ ಸೂಕ್ತ ಸಮಯದಲ್ಲಿ ಪ್ರಕಟಿಸಲು ಸರ್ಕಾರ ಕ್ರಮ ವಹಿಸಬೇಕು' ಎಂದು ಆಗ್ರಹಿಸಿದರು.

'ಕೈ' ಟಿಕೆಟ್‌ಗೆ ₹ 5 ಸಾವಿರ ಶುಲ್ಕ, ₹ 2 ಲಕ್ಷ ಡಿ.ಡಿ

ಒಂದನೇ ಪುಟದಿಂದ...

'ಅರ್ಜಿ ಹಾಕಲು ವಯೋಮಿತಿ ಇದೆಯೇ' ಎಂಬ ಪ್ರಶ್ನೆಗೆ, 'ನಮ್ಮಲ್ಲಿ ವಯೋಮಿತಿ ಇಲ್ಲ. 92 ವರ್ಷದ ಶಾಮನೂರು ಶಿವಶಂಕರಪ್ಪ ಅವರೂ ನಮ್ಮ ಜತೆಗಿದ್ದು, ಬೇರೆಯವರಿಗಿಂತ ಹೆಚ್ಚು ಓಡಾಡುತ್ತಿದ್ದಾರೆ. ನಮ್ಮ ತಂದೆ ತಾಯಿಯನ್ನು ಮನೆಯಿಂದ ಆಚೆ ಹಾಕಲು ನಾನು ಅವಕಾಶ ನೀಡುವುದಿಲ್ಲ' ಎಂದರು.

'ಪಕ್ಷ ಬಿಟ್ಟು ಹೋದವರನ್ನು ಸೇರಿಸಿಕೊಳ್ಳುತ್ತೀರಾ' ಎಂಬ ಪ್ರಶ್ನೆಗೆ, 'ಈ ವಿಚಾರದಲ್ಲಿ ಮುಕ್ತ ಅವಕಾಶ ನೀಡಿದ್ದೇವೆ. ಪಕ್ಷದ ಸಿದ್ಧಾಂತ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ನಾಯಕತ್ವ ಒಪ್ಪಿ ಬೇಷರತ್ತಾಗಿ ಪಕ್ಷ ಸೇರಲು ಬಯಸುವವರು ಅರ್ಜಿ ಹಾಕಬಹುದು. ಯಾರನ್ನು ಸೇರಿಸಿಕೊಳ್ಳಬೇಕೆಂದು ಅಲ್ಲಂ ವೀರಭದ್ರಪ್ಪ ನೇತೃತ್ವದ ಸಮಿತಿ ತೀರ್ಮಾನಿಸಲಿದೆ' ಎಂದರು.

ಸದಸ್ಯತ್ವ ನೋಂದಣಿ ಆರಂಭ: 'ಪಕ್ಷದ ಸದಸ್ಯತ್ವ ಪಡೆಯಲು ಹಲವರು ಉತ್ಸುಕರಾಗಿರುವ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಸದಸ್ಯತ್ವ ನೋಂದಣಿ ಮತ್ತೆ ಆರಂಭಿಸಿದ್ದೇವೆ. ಬೇರೆ ಪಕ್ಷದ ಹಲವು ನಾಯಕರು ಕಾಂಗ್ರೆಸ್ ಸೇರಲು ಬಯಸಿ ನನ್ನ ಸಂಪರ್ಕದಲ್ಲಿದ್ದಾರೆ. ಅವರ ಹೆಸರನ್ನು ಈಗ ಬಹಿರಂಗಪಡಿಸುವುದಿಲ್ಲ' ಎಂದು ಶಿವಕುಮಾರ್ ಹೇಳಿದರು.

ಭಗವಾನ್ ವಿರುದ್ಧ ಜಾಮೀನು ರಹಿತ ವಾರಂಟ್

ಸಾಗರ: ಧಾರ್ಮಿಕ ಭಾವನೆಗೆ ಧಕ್ಕೆ ತರುವ ರೀತಿಯಲ್ಲಿ ಕೃತಿ ರಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯ ಸಾಹಿತಿ ಕೆ.ಎಸ್. ಭಗವಾನ್ ವಿರುದ್ಧ ಬುಧವಾರ ಜಾಮೀನು ರಹಿತ ವಾರಂಟ್ ಹೊರಡಿಸಿದೆ.

ಭಗವಾನ್ ಅವರು ತಮ್ಮ 'ರಾಮ ಮಂದಿರ ಏಕೆ ಬೇಡ' ಕೃತಿಯಲ್ಲಿ ಹಿಂದೂ ಧರ್ಮೀಯರ ಭಾವನೆಗೆ ಧಕ್ಕೆ ತರುವ ಸಂಗತಿಗಳನ್ನು ನಿರೂಪಿಸಿದ್ದಾರೆ ಎಂದು ಆರೋಪಿಸಿ ಮಹಾಬಲೇಶ್ವರ ಎಂಬುವವರು ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಈ ದೂರಿನ ವಿಚಾರಣೆ ನಡೆಸಿದ ನ್ಯಾಯಾಲಯ, ಭಗವಾನ್ ವಿರುದ್ಧ ಪ್ರಕರಣ ದಾಖಲಿಸಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ಸಮನ್ಸ್ ಹೊರಡಿಸಿತ್ತು. ಸಮನ್ಸ್ ಜಾರಿಯಾದರೂ ಬುಧವಾರ ಭಗವಾನ್ ಅವರು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಅವರ ವಿರುದ್ಧ ಜಾಮೀನುರಹಿತ ಬಂಧನದ ವಾರಂಟ್ ಹೊರಡಿಸಿದೆ.

ಧರ್ಮಸ್ಥಳ ದರ್ಶನ ವ್ಯತ್ಯಯ

ಉಜಿರೆ (ದಕ್ಷಿಣ ಕನ್ನಡ): ಇದೇ 8ರಂದು ಖಗ್ರಾಸ ಚಂದ್ರಗ್ರಹಣ ಇರುವುದರಿಂದ ಧರ್ಮಸ್ಥಳದ ಶ್ರೀ ಮಂಜುನಾಥಸ್ವಾಮಿ ದೇವಸ್ಥಾನದಲ್ಲಿ ಮಧ್ಯಾಹ್ನ ಒಂದೂವರೆ ಗಂಟೆಯಿಂದ ರಾತ್ರಿ 7 ಗಂಟೆಯ ವರೆಗೆ ದೇವರ ದರ್ಶನ ಹಾಗೂ ಪೂಜೆಗೆ ಅವಕಾಶವಿಲ್ಲ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ತೂಗುಸೇತುವೆಯಲ್ಲಿ ಕಾರು ಚಲಾಯಿಸಿದ ಆರೋಪಿ ಪತ್ತೆ

ಕಾರವಾರ: ಯಲ್ಲಾಪುರ ತಾಲ್ಲೂಕಿನ ಶಿವಪುರ ತೂಗುಸೇತುವೆಯ ಮೇಲೆ ಕಾರು ಚಲಾಯಿಸಿದ ಪ್ರಕರಣಕ್ಕೆ ಸಂಬಂಧಿಸಿ, ಜೊಯಿಡಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಚಾಲಕ, ಜೊಯಿಡಾ ತಾಲ್ಲೂಕಿನ ಉಳವಿ ನಿವಾಸಿ ಮುಜಾಹಿದ್ ಆಜಾದ್ ಸೈಯದ್ (26) ಆರೋಪಿ.

ತೂಗು ಸೇತುವೆಯಲ್ಲಿ ಅ.31ರಂದು ಕಾರು ಚಲಾಯಿಸಿದ ಫೋಟೊಗಳು ಮತ್ತು ವಿಡಿಯೊಗಳು ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾದ ಬಳಿಕ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯ ಕೇಳಿಬಂದಿತ್ತು. ಈ ಬಗ್ಗೆ ಉಳವಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮಂಜುನಾಥ ಅರ್ಜುನ ಮೊಕಾಶಿ ಎಂಬುವವರು ಪೊಲೀಸರಿಗೆ ದೂರು ನೀಡಿದ್ದರು.

ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ

ನಿಮಗಿದು ಗೊತ್ತೆ?

ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (Council of Scientific & Industrial Research (CSIR)), ಪ್ರತಿ ವರ್ಷ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿಯನ್ನು ನೀಡುತ್ತದೆ. ಈ ಮಂಡಳಿಯ ಪ್ರಥಮ ಡೈರೆಕ್ಟರ್ ಜನರಲ್ ಆಗಿದ್ದ ಡಾ. ಶಾಂತಿ ಸ್ವರೂಪ್ ಭಟ್ನಾಗರ್(CSIR :Founder Director) ಅವರ ಗೌರವಾರ್ಥ ಈ ಪ್ರಶಸ್ತಿ ಸ್ಥಾಪಿಸಲಾಗಿದೆ. ಈ ಪ್ರಶಸ್ತಿಯನ್ನು 1958ರಲ್ಲಿ ಆರಂಭಿಸಲಾಯಿತು. ಭೌತವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನ, ಎಂಜಿನಿಯರಿಂಗ್, ವೈದ್ಯ ವಿಜ್ಞಾನ, ಮತ್ತು ಗಣಿತಶಾಸ್ತ್ರ ಮೊದಲಾದ ವಿಭಾಗಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಈ ಪ್ರಶಸ್ತಿಗಳನ್ನು ಕೊಡಲಾಗುತ್ತದೆ. ಪ್ರತಿಯೊಂದು ಪ್ರಶಸ್ತಿಯು ನಗದು ಬಹುಮಾನವನ್ನು ಮತ್ತು ಒಂದು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

ಭಾರತೀಯ ರಸಾಯನ ಶಾಸ್ತ್ರಜ್ಞ ಸ್ವರೂಪ್ ಭಟ್ನಾಗರ್, ಪಂಜಾಬ್‌ನಲ್ಲಿ 1894ರ ಫೆಬ್ರುವರಿ 21ರಂದು ಜನಿಸಿದರು. 1919ರಲ್ಲಿ ಅವರು ಪಂಜಾಬ್ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ ಪದವಿ ಪಡೆದರು. ನಂತರ ಲಂಡನ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದರು. ಬಳಿಕ ಬರ್ಲಿನ್‌ನಲ್ಲಿರುವ ಕೈಸರ್ ವಿಲ್‌ಹೆಲ್ಮ್ ಸಂಸ್ಥೆಯಲ್ಲಿ (Kaisar Wilhelm Institute) ಪ್ರೊಫೆಸರ್ ಹೇಬರ್ ಅವರ ಅಧೀನದಲ್ಲಿ ಕೆಲಸ ಮಾಡಿದರು. ನಂತರ ಕೊಲಾಯಿಡ್ಸ್ (colloids) ಪರಿಣಿತ ಫ್ರೆಯಂಡ್‌ಲಿಕ್ (Freundlich) ಅವರ ಜೊತೆ ಕೆಲಸ ಮಾಡುವ ಅವಕಾಶ ದೊರೆಯಿತು.

ಶಾಂತಿ ಸ್ವರೂಪ್ ಭಟ್ನಾಗರ್ 1921 ರಿಂದ 1924ರ ವರೆಗೆ ಬನಾರಸ್ ಹಿಂದೂ ವಿಶ್ವ ವಿದ್ಯಾಲಯದಲ್ಲಿ ರಸಾಯನ ವಿಜ್ಞಾನ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. 1924 ರಿಂದ 1940ರ ವರೆಗೆ ಅವರು ಲಾಹೋರ್ ವಿಶ್ವವಿದ್ಯಾಲಯದ ರಸಾಯನ ವಿಜ್ಞಾನ ಪ್ರಯೋಗಾಲಯದ ಡೈರೆಕ್ಟರಾಗಿ ಕೆಲಸ ಮಾಡಿದರು.

ಇವರು ವಿಶೇಷವಾಗಿ ರಾಸಾಯನಿಕ-ಆಯಸ್ಕಾಂತೀಯ ಕ್ಷೇತ್ರಕ್ಕೆ (Magneto- chemistry) ಅಮೋಘ ಕೊಡುಗೆ ಸಲ್ಲಿಸಿದರು. 1940ರಲ್ಲಿ ಶಾಂತಿ ಸ್ವರೂಪ್ ಭಟ್ನಾಗರ್ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಮೊದಲ ಡೈರೆಕ್ಟರ್ ಆದರು. ತಮ್ಮ ಬದುಕಿನ ಕಡೆಯವರೆಗೂ ಅವರು ಆ ಸ್ಥಾನದಲ್ಲಿ ಕೆಲಸ ಮಾಡಿದರು. 1943ರಲ್ಲಿ ಅವರನ್ನು ಲಂಡನ್ನಿನ್ ರಾಯಲ್ ಸೊಸೈಟಿಯ 'ಫೆಲೊ' ಆಗಿ ಆಯ್ಕೆ ಮಾಡಿ ಸನ್ಮಾನಿಸಲಾಗಿತ್ತು. 1954ರಲ್ಲಿ ಪದ್ಮವಿಭೂಷಣ ನೀಡಿ ಗೌರವಿಸಲಾಗಿತ್ತು.

ಇವರನ್ನು ಸಂಶೋಧನಾ ಪ್ರಯೋಗಾಲಯಗಳ ಪಿತಾಮಹ ಎಂದು ಕರೆಯಲಾಗಿದೆ (father of research laboratories in India). ಸಂಶೋಧನಾ ಪ್ರಯೋಗಾಲಯಗಳ ನಿರ್ಮಾಣಕ್ಕಾಗಿ ಡಾ ಭಟ್ನಾಗರ್ ಅವರು ಕೈಗಾರಿಕೋದ್ಯಮಿಗಳಿಂದ ಅಪಾರ ಹಣವನ್ನು ಸಂಗ್ರಹಿಸಿದರು. ಈ ಹಣವನ್ನು ಬಳಸಿ, ಅವರು ಭಾರತದಲ್ಲಿ ಅನೇಕ ರಾಷ್ಟ್ರೀಯ ಸಂಶೋಧನಾ ಪ್ರಯೋಗಾಲಯಗಳನ್ನು ಸ್ಥಾಪಿಸಿದರು. ವಿಶ್ವವಿದ್ಯಾಲಯ ಧನಸಹಾಯ ಆಯೋಗದ(UGC) ಮೊದಲ ಅಧ್ಯಕ್ಷರಾಗಿದ್ದರು. ಇಂತಹ ಮಹಾನ್ ವಿಜ್ಞಾನಿ 1955ರ ಜನವರಿ 1 ರಂದು ನಿಧನರಾದರು. ನಂತರ ಅವರ ನೆನಪಿಗಾಗಿ, ಭಟ್ನಾಗರ್ ಸ್ಮಾರಕ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಸಿವಿಲ್ ಕಾನ್‌ಸ್ಟೆಬಲ್ ಹುದ್ದೆಗಳು, ಕೆಪಿಎಸ್‌ಸಿ ಗ್ರೂಪ್ 'ಸಿ'ಯ ವಿವಿಧ ಹುದ್ದೆಗಳು, ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿಯ ಸಬ್‌ಇನ್‌ಸ್ಪೆಕ್ಟರ್ ಹಾಗೂ ಕೆಎಸ್‌ಐಎಸ್‌ಎಫ್‌ನ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಯಾವ ದಿನವನ್ನು 'ವಿಶ್ವ ಪಾರ್ಶ್ವವಾಯು ದಿನ' ಎಂದು ಆಚರಿಸುತ್ತಾರೆ?

ಎ) ಅಕ್ಟೋಬರ್ 29 ಬಿ) ನವೆಂಬರ್-29
ಸಿ) ಡಿಸೆಂಬರ್- 12 ಡಿ) ಜನವರಿ 23

ಉತ್ತರ: ಎ

(**ವಿವರಣೆ:** ಪ್ರಪಂಚದಲ್ಲಿ ಪ್ರತಿ 3 ಸೆಕೆಂಡಿಗೆ ಒಬ್ಬರಿಗೆ ಪಾರ್ಶ್ವವಾಯು(ಸ್ಟ್ರೋಕ್ /ಲಕ್ವ) ಪೀಡಿತರಾಗುತ್ತಿದ್ದಾರೆ. ಪ್ರತಿ ವರ್ಷ 12.2 ದಶಲಕ್ಷ ಜನರು ಪಾರ್ಶ್ವವಾಯುವಿಗೆ ತುತ್ತಾಗುತ್ತಾರೆ. ಲಕ್ವ ಹೊಡೆದ ಮೊದಲ 4 ರಿಂದ 5 ಗಂಟೆಗಳನ್ನು 'ಗೋಲ್ಡನ್ ಹವರ್' ಎನ್ನುತ್ತಾರೆ. ಆ ಅವಧಿಯಲ್ಲಿ ಚಿಕಿತ್ಸೆ ನೀಡದೇ ಹೋದರೆ ಮಿದುಳಿನ ನರಮಂಡಳಕ್ಕೆ ಹಾನಿಯಾಗುತ್ತದೆ).

2) ದೇಶಿಯವಾಗಿ ಅಭಿವೃದ್ಧಿಪಡಿಸಿರುವ ಹಾಗೂ ಹೆಚ್ಚು ಇಳುವರಿ ನೀಡುವ ಕುಲಾಂತರಿ (ಡಿಎಂ ಎಚ್-11) ಸಾಸಿವೆ ಬೆಳೆಯಲು ಕೇಂದ್ರ ಪರಿಸರ ಸಚಿವಾಲಯ ಅನುಮತಿ ನೀಡಿದೆ. ಈ ಸಾಸಿವೆಯನ್ನು ದೆಹಲಿ ವಿಶ್ವವಿದ್ಯಾಲಯದ ತಳಿ ವಿಜ್ಞಾನಿಗಳ ತಂಡ ಅಭಿವೃದ್ಧಿ ಪಡಿಸಿದೆ. ಕೇಂದ್ರ ಪರಿಸರ ಸಚಿವಾಲಯದ ವ್ಯಾಪ್ತಿಯ ಕುಲಾಂತರಿ ನಿಯಂತ್ರಕ ಜೆನಿಟಿಕ್ ಎಂಜಿನಿಯರಿಂಗ್ ಮೌಲ್ಯಮಾಪನ ಸಮಿತಿ (ಜಿಇಎಸಿ) ಕುಲಾಂತರಿ ಸಾಸಿವೆಯನ್ನು ವಾಣಿಜ್ಯ ಉದ್ದೇಶಕ್ಕೆ ಬೆಳೆಯಲು ಅನುಮತಿ ನೀಡಿದೆ. ಹಾಗಾದರೆ ಈ ಅನುಮತಿ ಎಷ್ಟು ವರ್ಷಕ್ಕೆ ಸೀಮಿತವಾಗಿದೆ?

ಎ) ಆರು ವರ್ಷ ಬಿ) ನಾಲ್ಕು ವರ್ಷ
ಸಿ) ಹತ್ತು ವರ್ಷ ಡಿ) ಒಂದು ವರ್ಷ

ಉತ್ತರ: ಬಿ

3) ಜಾಗತಿಕ ವಿಶ್ಲೇಷಣಾ ಸಂಸ್ಥೆಯಾಗಿರುವ ಗ್ಯಾಲಪ್ ಪ್ರಕಟಿಸಿರುವ ಕಾನೂನು ಮತ್ತು ಸುವ್ಯವಸ್ಥೆ ಸೂಚ್ಯಂಕ 2022ರ(Gallup's Law and Order Index 2022 2022) ವರದಿ ಪ್ರಕಾರ____________ ದೇಶವು ವಿಶ್ವದ ಅತ್ಯಂತ ಸುರಕ್ಷಿತ ದೇಶವಾಗಿದೆ ಮತ್ತು ಅಫ್ಘಾನಿಸ್ತಾನ ಅತ್ಯಂತ ಅಸುರಕ್ಷಿತ ದೇಶವಾಗಿದೆ.

ಎ) ಭಾರತ ಬಿ) ಚೀನ
ಸಿ) ಅಮೆರಿಕ ಡಿ) ಸಿಂಗಾಪುರ

ಉತ್ತರ: ಡಿ

(**ವಿವರಣೆ:** ಗ್ಯಾಲಪ್ ಪ್ರಕಟಿಸಿರುವ ಕಾನೂನು ಮತ್ತು ಸುವ್ಯವಸ್ಥೆ ಸೂಚ್ಯಂಕ-2022ರ (Gallup's Law and Order Index 2022) ವರದಿ ಪ್ರಕಾರ ಐದು ಅತ್ಯಂತ ಸುರಕ್ಷಿತ ದೇಶಗಳು ಎಂದರೆ ಸಿಂಗಾಪುರ, ತಜಕಿಸ್ತಾನ, ನಾರ್ವೆ, ಸ್ವಿಟ್ಜರ್ಲೆಂಡ್, ಇಂಡೋನೇಷಿಯಾ)

4) ರಿಷಿ ಸುನಾಕ್ ಇಂಗ್ಲೆಂಡ್‌ನ ಪ್ರಧಾನಿಯಾಗಿ ಆಯ್ಕೆಯಾದರು. ಇದೇ ರೀತಿ ಬೇರೆ ಬೇರೆ ದೇಶದಲ್ಲಿ ಅಲ್ಲಿನ ಸರ್ಕಾರದ ಪ್ರಮುಖರಾಗಿ(ಅಧ್ಯಕ್ಷ/ ಉಪಾಧ್ಯಕ್ಷ/ಪ್ರಧಾನಿ) ಭಾರತೀಯ ಮೂಲದವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಅಂಶಗಳನ್ನು ಹೊಂದಿಸಿ ಬರೆಯಿರಿ

ಪಟ್ಟಿ-1	ಪಟ್ಟಿ-2
ಎ) ಗಯಾನಾ	1) ಮೊಹಮ್ಮದ್ ಇರ್ಫಾನ್ ಅಲಿ
ಬಿ) ಐರ್ಲೆಂಡ್	2) ಲಿಯೋ ವರದಕರ್
ಸಿ) ಸುರಿನಾಂ	3) ಚಂದ್ರಿಕಾ ಪ್ರಸಾದ್ ಸಂತೋಖಿ
ಡಿ) ಪೋರ್ಚುಗಲ್	4) ಅಂಟೋನಿಯೋ ಕೋಸ್ಟ್.

ಉತ್ತರ ಸಂಕೇತಗಳು

ಎ) ಎ- 1, ಬಿ-4, ಸಿ-3, ಡಿ-2
ಬಿ) ಎ- 2, ಬಿ-4, ಸಿ-1, ಡಿ-3
ಸಿ) ಎ- 1, ಬಿ-2, ಸಿ-3, ಡಿ-4
ಡಿ) ಎ- 3, ಬಿ- 1 ಸಿ-2, ಡಿ-4

ಉತ್ತರ: ಸಿ

5) ಭಾರತದ 5 ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಪೂರಕವಾಗಿ 2025ಕ್ಕೆ ಕರ್ನಾಟಕ 1 ಟ್ರಿಲಿಯನ್ ಡಾಲರ್ ಕೊಡುಗೆ ನೀಡುವ ಗುರಿ ಸಾಧಿಸಲು ವಿಶೇಷ ಸಮಿತಿ ರಚಿಸಲಾಗಿದೆ. ಹಾಗಾದರೆ 'ಕರ್ನಾಟಕ: ಒಂದು ಟ್ರಿಲಿಯನ್ ಡಾಲರ್ ಜಿಡಿಪಿಯ ಗುರಿ (Karnataka: A $1 Trillion GDP Vision)' ಅನ್ನು ಹೊರತರುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಯಾರು?

ಎ) ಟಿ. ವಿ. ಮೋಹನ್‌ದಾಸ್ ಪೈ ಮತ್ತು ನಿಶಾ ಹೊಳ್ಳ
ಬಿ) ಎನ್. ಆರ್. ನಾರಾಯಣ ಮೂರ್ತಿ ಮತ್ತು ಸುಧಾಮೂರ್ತಿ
ಸಿ) ನಂದನ ನಿಲೇಕಣಿ ಮತ್ತು ಚೈತ್ರಾ ಪೈ
ಡಿ) ಮೇಲಿನ ಯಾರೂ ಅಲ್ಲ

ಉತ್ತರ: ಎ

6) ಉಗ್ರರ ಸಂಘಟನೆಗಳಿಗೆ ಆರ್ಥಿಕ ನೆರವು ನೀಡುವ ಕುರಿತಂತೆ ಜಾಗತಿಕವಾಗಿ ಕಣ್ಗಾವಲು ಸಂಸ್ಥೆ `ಆರ್ಥಿಕ ಕ್ರಿಯಾಯೋಜನೆ ಕಾರ್ಯಪಡೆ (Financial Action Task Force (FATF))' ಕೆಲಸ ಮಾಡುತ್ತದೆ. ಭಯೋತ್ಪಾದಕ ಸಂಘಟನೆಗಳಿಗೆ ಆರ್ಥಿಕ ನೆರವು ನೀಡುವ ಬೆಳವಣಿಗೆ ಕುರಿತ 'ಬೂದು ವಲಯ' (ಗ್ರೇ ಲಿಸ್ಟ್) ಪಟ್ಟಿಯಿಂದ ಪಾಕಿಸ್ತಾನವನ್ನು ಕೈಬಿಡಲಾಗಿದೆ. ಎಷ್ಟು ವರ್ಷಗಳಿಂದ ಈ ಪಟ್ಟಿಯಲ್ಲಿ ಪಾಕಿಸ್ತಾನವನ್ನು ಇಡಲಾಗಿತ್ತು?

ಎ) 10 ಬಿ) 12
ಸಿ) 4 ಡಿ) ಮೇಲಿನ ಯಾವುದೂ ಸರಿಯಾಗಿಲ್ಲ

ಉತ್ತರ: ಸಿ

(ಮಾಹಿತಿ: **Spardha Bharati UPSC** ಯೂಟ್ಯೂಬ್ ಚಾನೆಲ್)

ಭೂತಕೋಲ

ಯು.ಟಿ. ಆಯಿಶ ಫರ್ಝಾನ

> ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ – ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ

ಕರಾವಳಿಯ ಸಂಸ್ಕೃತಿಯ ಭಾಗವಾಗಿರುವ 'ಭೂತಕೋಲ'ವು ಕನ್ನಡ ಚಲನಚಿತ್ರ 'ಕಾಂತಾರ – ಒಂದು ದಂತಕತೆ' ಬಿಡುಗಡೆಯಾದ ನಂತರ ಮತ್ತೊಮ್ಮೆ ಚರ್ಚೆಗೆ ಬಂದಿದೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ 'ಭೂತಕೋಲ'ವನ್ನು ಹಲವು ಸಮುದಾಯ ಗಳು ನಿಷ್ಠೆಯಿಂದ ಆಚರಿಸಿಕೊಂಡು ಬಂದಿವೆ.

ತುಳುವರ ಭೂತ/ದೈವ ಎನ್ನುವ ಪದಕ್ಕೆ ಕನ್ನಡದ ಪ್ರೇತ ಎನ್ನುವ ಅರ್ಥವಿಲ್ಲ. ಇಲ್ಲಿ ಭೂತ/ದೈವ ಅಂದರೆ ಕ್ಷುದ್ರ ಶಕ್ತಿಯಲ್ಲ. ಬದಲಿಗೆ ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವ ಸತ್ಯದ ಶಕ್ತಿಗಳು. ಹಾಗಾಗಿ ಈ ಶಕ್ತಿಯನ್ನು ತಲತಲಾಂತ ದಿಂದ ಜನ ಪೂಜಿಸುತ್ತಾ ಬಂದಿದ್ದಾರೆ.

ಯಾವೆಲ್ಲ ದೈವಗಳಿವೆ?

ಪಂಜುರ್ಲಿ, ಬೊಬ್ಬರ್ಯ, ಪಿಲಿಭೂತ, ಕಲ್ಕುಡ, ಕಲ್ಲುರ್ಟಿ, ಕೋಟಿ ಚೆನ್ನಯ ಮುಂತಾದವು ಪೂಜಿಸಲ್ಪಡುವ ಕೆಲವು ಜನಪ್ರಿಯ ದೈವಗಳು. ದೈವ ಸ್ಥಾನಕ್ಕೆ ಏರಿ, ಆರಾಧನೆಗೆ ಒಳಪಡುವ ಈ ಸಾಂಸ್ಕೃತಿಕ ನಾಯಕರ ಸಂಖ್ಯೆ ಸಾವಿರಕ್ಕೂ ಮೀರಿ ಇದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ದೈವಗಳ ವರ್ಗೀಕರಣ



1) **ಪ್ರಾಣಿ ಮೂಲ:** ಕಾಡು ಹಂದಿ (ಪಂಜುರ್ಲಿ), ಗೂಳಿಗಳು (ನಂದಿಗೋಣ, ಮೈಸಂದಾಯ), ಹುಲಿಗಳು (ಪಿಲಿಚಂಡಿ). ಕೃಷಿಕ ಕುಟುಂಬಗಳು ಹೆಚ್ಚಾಗಿ ಸಂಕಷ್ಟದಲ್ಲಿ ಈ ದೈವದ ಮೊರೆ ಹೋಗುತ್ತಾರೆ.
2) **ಮನುಷ್ಯ ಮೂಲ:** ಊಳಿಗಮಾನ್ಯ ವ್ಯವಸ್ಥೆಯ (ಕೋಟಿ-ಚೆನ್ನಯ) ವಿರುದ್ಧ ಬಂಡಾಯವೆದ್ದು ಹೋರಾಟ ಮಾಡಿ ಕೆಲವು ಗಮನಾರ್ಹ ಸಾಧನೆಗಳಿಗಾಗಿ ಜನಸಾಮಾನ್ಯರ ನಡುವೆ ಅಸ್ತಿತ್ವದಲ್ಲಿದ್ದು ಬಳಿಕ 'ದೈವ' ಸ್ಥಾನಕ್ಕೆ ಏರಿದ ಶ್ರೀಸಾಮಾನ್ಯರು.
3) **ಅನ್ಯಾಯ ಮತ್ತು ಕ್ರೌರ್ಯದ ವಿರುದ್ಧ** (ಕಲ್ಕುಡ-ಕಲ್ಲುರ್ಟಿ) ಹೋರಾಡಿ ಹುತಾತ್ಮರಾದವರು.
4) **ಪ್ರಕೃತಿ ಮೂಲ:** ಇವು ಪ್ರಕೃತಿಯ ಐದು ಅಂಶಗಳಿಗೆ (ಅಂದರೆ, ಗಾಳಿ, ಬೆಂಕಿ, ನೀರು, ಮಣ್ಣು ಮತ್ತು ಆಕಾಶ) ಸಂಬಂಧಿಸಿದ ದೈವಗಳು.
5) **ಪೌರಾಣಿಕ ಮೂಲ:** ಪೌರಾಣಿಕ ಪಾತ್ರಗಳು ಕ್ರಮೇಣ ದೈವಗಳಾಗಿ ಪೂಜಿಸಲ್ಪಟ್ಟವು. ಕೆಲವು ದೈವಗಳು ವೈದಿಕ ಗ್ರಂಥಗಳಿಂದ ಹುಟ್ಟಿಕೊಂಡಿವೆ ಎಂದು ನಂಬಲಾಗಿದೆ. **ಉದಾಹರಣೆಗೆ:** ವೀರಭದ್ರ, ಗುಳಿಗ.

ಕೆಲ ಸಮುದಾಯಗಳ ನಾಯಕರು ಚಿಕ್ಕವಯಸ್ಸಿನಲ್ಲಿಯೇ ಮರಣಿಸಿ, ಮಾಯಕಶಕ್ತಿಯಾದವರು ಅಥವಾ ತಮ್ಮನ್ನು ಕೊಂದವರ ವಿರುದ್ಧ ಸೇಡು ತೀರಿಸಿಕೊಳ್ಳುವ ಕಥೆಯೂ ಇದೆ. ಉದಾಹರಣೆಗೆ ಕಲ್ಕುಡ -ಕಲ್ಲುರ್ಟಿ. 'ಜೀವ ಇರುವಾಗ ನೋಡಲಿಕ್ಕೆ ಆಗಲಿಲ್ಲ, ಸತ್ತು ನೋಡಿಕೊಳ್ಳುತ್ತೇವೆ' ಎಂದು ಹೇಳಿ ಮಾಯಕದಲ್ಲಿ ಅರಸನ ಮನೆಗೆ ಬೆಂಕಿ ಇಡುವ ಕಥೆಯನ್ನು ನೋಡಬಹುದು. ಪ್ರತಿ ದೈವಕ್ಕೂ ತನ್ನದೇ ಒಂದು ಇತಿಹಾಸವಿದೆ. ಇದನ್ನು ಕರಾವಳಿಯ ಜನಪದ ಲೋಕ, ಪಾಡ್ದನಗಳು ಅದ್ಭುತವಾಗಿ ಕಟ್ಟಿಕೊಡುತ್ತವೆ.

ಭೂತಕೋಲ ಹೇಗೆ ನಡೆಯುತ್ತದೆ?

ದೈವಗಳನ್ನು ಪ್ರತಿನಿಧಿಸುವ ವಿಗ್ರಹಗಳನ್ನು ಮೆರವಣಿಗೆ ಮಾಡಲಾಗುತ್ತದೆ. ನಂತರ ಮೂರ್ತಿಗಳನ್ನು ಪೀಠದಲ್ಲಿ ಇರಿಸಲಾಗುತ್ತದೆ. ಖಡ್ಗ, ತಮಟೆ, ನಾದಸ್ವರದ ವಾದ್ಯದೊಂದಿಗೆ ಭೂತವೇಷಧಾರಿಯು ವಿಗ್ರಹದ ಸುತ್ತ ನರ್ತಿಸುತ್ತಾರೆ. ಲಯಬದ್ಧವಾಗಿ ಹೆಜ್ಜೆ ಹಾಕುತ್ತ ದೈವ ಆವಾಹನೆಯಾದ ಸ್ಥಿತಿ ತಲುಪುತ್ತಾರೆ. ನಂತರ ಅವರು ಆಡುವ ಪ್ರತಿ ಮಾತನ್ನು ದೈವವೇ ಆಡುತ್ತಿದೆ ಎಂದು ಜನ ನಂಬಿ ಅದರಂತೆ ನಡೆಯುತ್ತಾರೆ. ಈ ಸಂದರ್ಭದಲ್ಲಿ ಸಮುದಾಯ ಎದುರಿಸುವ ಸಮಸ್ಯೆಗಳ ಬಗ್ಗೆ ದೈವದ ಮುಂದೆ ಅಹವಾಲು ಇಡಲಾಗುತ್ತದೆ. ದೈವ ನಿರ್ಣಯಿಸಿದಂತೆ ನಡೆಯಲಾಗುತ್ತದೆ.

ಭೂತಕೋಲ ಕಟ್ಟುವವರು ಯಾರು?

ದೈವನರ್ತಕ ಕೆಲಸವನ್ನು ಸಾಧಾರಣವಾಗಿ ಅನುವಂಶಿಕವಾಗಿ ನಿರ್ವಹಿಸುತ್ತಾರೆ. ಈ ವೇಷಧಾರಿ ಅಥವಾ ದೈವ ನರ್ತಕನನ್ನು ಸಮುದಾಯ ಭಕ್ತಿ, ಗೌರವಗಳಿಂದ ಕಾಣುತ್ತದೆ. ಸಾಮಾನ್ಯ ವ್ಯಕ್ತಿಯು ದೈವವನ್ನು ಆವಾಹಿಸಿಕೊಳ್ಳಲು ಸಾಧ್ಯವಿಲ್ಲ ಮತ್ತು ಅಂತಹ ಪ್ರಯತ್ನ ಮಾಡಿದ್ದಲ್ಲಿ ತಕ್ಷಣವೇ ಸಾಯುತ್ತಾನೆ ಎಂಬ ನಂಬಿಕೆ ಇದೆ.

ಅತ್ಯಂತ ಹಿಂದುಳಿದ ಜಾತಿಗಳ ಜನರೇ ಹೆಚ್ಚಾಗಿ ದೈವದ ವೇಷಧಾರಿಗಳಾಗಿರುತ್ತಾರೆ. ದೈವ ನೀಡುವ ನ್ಯಾಯ ಮತ್ತು ಪರಿಹಾರಗಳನ್ನು ಜನ ನಿಷ್ಠೆಯಿಂದ ಪಾಲಿಸುತ್ತಾರೆ. ಬ್ರಾಹ್ಮಣರು, ದಲಿತರು, ಮುಸ್ಲಿಮರು, ಬಂಟರು ಸೇರಿ ಎಲ್ಲಾ ಜಾತಿಗಳು ಮತ್ತು ಸಮುದಾಯಗಳಿಂದ ಬಂದ ಭೂತಗಳಿರುವುದು ಇಲ್ಲಿನ ವೈಶಿಷ್ಟ್ಯ. ಉದಾಹರಣೆಗೆ, ಬೊಬ್ಬರ್ಯ ಒಬ್ಬ ಮುಸ್ಲಿಂ ದೈವವಾಗಿದ್ದು ಹಿಂದೂಗಳು ಶ್ರದ್ಧೆಯಿಂದ ಪೂಜಿಸುತ್ತಾರೆ. ಹಿಂದುಳಿದ ಜಾತಿಯ ವೇಷಧಾರಿಯ ಮುಂದೆ ಪ್ರಬಲಜಾತಿಯ ಭೂಮಾಲೀಕರು ಸಾಷ್ಟಾಂಗ ನಮಸ್ಕಾರ ಮಾಡುವುದು, ಭೂಮಾಲೀಕರನ್ನು ಏಕವಚನದಲ್ಲಿಯೇ ಸಂಬೋಧಿಸುವುದು ಜಾತಿಶ್ರೇಣಿಯ ಸಮೀಕರಣವನ್ನೇ ಬುಡಮೇಲು ಮಾಡುತ್ತದೆ.

ಜಾತಿ, ಧರ್ಮ ಮೀರಿದ ಬಾಂಧವ್ಯ:


ಮಂಜೇಶ್ವರದ ಉದ್ಯಾವರದಲ್ಲಿ ನಡೆಯುವ ಅರಸು ದೈವಗಳ ನೇಮದಲ್ಲಿ ಮುಸ್ಲಿಂ ಕುಟುಂಬಗಳ ಭಾಗವಹಿಸುವಿಕೆ ಕಡ್ಡಾಯ. ಮುಸಲ್ಮಾನರಲ್ಲಿ ದೈವಾರಾಧನೆ ಇಲ್ಲದೇ ಇದ್ದರೂ ಈ ನೇಮವನ್ನು ಪಾಲಿಸಲಾಗುತ್ತದೆ. ಭೂತಾರಾಧನೆಯಲ್ಲಿ ಇದು ಸಾಧ್ಯವಾಗಿರುವುದು ಕುತೂಹಲಕಾರಿ.

ಸಿಎಪಿಎಫ್‌ನಲ್ಲಿ 24,369 ಕಾನ್‌ಸ್ಟೆಬಲ್ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಕೇಂದ್ರ ಗೃಹ ಇಲಾಖೆ ಪ್ರಸ್ತುತ ಹಣಕಾಸು ವರ್ಷದಲ್ಲಿ ಬೃಹತ್ ನೇಮಕಾತಿಗೆ ಮುಂದಾಗಿದೆ. ಇಲಾಖೆಯ ಅಧೀನದಲ್ಲಿರುವ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು ವತಿಯಿಂದ (CAPF) ವಿವಿಧ ಸಶಸ್ತ್ರ ಮೀಸಲು ಪಡೆಗಳಿಗೆ ಹಾಗೂ ಘಟಕಗಳಿಗೆ 24,369 'ಪುರುಷ ಮತ್ತು ಮಹಿಳಾ ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ' ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆ ಪ್ರಾರಂಭಿಸಿದೆ. ಸಿಬ್ಬಂದಿ ನೇಮಕಾತಿ ಆಯೋಗದಿಂದ ಈ ನೇಮಕಾತಿ ಪ್ರಕ್ರಿಯೆ ನಡೆಯಲಿದೆ. ಕೇಂದ್ರ ಸರ್ಕಾರದ ನೌಕರಿಗೆ ಸೇರಬೇಕೆಂಬ ಕನಸು ಹೊತ್ತಿರುವ ಯುವಸಮೂಹಕ್ಕೆ ಇದೊಂದು ಸದಾವಕಾಶ.

ಸಶಸ್ತ್ರ ಮೀಸಲು ಪಡೆಗಳು ಯಾವುವು?	ಹುದ್ದೆಗಳೆಷ್ಟು?
ಬಿಎಸ್‌ಎಫ್ (ಗಡಿ ಭದ್ರತಾ ಪಡೆ)	10,497
ಸಿಐಎಸ್‌ಎಫ್(ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ)	100
ಸಿಆರ್‌ಪಿಎಫ್(ಕೇಂದ್ರ ಸಶಸ್ತ್ರ ಪೊಲೀಸ್ ಪಡೆ)	8,911
ಎಸ್‌ಎಸ್‌ಬಿ(ಸಶಸ್ತ್ರ ಸೀಮಾ ಬಲ)	1,284
ಐಟಿಬಿಪಿ(ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸ್)	1,613
ಎಆರ್(ಅಸ್ಸಾಂ ರೈಫಲ್ಸ್)	1,697
ಎಸ್‌ಎಸ್‌ಎಫ್(ಸೆಕ್ರೆಟರಿಯೇಟ್ ಸೆಕ್ಯೂರಿಟಿ ಫೋರ್ಸ್)	103
ಎನ್‌ಸಿಬಿ(ಮಾದಕ ವಸ್ತು ನಿಯಂತ್ರಣಾ ದಳ-ನಾರ್‌ಕೋಟಿಕ್)	164
ಒಟ್ಟು	24,369



ಅರ್ಜಿ ಸಲ್ಲಿಸುವುದು ಹೇಗೆ?

ಆಸಕ್ತರು ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು. ಇದಕ್ಕಾಗಿ 'ಸ್ಟಾಫ್ ಸೆಲೆಕ್ಷನ್ ಕಮಿಷನ್'ನ ಅಧಿಕೃತ ವೆಬ್‌ಸೈಟ್ https://ssc.nic.in ಗೆ ಭೇಟಿ ನೀಡಿ, ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಅ.27 ರಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ನವೆಂಬರ್ 30 ಕೊನೆ ದಿನವಾಗಿದೆ. 18 ರಿಂದ 23 ವಯೋಮಾನದವರು ಅರ್ಜಿ ಸಲ್ಲಿಸಬಹುದು. ಎಸ್‌ಸಿ, ಎಸ್‌ಟಿ, ಒಬಿಸಿ ವರ್ಗದ ಅಭ್ಯರ್ಥಿಗಳಿಗೆ ವಯಸ್ಸಿನಲ್ಲಿ ಸಡಿಲಿಕೆ ಇದೆ.

ಶೈಕ್ಷಣಿಕ ವಿದ್ಯಾರ್ಹತೆ

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವವರು ಕನಿಷ್ಠ ವಿದ್ಯಾರ್ಹತೆ 10 ನೇ ತರಗತಿ ಅಥವಾ ಅದಕ್ಕೆ ತತ್ಸಮಾನ ಪರೀಕ್ಷೆ ಪಾಸಾಗಿರಬೇಕು.

ಆಯ್ಕೆ ಪ್ರಕ್ರಿಯೆ ಹೇಗಿದೆ?

ಒಟ್ಟು 4 ಹಂತಗಳಲ್ಲಿ ಆಯ್ಕೆ ನಡೆಯಲಿದೆ. ಮೊದಲ ಹಂತ; ಕಂಪ್ಯೂಟರ್ ಆಧಾರಿತ ಪರೀಕ್ಷೆ (ಬಹು ಆಯ್ಕೆಯ ಪ್ರಶ್ನೆಗಳು). ಈ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಗಳು ದೈಹಿಕ ಪರೀಕ್ಷೆಗೆ ಒಳಪಡಬೇಕು. ಅಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಮುಂದಿನ ಹಂತ ದಾಖಲಾತಿ ಪರಿಶೀಲನೆ. ಬಳಿಕ ನೇಮಕಾತಿ ಆದೇಶದ ಪತ್ರ ಅಭ್ಯರ್ಥಿಗಳ ಕೈ ಸೇರಲಿದೆ. ಪರೀಕ್ಷೆಯು ಕಂಪ್ಯೂಟರ್ ಆಧಾರಿತ ಪರೀಕ್ಷೆ ಆಗಿದ್ದು, ಎಸ್‌ಎಸ್‌ಸಿ ಈ ಪರೀಕ್ಷೆಯನ್ನು ಆಯೋಜಿಸುತ್ತದೆ. ಜನವರಿಯಲ್ಲಿ ಪರೀಕ್ಷೆ ನಡೆಯುವುದಾಗಿ ಪ್ರಕಟಿಸಲಾಗಿದೆ. ಅಧಿಕೃತ ದಿನಾಂಕವನ್ನು ವೆಬ್‌ಸೈಟ್‌ನಲ್ಲಿ ತಿಳಿಸಲಾಗುತ್ತದೆ. ಅಲ್ಲದೇ ಪರೀಕ್ಷೆಗೆ ಹಾಗೂ ದೈಹಿಕ ಪರೀಕ್ಷೆಗೆ ಕರೆಪತ್ರಗಳು ಅಭ್ಯರ್ಥಿಗಳ ಅಂಚೆ ವಿಳಾಸಕ್ಕೆ ಬರಲಿವೆ. ಪರೀಕ್ಷಾ ಪಠ್ಯಕ್ರಮ, ಹುದ್ದೆಗಳ ವಿವರ, ಇತರ ಸಂಪೂರ್ಣ ವಿವರಗಳಿಗಾಗಿ ಅಭ್ಯರ್ಥಿಗಳು https://ssc.nic.in ನೋಡಬಹುದು.

ವೇತನ ಶ್ರೇಣಿ ಏನಿದೆ?

ಸಿಎಪಿಎಫ್‌ನ ವಿವಿಧ ವಿಭಾಗಗಳಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳು ಕೇಂದ್ರ ಸರ್ಕಾರದ ಚಾಲ್ತಿ ನಿಯಮಾನುಸಾರ ₹18,000 ದಿಂದ ₹56,900 ವೇತನ ಪಡೆಯಲಿದ್ದಾರೆ.

ಹಿಂದಿ, ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ

ಸಿಎಪಿಎಫ್‌ನ ಈ ಹುದ್ದೆಗಳಿಗೆ ನಡೆಯುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆಂಗ್ಲ ಹಾಗೂ ಹಿಂದಿ ಭಾಷೆಯಲ್ಲಿ ಬರೆಯಲು ಮಾತ್ರ ಅವಕಾಶವಿದೆ. ಇದರಿಂದ ಕನ್ನಡ ಸೇರಿದಂತೆ ಇತರ ಪ್ರಾದೇಶಿಕ ಭಾಷೆಯ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ ಎಂಬ ಕೂಗು ಕೇಳಿ ಬಂದಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಯಾಗುತ್ತಿದ್ದು ಕನ್ನಡದಲ್ಲಿಯೂ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಅನೇಕ ಕನ್ನಡಪರ ಸಂಘಟನೆಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿವೆ.

ಪರೀಕ್ಷೆಗಳಲ್ಲಿ ಸಂವಹನ ಕೌಶಲ ಭಾಗ-3

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ

ಸಮಯ-ಸಂವಹನ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಮಯವನ್ನೂ ಸಂವಹನವೆಂದು ಗಂಭೀರವಾಗಿ ಗಣಿಸುವವರು ಗೆಲ್ಲುತ್ತಾರೆ. ಸಮಯಕ್ಕೆ ಎಷ್ಟರಮಟ್ಟಿನ ಪ್ರಾಧಾನ್ಯ ಕೊಡುತ್ತಾರೋ ಅದಕ್ಕೆ ಪೂರಕವಾಗಿ ಪ್ರತಿಫಲ ಪಡೆಯುತ್ತಾರೆ!



ಡಾ. ನಿರಂಜನ ವಾನಳ್ಳಿ

ಸಾಮಾನ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅನೇಕ ರೀತಿಯಲ್ಲಿ ಅಭ್ಯರ್ಥಿಗಳ ಪರೀಕ್ಷೆ ನಡೆಯುತ್ತದೆ. ಅದರಲ್ಲಿ ಒಂದು- ಅವರ ಸಮಯ ನಿರ್ವಹಣೆಯ ಚಾಕಚಕ್ಯತೆ, ಅಭ್ಯರ್ಥಿಗೆ ಗೊತ್ತಿಲ್ಲದೇ ನಡೆಯುವ ಪರೀಕ್ಷೆ. ಉದಾಹರಣೆಗೆ 20 ಪ್ರಶ್ನೆಗಳನ್ನು ನೀಡಿ ಮೂರು ಗಂಟೆಯಲ್ಲಿ ಎಲ್ಲಾ 20 ಪ್ರಶ್ನೆಗಳನ್ನು ಉತ್ತರಿಸಲು ಹೇಳಲಾಗುತ್ತದೆ. ಅಂದರೆ ಒಂದು ಪ್ರಶ್ನೆಗೆ ಉತ್ತರಿಸಲು ಅಭ್ಯರ್ಥಿಗೆ ಸಿಗುವ ವಾಸ್ತವ ಸಮಯ ಒಂಬತ್ತು ನಿಮಿಷಕ್ಕೂ ಕಡಿಮೆ. ಹೀಗಿರುವಾಗ ಈ ಒಂಬತ್ತು ನಿಮಿಷದಲ್ಲಿ ಪ್ರತಿ ಪ್ರಶ್ನೆಗೂ ಉತ್ತರವನ್ನು ಹೇಗೆ ಹೊಂದಿಸುತ್ತೀರಿ ಹಾಗೂ ಒಟ್ಟೂ 180 ನಿಮಿಷಗಳಲ್ಲಿ 20 ಪ್ರಶ್ನೆಗಳಿಗೆ ಉತ್ತರ ಬರೆಯಲು ಹೇಗೆ ಸಮಯ ಹೊಂದಿಸಿ ಕೊಳ್ಳುತ್ತೀರಿ ಎಂಬುದು ಇಲ್ಲಿ ನಡೆಯುವ ಪರೀಕ್ಷೆ.

ನೂರಕ್ಕೆ 90 ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲೇ ನಪಾಸಾಗುವುದು ಎಂದರೆ ಅಚ್ಚರಿಯಾದೀತು! ಅಂದರೆ ಹೆಚ್ಚಿನವರು ಮೊದಲ ಹತ್ತು ಪ್ರಶ್ನೆಗಳಿಗೆ ಉತ್ತರಿಸುವುದರಲ್ಲೇ ಎರಡೂವರೆ ಗಂಟೆಗಳನ್ನು ಕಳೆದುಬಿಡುತ್ತಾರೆ. ಆಗ ಉಳಿದ ಹತ್ತು ಪ್ರಶ್ನೆಗಳಿಗೆ ಉತ್ತರಿಸಲು ಸಮಯವೇ ಇರುವುದಿಲ್ಲ. ಈ ಪ್ರಶ್ನೆಗಳನ್ನು ಬಿಡುತ್ತಾರೆ ಅಥವಾ ಅವಕ್ಕೆ ಬೇಕಾಬಿಟ್ಟಿ ಉತ್ತರ ಗೀಚಿರುತ್ತಾರೆ. ಇಂಥ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವವರಿಗೆ 'ಈ ಅಭ್ಯರ್ಥಿಗೆ ಸಮಯ ಹೊಂದಿಸಿಕೊಳ್ಳುವ ಗುಣವಿಲ್ಲ' ಎಂದು ಕೊಳ್ಳುತ್ತಾರೆ. ಆಗ ಆರಂಭದ ಉತ್ತರಗಳಿಗೆ ಒಳ್ಳೆಯ ಅಂಕಗಳು ಬಂದರೆ ಕೊನೆಯ ಉತ್ತರಗಳಿಗೆ ಸೊನ್ನೆ ಬರಬಹುದು. ಸಮಯದ ಸರಿಯಾದ ನಿರ್ವಹಣೆ ಮಾಡಲಾಗದ ಕಾರಣಕ್ಕೆ ಅಭ್ಯರ್ಥಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸೋಲುತ್ತಾನೆ.

ಸಂವಹನದ ವಿಧಗಳು

ಸಂವಹನವನ್ನು ಶಾಬ್ದಿಕ ಮತ್ತು ಅಶಾಬ್ದಿಕ ಸಂವಹನ ಎಂಬುದಾಗಿ ವಿಂಗಡಿಸುತ್ತಾರೆ. ನಿಜವೆಂದರೆ ಸಂವಹನದಲ್ಲಿ ಇವೆರಡೇ ವಿಧಗಳು. ಉಳಿದವುಗಳು ಸಂವಹನದ ಹಂತಗಳು. ಯಾವುದನ್ನು ಮಾತನಾಡುವ ಅಥವಾ ಬರೆಯುವ ಶಬ್ದಗಳನ್ನು ಬಳಸಿ ಮಾಡಲಾಗುತ್ತದೆಯೋ ಆ ಸಂವಹನ ಶಾಬ್ದಿಕ ಸಂವಹನವಾದರೆ ಶಬ್ದಗಳನ್ನು ಬಳಸದೇ ವಸ್ತುಗಳನ್ನು ಅಥವಾ ಸಂಜ್ಞೆಗಳನ್ನು, ಚಿತ್ರಗಳನ್ನು ಬಳಸಿ ಮಾಡುವ ಸಂವಹನ ಅಶಾಬ್ದಿಕ ಸಂವಹನ. ಅತ್ಯಂತ ಸರಳ ಉದಾಹರಣೆಯೆಂದರೆ 'ಎಲೆ' ಅಂತ ಬರೆಯುವುದು ಅಥವಾ ಹೇಳುವುದು ಶಾಬ್ದಿಕ ಸಂವಹನವಾದರೆ, ಎಲೆಯನ್ನು ತೋರಿಸುವುದು ಅಥವಾ ಬಿಡಿಸಿ ತೋರಿಸುವುದು ಅಶಾಬ್ದಿಕ ಸಂವಹನವಾಗುತ್ತದೆ. ಅವು ಸಂಜ್ಞೆಯ ರೂಪದಲ್ಲಿರುವುದರಿಂದ ಅದನ್ನು ಸಂಜ್ಞಾರೂಪಿ ಸಂವಹನ ಎಂತಲೂ ಕರೆಯಲಾ ಗುತ್ತದೆ.

ವಾಸ್ತವವಾಗಿ, ನಾವು ಮಾಡುವ ಬಹುತೇಕ ಸಂವಹನ ಸಂಜ್ಞಾರೂಪಿ ಸಂವಹನವೇ. ಜೀವನದಲ್ಲಿ ಮಾಡುವ ಎಲ್ಲ ಕೆಲಸವೂ ಇತರರಿಗೆ ಸಂಜ್ಞಾರೂಪಿ ಸಂವಹನವಾಗಬಹುದು. ನೀವು ಪತ್ರಕ್ಕೆ ಕೂಡಲೇ ಉತ್ತರ ಬರೆದರೆ ಒಂದು ಸಂವಹನ. ಉತ್ತರ ಬರೆಯದಿದ್ದರೂ ಅದು ಸಂವಹನವೇ. ಆದರೆ ಜೀವನದಲ್ಲಿ ಅಶಾಬ್ದಿಕ ಸಂವಹನದ ಮಹತ್ವವನ್ನು ನಾವು ನಿರಂತರವಾಗಿ ಕಡೆಗಣಿಸಿ ಗೊತ್ತಿಲ್ಲದೇ ಬಹಳ ಬೆಲೆ ತೆರುತ್ತೇವೆ.

ಸಮಯ ನಿರ್ವಹಣೆ

ಸಂಜ್ಞಾರೂಪಿ ಸಂವಹನದ ವಿಧಗಳಲ್ಲಿ ಸಮಯವೂ ಕೂಡಾ ಒಂದು. ಸಂವಹನವಾಗಿ ಸಮಯ ನಮ್ಮ ಜೀವನದಲ್ಲಿ ಬಹಳವಾಗಿ ಅಲಕ್ಷ್ಯಕ್ಕೆ ಒಳಗಾದ ಅಂಶ. ಸಮಾಜವು ನಿಮ್ಮ ವ್ಯಕ್ತಿತ್ವವನ್ನು ಅಳೆಯುವ ಮಾನದಂಡ ಗಳಲ್ಲಿ ಸಮಯವೂ ಒಂದು ಎಂಬುದನ್ನು ಬಹಳಷ್ಟು ಜನ ಅರ್ಥಮಾಡಿಕೊಳ್ಳುವುದಿಲ್ಲ. ನೀವು 10 ಗಂಟೆಗೆ ಬರಲು ಹೇಳಿ 12 ಗಂಟೆಗೆ ಹೋದರೆ ಮುಂದಿನ ಸಾರಿ ನಿಮ್ಮ ಕರೆಯನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ.

ಸುಲಭವಾಗಿ ನಮಗೆ ಸಮಯವಿರಲಿಲ್ಲ ಎನ್ನುತ್ತೇವೆ. ಸಮಯ ಯಾರಿಗೂ ಇರುವುದಿಲ್ಲ ಅಥವಾ ಎಲ್ಲರಿಗೂ ಇರುವುದು ದಿನಕ್ಕೆ 24 ಗಂಟೆ ಮಾತ್ರ. ಆದರೆ ಅದನ್ನು ನಾವು ನಮ್ಮ ಕೆಲಸಗಳಿಗೆ ಹೇಗೆ ಹೊಂದಿಸಿಕೊಳ್ಳುತ್ತೇವೆ ಎಂಬುದು ಮುಖ್ಯ. ಕೊಟ್ಟ ಮಾತು ನಡೆಸಿಕೊಡುವುದರ ಮೇಲೆ ಜನ ವ್ಯಕ್ತಿತ್ವವನ್ನು ಅಳೆಯುತ್ತಾರೆ. ಸಮಯಕ್ಕೆ ಕೊಡುವ ಬೆಲೆ ನಿಮ್ಮ ವ್ಯಕ್ತಿತ್ವದ ಬಗ್ಗೆ ಗೌರವ ಹೆಚ್ಚಿಸುತ್ತದೆ. ಎಲ್ಲರಿಗಿಂತ ನೀವು ಹೇಗೆ ಭಿನ್ನರು ಎಂಬುದನ್ನು ಸ್ಥಾಪಿಸುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಮಯವೂ ಒಂದು ಸಂವಹನ ಮಾದರಿ. ನೀವು 180 ನಿಮಿಷಗಳ ಸಮಯವನ್ನು ಹೇಗೆ ಹೊಂದಿಸಿಕೊಂಡು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುತ್ತೀರೋ, ಹಾಗೆ ನಿಮ್ಮ ಬಗ್ಗೆ ಮೌಲ್ಯಮಾಪಕರಿಗೆ ಒಂದು ಅಭಿಪ್ರಾಯ ಮೂಡಲು ಕಾರಣವಾಗುತ್ತದೆ.

ನಿಮ್ಮ ಬರಹದ ಶಿಸ್ತು, ಸಮಯ ನಿರ್ವಹಣೆಯ ಕೌಶಲ, ವ್ಯಕ್ತಿನಿಷ್ಠ ಮಾದರಿಯ ಉತ್ತರಗಳನ್ನು ಮೌಲ್ಯಮಾಪನ ಮಾಡುವಾಗ ಖಂಡಿತವಾಗಿ ಪ್ರಭಾವ ಬೀರುತ್ತದೆ. ಸಮಯವನ್ನೂ ಸಂವಹನವೆಂದು ಗಂಭೀರವಾಗಿ ಪರಿಗಣಿಸುವವರು ಗೆಲ್ಲುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಾರ್ಯಾರು ಸಮಯಕ್ಕೆ ಎಷ್ಟರಮಟ್ಟಿನ ಪ್ರಾಧಾನ್ಯ ಕೊಡುತ್ತಾರೋ ಅದಕ್ಕೆ ಪೂರಕವಾಗಿ ಪ್ರತಿಫಲ ಪಡೆಯುತ್ತಾರೆ!

(ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ)

ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿಕೆ

ರಾಹುಲ್ ರಸ್ತೆ ಮೇಲೆ ಓಡಾಡುವ ಹುಲಿ

ಹೈದರಾಬಾದ್ (ಪಿಟಿಐ): 'ರಾಹುಲ್ ಗಾಂಧಿ ಅವರನ್ನು ಕೆಲವರು 'ಕೋಣೆಯೊಳಗಿನ ಆನೆ' ಎಂದು ಕರೆಯುತ್ತಾರೆ. ಆದರೆ ಅವರು ರಸ್ತೆ ಮೇಲೆ ನಿರ್ಭೀತಿಯಿಂದ ಓಡಾಡುವ ಹುಲಿ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಬುಧವಾರ ಹೇಳಿದ್ದಾರೆ.

ತೆಲಂಗಾಣದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆಯಲ್ಲಿ ಪಾಲ್ಗೊಂಡಿರುವ ಅವರು ಪಿಟಿಐ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ್ದಾರೆ.

'ರಾಹುಲ್ ಅವರನ್ನು 18 ವರ್ಷಗಳಿಂದ ಬಹಳ ಹತ್ತಿರದಿಂದಲೇ ನೋಡುತ್ತಿದ್ದೇನೆ. ಅವರು ಹಿಂಬಾಲಿಸುವ ಸಹಾಯಕರನ್ನು ಇಷ್ಟಪಡುವುದಿಲ್ಲ. ತಮ್ಮ ಸ್ಥಾನವನ್ನು ಪ್ರತಿಪಾದಿಸುವುದಕ್ಕೂ ಬಯಸುವುದಿಲ್ಲ. ಅವರು ಅತ್ಯಂತ ಪ್ರಜಾಸತ್ತಾತ್ಮಕ ವ್ಯಕ್ತಿ' ಎಂದು ಪ್ರಶಂಸಿಸಿದ್ದಾರೆ.

'ಭಾರತ್ ಜೋಡೊ ಯಾತ್ರೆಯು ಪಕ್ಷದ ಪಾಲಿಗೆ ಬೂಸ್ಟರ್ ಡೋಸ್ ಆಗಿ ಪರಿಣಮಿಸಲಿದೆ. ಪಕ್ಷದ ಸಂಘಟನೆಗೆ ಬಲ ತುಂಬಲಿದೆ. ಯಾತ್ರೆ ಶುರುವಾದ ಬಳಿಕ ಪಕ್ಷದ ಮನೋಬಲ ಉತ್ತುಂಗದಲ್ಲಿದೆ' ಎಂದಿದ್ದಾರೆ.

'ರಾಹುಲ್ ಅವರ ಮೌಲ್ಯಗಳು ಪಕ್ಷಕ್ಕೆ ಸೈದ್ಧಾಂತಿಕ ದಿಕ್ಸೂಚಿ ತೋರುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಯಾತ್ರೆಯು ಅವಕಾಶದ ಬಾಗಿಲನ್ನು ತೆರೆದಿದೆ' ಎಂದೂ ತಿಳಿಸಿದ್ದಾರೆ.

'ಯಾತ್ರೆಯ ಮೂಲಕ ರಾಹುಲ್ ಅವರು ಜನರಿಗೆ ಇನ್ನಷ್ಟು ಹತ್ತಿರವಾಗುತ್ತಿದ್ದಾರೆ. ಪ್ರತಿದಿನ 22 ಕಿ.ಮೀ. ನಡೆಯುತ್ತಿದ್ದಾರೆ. ಸಾವಿರಾರು ಮಂದಿಯನ್ನು ಭೇಟಿಯಾಗುತ್ತಿದ್ದಾರೆ. ವಿವಿಧ ಸಂಘ ಸಂಸ್ಥೆಗಳೊಂದಿಗೆ ಸಂವಾದ ನಡೆಸಿ ಅವರ ಅಭಿಪ್ರಾಯಗಳನ್ನು ಆಲಿಸುತ್ತಿದ್ದಾರೆ. ಯಾತ್ರೆ ಮುಗಿದ ಬಳಿಕ ಜನರು ರಾಹುಲ್ ಅವರನ್ನು ನೋಡುವ ದೃಷ್ಟಿಕೋನವೇ ಬದಲಾಗುತ್ತದೆ' ಎಂದು ಹೇಳಿದ್ದಾರೆ.

ಯಾತ್ರೆಯಿಂದ ಕ್ರಾಂತಿ ಸೃಷ್ಟಿ–ಖರ್ಗೆ: 'ಭಾರತ್ ಜೋಡೊ ಯಾತ್ರೆಯು ಸದ್ದಿಲ್ಲದೆ ಕ್ರಾಂತಿ ಸೃಷ್ಟಿಸುತ್ತಿದ್ದು, ರಾಜಕೀಯ ರಂಗದಲ್ಲಿ ಹೊಸ ಬದಲಾವಣೆಗೆ ನಾಂದಿ ಹಾಡಲಿದೆ' ಎಂದು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಯಾತ್ರೆಯಲ್ಲಿ ಪಾಲ್ಗೊಂಡಿರುವ ಅವರು ಭಾರತ್ ಯಾತ್ರಿಗಳೊಂದಿಗೆ ಬುಧವಾರ ಬೊವೆನಪಲ್ಲಿಯಲ್ಲಿ ಸಂವಾದ ನಡೆಸಿದರು.


ಹೈದರಾಬಾದ್‌ನಲ್ಲಿ ಬುಧವಾರ ನಟಿ ಹಾಗೂ ನಿರ್ಮಾಪಕಿ ಪೂಜಾ ಭಟ್ ಅವರು ರಾಹುಲ್ ಗಾಂಧಿ ಜೊತೆ ಹೆಜ್ಜೆ ಹಾಕಿದರು–ಪಿಟಿಐ ಚಿತ್ರ

ರಾಹುಲ್ ಜೊತೆ ಪೂಜಾ ಭಟ್ ಹೆಜ್ಜೆ

ಭಾರತ್ ಜೋಡೊ ಯಾತ್ರೆಯು ತೆಲಂಗಾಣದಲ್ಲಿ ಎಂಟನೇ ದಿನಕ್ಕೆ ಕಾಲಿಟ್ಟಿದ್ದು, ನಟಿ ಹಾಗೂ ಚಲನಚಿತ್ರ ನಿರ್ಮಾಪಕಿ ಪೂಜಾ ಭಟ್ ಅವರು ಬುಧವಾರ ಯಾತ್ರೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು.

ರಾಹುಲ್ ಜೊತೆ ಕೆಲ ದೂರ ಹೆಜ್ಜೆ ಹಾಕಿದ ಪೂಜಾ, ಕಾಂಗ್ರೆಸ್ ನಾಯಕನ ಜೊತೆ ಗಹನವಾದ ಚರ್ಚೆಯಲ್ಲಿ ತೊಡಗಿರುವುದು ಕಂಡುಬಂತು.

'ಹೈದರಾಬಾದ್‌ನ ಬಾಲನಗರ ಮುಖ್ಯರಸ್ತೆ ಬಳಿಯ ಎಂಜಿಬಿ ಬಜಾರ್ ಶೋರೂಂನಿಂದ ಬುಧವಾರ ಯಾತ್ರೆ ಆರಂಭಗೊಂಡಿತ್ತು. ಯಾತ್ರಿಗಳು ಒಟ್ಟು 28 ಕಿ.ಮೀ. ಕ್ರಮಿಸಿದರು' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಹಿರಂಗ ಹರಾಜು ಪ್ರಕಟಣೆ ವಿರುದ್ಧ ಭಾರಿ ಆಕ್ರೋಶ

ದಲಿತರಿಗೆ ಚಪ್ಪಲಿ ಕಾಯುವ ಕೆಲಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವಸ್ಥಾನದ ಆವರಣದಲ್ಲಿ ಪೂಜಾ ಸಾಮಗ್ರಿ, ಎಳನೀರು ಮಾರಾಟ, ಸುಂಕ ವಸೂಲಿ ಹಕ್ಕುಗಳು ಸಾಮಾನ್ಯ ವರ್ಗಕ್ಕೆ ಮೀಸಲಿಟ್ಟಿದ್ದರೆ, ಚಪ್ಪಲಿ ಕಾಯ್ದುಕೊಳ್ಳುವ ಹಕ್ಕನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಿಟ್ಟಿದ್ದು, ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು.

ಸರ್ಕಾರದ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿರುವ ಬೆಂಗಳೂರಿನ ದೊಡ್ಡಗಣಪತಿ ಮತ್ತು ಸಮೂಹ ದೇವಸ್ಥಾನಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ ಅ.31ರಂದು ಬಹಿರಂಗ ಹರಾಜು ಪ್ರಕಟಣೆಯಲ್ಲಿ ಈ ರೀತಿ ಮೀಸಲು ನಿಗದಿಪಡಿಸಲಾಗಿತ್ತು. ಇದಕ್ಕೆ ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ಟೆಂಡರ್ ಪ್ರಕಟಣೆಯನ್ನು ಬುಧವಾರ ರದ್ದುಪಡಿಸಲಾಗಿದೆ.

ದೊಡ್ಡಗಣಪತಿ ದೇವಾಲಯಕ್ಕೆ ಬರುವ ಭಕ್ತರ ಪೂಜೆಗಳಿಗೆ ಅನುಕೂಲ ಆಗುವಂತೆ ಪೂಜಾ ಸಾಮಗ್ರಿ ಮಾರಾಟ ಮಾಡುವ ಸ್ಥಳದ ಹಕ್ಕು ಸಾಮಾನ್ಯ ವರ್ಗಕ್ಕೆ, ಈಡುಗಾಯಿ ಆಯ್ದುಕೊಳ್ಳುವ ಹಕ್ಕಿನ ಟೆಂಡರ್ ಸಾಮಾನ್ಯ ವರ್ಗಕ್ಕೆ, ಎಳನೀರು ಮಾರಾಟ ಮಾಡುವ ಹಕ್ಕಿನ ಟೆಂಡರ್ ಸಾಮಾನ್ಯ ವರ್ಗಕ್ಕೆ ಮತ್ತು ಪಾದರಕ್ಷೆ ಕಾಯ್ದುಕೊಳ್ಳುವ ಹಕ್ಕಿನ ಟೆಂಡರ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಲಾಗಿತ್ತು.

ಅದೇ ರೀತಿ ದೊಡ್ಡಬಸವಣ್ಣ ದೇವಾಲಯದಲ್ಲಿ ಮೆರಿ ಗೋ ರೌಂಡ್ (ಮಕ್ಕಳ ಆಟ) ಮತ್ತು ಸುಂಕ ವಸೂಲಾತಿ ಹಕ್ಕನ್ನು ಸಾಮಾನ್ಯ ವರ್ಗಕ್ಕೆ, ಇಲ್ಲಿಯೂ ಪಾದರಕ್ಷೆ ಕಾಯ್ದುಕೊಳ್ಳುವ ಹಕ್ಕಿನ ಟೆಂಡರ್ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಿಡಲಾಗಿದೆ. ಕಾರಂಜಿ ಆಂಜನೇಯಸ್ವಾಮಿ ದೇವಾಲಯದ ಖಾಲಿ ಜಾಗದಲ್ಲಿ ಮೆರಿ ಗೋ ರೌಂಡ್ ಅಳವಡಿಸುವ ಟೆಂಡರ್ ಕೂಡ ಸಾಮಾನ್ಯ ವರ್ಗಕ್ಕೆ ಮೀಸಲಿಡಲಾಗಿತ್ತು.

ಇದಕ್ಕೆ ತೀವ್ರ ಟೀಕೆ ವ್ಯಕ್ತವಾಗಿದ್ದು, 'ಯಾರು ಏನು ಕೆಲಸ ಮಾಡಬೇಕು ಎಂಬುದನ್ನು ಸರ್ಕಾರ ಅಧಿಕೃತವಾಗಿಯೇ ಘೋಷಣೆ ಮಾಡಿದೆ' ಎಂಬ ಆಕ್ರೋಶಗಳು ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತವಾಗಿತ್ತು.

ವರದಿ ಕೇಳಿದ ಆಯೋಗ: 'ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಚಪ್ಪಲಿ ಕಾಯುವ ಟೆಂಡರ್ ಮೀಸಲಿರಿಸಿದ್ದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ವರದಿ ಕೇಳಿದ್ದೇನೆ' ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಆಯೋಗದ ಸದಸ್ಯ ಎಚ್.ವೆಂಕಟೇಶ್ ದೊಡ್ಡೇರಿ ತಿಳಿಸಿದ್ದಾರೆ.

'ಈ ಪ್ರಕಟಣೆಯನ್ನು ವಾಪಸ್ ಪಡೆದು ಸರಿಪಡಿಸುವುದಾಗಿ ತಿಳಿಸಿದ್ದರು. ಅದರಂತೆ ಬುಧವಾರ ಪ್ರಕಟಣೆ ವಾಪಸ್ ಪಡೆದಿದ್ದಾರೆ. ಇದು ಸಂತಸದ ವಿಷಯ' ಎಂದು ಅವರು ಹೇಳಿದ್ದಾರೆ.

ಟೆಂಡರ್ ವಾಪಸ್: ಮರು ಪ್ರಕಟಣೆ

ವ್ಯಾಪಕ ವಿರೋಧದ ಬಳಿಕ ಟೆಂಡರ್ ಪ್ರಕಟಣೆಯನ್ನು ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆ ವಾಪಸ್ ಪಡೆದಿದೆ.

ಟೆಂಡರ್ ಈ ಹರಾಜು ಪ್ರಕಟಣೆಯನ್ನು ಮತ್ತೊಮ್ಮೆ ಪ್ರಕಟಿಸಿದ್ದು, ಅದರಲ್ಲಿ ಬೇರೆಲ್ಲಾ ವಿವರಗಳನ್ನು ಹಾಗೇ ಉಳಿಸಿ ಮೀಸಲಾತಿ ವಿವರ ಇದ್ದ ಕಾಲಂ ಕೈಬಿಡಲಾಗಿದೆ.

ಪರವಾನಗಿ ನವೀಕರಿಸದೆ ರಿವಾಲ್ವರ್ ಹೊಂದಿದ್ದ ಪ್ರಕರಣ

ಶಾಸಕ ಸೋಮಶೇಖರ ರೆಡ್ಡಿ ದೋಷಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರವಾನಗಿ ನವೀಕರಿಸದೆ ರಿವಾಲ್ವರ್ ಹೊಂದಿದ್ದಾರೆ' ಎಂಬ ಆರೋಪದಡಿ ಬಳ್ಳಾರಿಯ ಬಿಜೆಪಿ ಶಾಸಕ ಜಿ.ಸೋಮಶೇಖರ ರೆಡ್ಡಿ ಅವರನ್ನು ಶಸ್ತ್ರಾಸ್ತ್ರ ಕಾಯ್ದೆ ಉಲ್ಲಂಘನೆ ಅನ್ವಯ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ದೋಷಿ ಎಂದು ಪರಿಗಣಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜೆ.ಪ್ರೀತ್, ಷರತ್ತುಗಳ ಆಧಾರದಲ್ಲಿ ರೆಡ್ಡಿ ಅವರನ್ನು ಬಿಡುಗಡೆ ಮಾಡಿ ಆದೇಶಿಸಿದ್ದಾರೆ.

'ಆರೋಪಿಯು ತಾವು ಎಸಗಿರುವ ಅಪರಾಧಕ್ಕೆ ವಿಷಾದ ವ್ಯಕ್ತಪಡಿಸಿದ್ದಾರೆ. ಈ ಅಪರಾಧಕ್ಕೆ 1 ರಿಂದ 3 ವರ್ಷಗಳವರೆಗೆ ಶಿಕ್ಷೆ ಮತ್ತು ದಂಡ ವಿಧಿಸಬಹುದಾಗಿದೆ. ಆದರೆ, ಇದು ಜೀವಾವಧಿ ಅಥವಾ ಮರಣ ದಂಡನೆ ವಿಧಿಸಬಹುದಾದ ಪ್ರಕರಣವಲ್ಲ. ಹೀಗಾಗಿ, ದೋಷಿಯನ್ನು ಬಿಡುಗಡೆ ಮಾಡುವುದರಿಂದ ಸಮಾಜದ ಮೇಲೆ ಯಾವುದೇ ದುಷ್ಪರಿಣಾಮ ಆಗುವುದಿಲ್ಲ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?



'ಸೋಮಶೇಖರ ರೆಡ್ಡಿ ಕಾನೂನುಬದ್ಧವಾಗಿ ನಂ.32 ಎನ್. ಪಿ.ಬೋರ್ ರಿವಾಲ್ವರ್ (ನಂ.752708) ಹೊಂದಿದ್ದಾರೆ. ಆದರೆ ಪರವಾನಗಿ ನವೀಕರಿಸದೆ, 2010ರ ಜನವರಿ 1ರಿಂದ 2011ರ ನವೆಂಬರ್ 9ವರೆಗೆ ತಮ್ಮ ಸ್ವಾಧೀನದಲ್ಲೇ ಇರಿಸಿಕೊಂಡಿದ್ದಾರೆ. ಇದು ಶಸ್ತ್ರಾಸ್ತ್ರ ಕಾಯ್ದೆಯ ಕಲಂ 25 (1–ಬಿ) (ಎಚ್)ಕ್ಕೆ ವಿರುದ್ಧವಾಗಿದೆ' ಎಂದು ಬ್ರೂಸ್‌ಪೇಟೆ ಪೊಲೀಸರು ಪ್ರಕರಣ ದಾಖಲಿಸಿದ್ದರು.

'ಕಾರ್ಯಭಾರದ ಒತ್ತಡ ಮತ್ತು ಮನೆಯ ನವೀಕರಣದ ವೇಳೆ ಪರವಾನಗಿ ಪುಸ್ತಕ ಕಳೆದು ಹೋಗಿತ್ತು. ಪರವಾನಗಿ ಯಾವ ದಿನಾಂಕದಂದು ಮುಗಿಯುತ್ತದೆ ಎಂಬುದು ತಿಳಿದಿರಲಿಲ್ಲ' ಎಂದು ಸೋಮಶೇಖರ ರೆಡ್ಡಿ ನ್ಯಾಯಾಲಯಕ್ಕೆ ಸಮಜಾಯಿಷಿ ನೀಡಿದ್ದರು.

ಆದರೆ ನ್ಯಾಯಾಲಯ, 'ಆರೋಪಿಯ ಬಳಿ ಇರುವ ರಿವಾಲ್ವರ್ ಸಾಮಾನ್ಯ ಅಸ್ತ್ರವಲ್ಲ. ಮನೆಯ ನವೀಕರಣ ಸಂದರ್ಭದಲ್ಲಿ ಪರವಾನಗಿ ಪುಸ್ತಕ ಕಳೆದು ಹೋಗಿದೆ ಎಂಬುದನ್ನು ನಂಬಲಾಗದು. ಪುಸ್ತಕ ಕಳೆದು ಹೋಗಿದ್ದರೆ ದೂರು ದಾಖಲಿಸದಂತೆ ಆರೋಪಿಯನ್ನು ಯಾರೂ ತಡೆದಿರಲಿಲ್ಲ. ಜನಪ್ರತಿನಿಧಿಯಾಗಿ ಅವರು ತಾವು ಹೊಂದಿದ ರಿವಾಲ್ವರ್ ಬಗ್ಗೆ ಉಡಾಫೆ ಧೋರಣೆ ತೋರುವುದನ್ನು ಪರಿಗಣಿಸಲು ಆಗದು' ಎಂದು ಹೇಳಿದೆ.

ಷರತ್ತುಗಳು

'ಸೋಮಶೇಖರ ರೆಡ್ಡಿ ಘೋರ ಅಪರಾಧವನ್ನೇನೂ ಎಸಗಿಲ್ಲ. ಅವರ ವಿರುದ್ಧ ಹಾಲಿ ಪ್ರಕರಣ ಹೊರತುಪಡಿಸಿದಂತೆ ಬೇರಾವುದೇ ಕ್ರಿಮಿನಲ್ ಪ್ರಕರಣ ಇಲ್ಲ' ಎಂಬ ಅಭಿಪ್ರಾಯದೊಂದಿಗೆ ಷರತ್ತುಗಳ ಮೇಲೆ ಬಿಡುಗಡೆಗೆ ಆದೇಶಿಸಲಾಗಿದೆ.

'ಶಸ್ತ್ರಾಸ್ತ್ರ ಕಾಯ್ದೆ–1959ರ ಅಡಿ ಆರೋಪಿಯು ₹ 50 ಸಾವಿರ ಮೊತ್ತದ ವೈಯಕ್ತಿಕ ಬಾಂಡ್ ನೀಡಬೇಕು. ಒಂದು ವರ್ಷಕಾಲ ಸೋಮಶೇಖರ ರೆಡ್ಡಿ ಈ ನ್ಯಾಯಾಲಯದ ನಿಗಾದಲ್ಲಿ ಇರುತ್ತಾರೆ. ಅವರು ಶಾಂತಿ ಕಾಪಾಡಬೇಕು. ಉತ್ತಮ ನಡವಳಿಕೆ ತೋರಬೇಕು. ಯಾವುದೇ ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಬಾರದು. ನ್ಯಾಯಾಲಯದ ಅನುಮತಿ ಇಲ್ಲದೇ ವಿದೇಶ ಪ್ರಯಾಣ ಮಾಡುವಂತಿಲ್ಲ. ಮೂರು ತಿಂಗಳಲ್ಲಿ ಒಂದು ಬಾರಿಯಂತೆ ಅವರು ಒಂದು ವರ್ಷ ಕಾಲ ನ್ಯಾಯಾಲಯದ ಮುಂದೆ ಹಾಜರಾಗಬೇಕು' ಎಂದು ಷರತ್ತಿನಲ್ಲಿ ವಿವರಿಸಲಾಗಿದೆ.

ಕಾನೂನು ಸಂಸ್ಥೆ ಆರಂಭಿಸಿದ ಕರ್ನಲ್ ಸಿಂಗ್

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ (ಇಡಿ) ಮಾಜಿ ನಿರ್ದೇಶಕ ಕರ್ನಲ್ ಸಿಂಗ್ ಅವರು ಹಣ ಅಕ್ರಮ ವರ್ಗಾವಣೆ, ವಂಚನೆ, ಕಾರ್ಪೊರೇಟ್ ವ್ಯಾಜ್ಯ ಸೇರಿದಂತೆ ಇತರೆ ಪ್ರಕರಣಗಳ ಕುರಿತು ಕಾನೂನು ಸೇವೆ ಹಾಗೂ ಸಲಹೆ ನೀಡುವುದಕ್ಕಾಗಿ 'ಸರ್ಕಲ್ ಆಫ್ ಕೌನ್ಸೆಲ್ಸ್' ಹೆಸರಿನ ಕಾನೂನು ಸಂಸ್ಥೆಯೊಂದನ್ನು ಆರಂಭಿಸಿದ್ದಾರೆ.

'ವಿದೇಶಿ ವಿನಿಮಯ ನಿರ್ವಹಣಾ ಕಾನೂನು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ, ಕ್ರಿಪ್ಟೊ ಕರೆನ್ಸಿ ಸೇರಿದಂತೆ ಕಾನೂನು ಕ್ಷೇತ್ರದ ವಿವಿಧ ವಿಷಯಗಳ ಬಗ್ಗೆ ಅನುಭವ ಹೊಂದಿರುವವರು ಹಾಗೂ ಇತರರು ಸೇರಿಕೊಂಡು ಸರ್ಕಲ್ ಆಫ್ ಕೌನ್ಸೆಲ್ಸ್ ಸಂಸ್ಥೆ ಆರಂಭಿಸಲಾಗಿದೆ. ವಕೀಲರಾದ ವಿಕ್ರಂ ಸಿಂಗ್, ಜಾಸ್ಮೀನ್ ದಮಕೇವಾಲಾ, ರಸೆಲ್ ಎ ಸ್ಟೇಮಟ್ಸ್ ಮತ್ತು ಅರ್ಚಿತ್ ಸಿಂಗ್ ಅವರು ಈ ಸಂಸ್ಥೆಯ ಭಾಗವಾಗಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

'ದಿ ವೈರ್': ಪೊಲೀಸರ ಶೋಧದ ರೀತಿಗೆ 'ಎಡಿಟರ್ಸ್ ಗಿಲ್ಡ್' ಬೇಸರ

ನವದೆಹಲಿ (ಪಿಟಿಐ): ಬಿಜೆಪಿಯ ಸಾಮಾಜಿಕ ಮಾಧ್ಯಮ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರ ದೂರು ಆಧರಿಸಿ 'ದಿ ವೈರ್' ಸುದ್ದಿ ಮಾಧ್ಯಮ ಕಚೇರಿ ಮತ್ತು ಸಂಪಾದಕರ ಮನೆಗಳಲ್ಲಿ ದೆಹಲಿ ಪೊಲೀಸರು ಶೋಧ ನಡೆಸಿದ ರೀತಿ ತೀವ್ರ ಬೇಸರ ತರಿಸಿದೆ ಎಂದು 'ಎಡಿಟರ್ಸ್ ಗಿಲ್ಡ್' ಬುಧವಾರ ಅಸಮಾಧಾನ ವ್ಯಕ್ತಪಡಿಸಿದೆ.

ಪೊಲೀಸರು ವಿಚಾರಣೆ ಸಲುವಾಗಿ ವಿವಿಧ ಸ್ಥಳಗಳಲ್ಲಿ ತರಾತುರಿಯಲ್ಲಿ ಶೋಧ ನಡೆಸಿದ್ದಾರೆ. ಆದರೆ ಈ ವೇಳೆ ಅವರು ನಡೆದುಕೊಂಡ ರೀತಿ ಸಮಂಜಸಕರವಾಗಿಲ್ಲ ಎಂದು ಗಿಲ್ಡ್ ಹೇಳಿಕೆಯಲ್ಲಿ ತಿಳಿಸಿದೆ.

ದಾಖಲಾಗಿರುವ ದೂರಿಗೆ ಸಂಬಂಧಿಸಿದಂತೆ ಪೊಲೀಸರು ವಸ್ತುನಿಷ್ಠ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಲಿ.



ಆದರೆ ಪ್ರಜಾಪ್ರಭುತ್ವದ ತತ್ವಗಳನ್ನು ಕಡೆಗಣಿಸಿ, ಬೆದರಿಸುವ ತಂತ್ರಗಳನ್ನು ಅನುಸರಿಸಬೇಡಿ ಎಂದು ಆಗ್ರಹಿಸಿದೆ.

'ಪೊಲೀಸರು ಪತ್ರಕರ್ತರ ಮನೆಗಳು ಮತ್ತು ಕಚೇರಿಯಿಂದ ಫೋನ್‌ಗಳು, ಕಂಪ್ಯೂಟರ್‌ಗಳು ಮತ್ತು ಐಪಾಡ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಎಷ್ಟೇ ವಿನಂತಿಸಿಕೊಂಡರು ಡಿಜಿಟಲ್ ಸಾಧನಗಳನ್ನು ಪೊಲೀಸರು ಹಿಂದಿರುಗಿಸಿಲ್ಲ ಎಂದು ದಿ ವೈರ್ ಹೇಳಿಕೆಯಲ್ಲಿ ತಿಳಿಸಿದೆ' ಎಂದು ಗಿಲ್ಡ್ ಹೇಳಿದೆ.

'ಇದು ತನಿಖಾ ನಿಯಮಗಳು ಮತ್ತು ಕಾರ್ಯವಿಧಾನಗಳ ಉಲ್ಲಂಘನೆಯಾಗಿದೆ. ಸಂಪಾದಕರು ಮತ್ತು ಪತ್ರಕರ್ತರ ಡಿಜಿಟಲ್ ಸಾಧನಗಳಲ್ಲಿ ಹಲವು ವಿಶೇಷ ವರದಿಗಳಿಗೆ ಸಂಬಂಧಿಸಿದಂತೆ ಹಲವು ಸೂಕ್ಷ್ಮ ಮತ್ತು ಗೋಪ್ಯ ಮಾಹಿತಿಗಳು ಇರುತ್ತವೆ. ಮೂಲಗಳ ಬಗ್ಗೆ ಮಾಹಿತಿ ಇರುತ್ತವೆ' ಎಂದು ತಿಳಿಸಿದೆ.

ಮಾಳವೀಯ ಅವರ ಕುರಿತು ಮಾಡಿದ ವರದಿಯಲ್ಲಿ ಗಂಭೀರ ಲೋಪಗಳಿರುವುದನ್ನು 'ದಿ ವೈರ್' ಒಪ್ಪಿಕೊಂಡಿದ್ದು, ತಪ್ಪು ಮಾಹಿತಿ ಆಧರಿಸಿದ ವರದಿಗಳನ್ನು ಅದು ಹಿಂಪಡೆದಿದೆ. ತನಿಖಾ ಸಂಸ್ಥೆಗಳು ತನಿಖಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪತ್ರಿಕೋದ್ಯಮದ ಸೂಕ್ಷ್ಮ ಮಾಹಿತಿ ಸೋರಿಕೆಯಾಗದಂತೆ ನೋಡಿಕೊಳ್ಳಬೇಕು ಎಂದೂ ಗಿಲ್ಡ್ ಒತ್ತಾಯಿಸಿದೆ.

ಮಹಿಳಾ ಹಕ್ಕುಗಳ ಕಾರ್ಯಕರ್ತೆ ಇಳಾ ನಿಧನ


ಇಳಾ ಭಟ್

ಅಹಮದಾಬಾದ್ (ಪಿಟಿಐ): ಮಹಿಳಾ ಹಕ್ಕುಗಳ ಕಾರ್ಯಕರ್ತೆ ಮತ್ತು ಮಹಿಳಾ ಸ್ವಯಂ ಉದ್ಯೋಗಿಗಳ ಸಂಘದ (ಎಸ್‌ಇಡಬ್ಲ್ಯುಎ) ಸಂಸ್ಥಾಪಕಿ ಇಳಾ ಭಟ್ (89) ಅವರು ಬುಧವಾರ ಇಲ್ಲಿ ನಿಧನರಾದರು.

ಅವರು ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು. ವಕೀಲರೂ ಆಗಿದ್ದ ಇಳಾ ಅವರಿಗೆ ಪದ್ಮಶ್ರೀ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿದ್ದವು.

'ಮಹಿಳಾ ಕಾರ್ಮಿಕರ ಹಕ್ಕುಗಳನ್ನು ಪ್ರತಿಪಾದಿಸಿದ ಇಳಾ ಭಟ್ ಅವರ ಪರಂಪರೆಯನ್ನು ನಾವು ಮುಂದಕ್ಕೆ ಕೊಂಡೊಯ್ಯಲು ಶ್ರಮಿಸುತ್ತೇವೆ' ಎಂದು ಎಸ್‌ಇಡಬ್ಲ್ಯುಎ ಭಾರತ್ ಟ್ವೀಟ್ ಮಾಡಿದೆ.

ಪ್ರಧಾನಿ ಸಂತಾಪ: ಇಳಾ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮೂಲಕ ಸಂತಾಪ ಸೂಚಿಸಿದ್ದಾರೆ. 'ಮಹಿಳಾ ಸಬಲೀಕರಣ, ಸಮಾಜ ಸೇವೆ ಮತ್ತು ಯುವಜನರ ಶಿಕ್ಷಣಕ್ಕಾಗಿಮಾಡಿರುವ ಕೆಲಸಕ್ಕಾಗಿ ದೀರ್ಘಕಾಲ ಅವರು ನೆನಪಿನಲ್ಲಿ ಉಳಿಯುತ್ತಾರೆ' ಎಂದು ಮೋದಿ ಗುಜರಾತಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಡೆನ್ಮಾರ್ಕ್ ಜತೆ ಒಪ್ಪಂದ: ಸಂಪುಟ ಅನುಮೋದನೆ

ನವದೆಹಲಿ (ಪಿಟಿಐ): ಜಲಸಂಪನ್ಮೂಲ ಅಭಿವೃದ್ಧಿ ಮತ್ತು ನಿರ್ವಹಣಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಡೆನ್ಮಾರ್ಕ್ ಜತೆಗಿನ ಒಡಂಬಡಿಕೆಗೆ (ಎಂಒಯು) ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಸುಲಭ ಮಾಹಿತಿ ಲಭ್ಯತೆ, ಸಮಗ್ರ ಮತ್ತು ಸ್ಮಾರ್ಟ್ ಜಲಸಂಪನ್ಮೂಲ ಅಭಿವೃದ್ಧಿ ಹಾಗೂ ನಿರ್ವಹಣೆ, ಜಲಚರ ಮ್ಯಾಪಿಂಗ್, ಅಂತರ್ಜಲ ಮಾದರಿ, ಮೇಲ್ವಿಚಾರಣೆ ಮತ್ತು ಮರುಪೂರಣ, ಮನೆಗಳ ಮಟ್ಟದಲ್ಲಿ ಪರಿಣಾಮಕಾರಿ ಮತ್ತು ಸುಸ್ಥಿರ ನೀರು ಸರಬರಾಜು ದಕ್ಷತೆ, ಆದಾಯೇತರ ನೀರು ಮತ್ತು ಶಕ್ತಿಯ ಬಳಕೆ ಕಡಿಮೆ ಮಾಡುವುದು, ಹವಾಮಾನ ಬದಲಾವಣೆ ತಗ್ಗಿಸುವಿಕೆ, ನದಿ ಕೇಂದ್ರಿತ ನಗರ ಯೋಜನೆ, ದ್ರವ ತ್ಯಾಜ್ಯ ತಗ್ಗಿಸುವ ಕ್ರಮಗಳು ಒಡಂಬಡಿಕೆಯಲ್ಲಿ ಒಳಗೊಂಡಿವೆ ಎಂದು ಬುಧವಾರ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಸ್ಮಾರ್ಟ್ ಜಲ ಸಂಪನ್ಮೂಲಗಳ ನಿರ್ವಹಣೆಗೆ ಶ್ರೇಷ್ಠತಾ ಕೇಂದ್ರ ಮತ್ತು ವಾರಾಣಸಿಯಲ್ಲಿ ಶುದ್ಧ ನದಿ ನೀರಿನ ಸ್ಮಾರ್ಟ್ ಲ್ಯಾಬ್ ಈ ಒಡಂಬಡಿಕೆಯಲ್ಲಿದೆ. ಸಮಗ್ರ ಮತ್ತು ಸುಸ್ಥಿರ ವಿಧಾನದ ಮೂಲಕ ಪ್ರಸ್ತುತ ಮತ್ತು ಭವಿಷ್ಯದ ಸುರಕ್ಷಿತ ನೀರಿನ ಬೇಡಿಕೆಗಳ ಪೂರೈಕೆ ಖಾತ್ರಿಪಡಿಸುವುದು ಒಪ್ಪಂದದ ಮೂಲ ಉದ್ದೇಶ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು



ಸುಭಾಷಿತ

ನನಗೆ ಯಾವ ಜಾತಿಯೂ ಇಲ್ಲ. ಆದ್ದರಿಂದ ಜಾತಿ ದ್ವೇಷವೂ ಇಲ್ಲ.

-ಕುವೆಂಪು

ಚಿಂತನ ಶಿಬಿರದಲ್ಲಿ ಪ್ರಧಾನಿ ಮಾತು ಅಪ್ರಜಾಸತ್ತಾತ್ಮಕ ಆಲೋಚನೆಗೆ ನಿದರ್ಶನ

ಹರಿಯಾಣದ ಸೂರಜ್‌ಕುಂಡ್‌ನಲ್ಲಿ ಈಚೆಗೆ ನಡೆದ ರಾಜ್ಯಗಳ ಗೃಹ ಸಚಿವರ ‘ಚಿಂತನ ಶಿಬಿರ’ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹಲವು ಆಲೋಚನೆಗಳನ್ನು ಹಂಚಿಕೊಂಡಿದ್ದಾರೆ. ಇವು ಪ್ರಜಾತಾಂತ್ರಿಕ ಆಡಳಿತ ವ್ಯವಸ್ಥೆಯ ಮೂಲ ತತ್ವಗಳಿಗೆ ವಿರುದ್ಧವಾಗಿವೆ. ಆಂತರಿಕ ಭದ್ರತೆಗೆ ಸಂಬಂಧಿಸಿದ ವಿಚಾರಗಳ ಚರ್ಚೆಗೆ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು, ಹಾಗಾಗಿ ಪ್ರಧಾನಿಯವರ ಗಮನ ಆಂತರಿಕ ಭದ್ರತೆಯ ಕಡೆ ಇತ್ತು. ಆದರೆ, ಈ ವಿಚಾರವಾಗಿ ಅವರು ಆಡಿದ ಮಾತುಗಳಲ್ಲಿ ವ್ಯಕ್ತವಾದ ಅವರ ಅಭಿಪ್ರಾಯಗಳು ಸರಿಯಲ್ಲ. ಅವು ಪ್ರಜಾಸತ್ತೆಗೆ ವಿರುದ್ಧ. ನಕ್ಸಲ್‌ವಾದವನ್ನು ಬೇರುಸಹಿತ ಕಿತ್ತುಹಾಕಬೇಕು ಎಂದು ಹೇಳಿದ ಅವರು, ‘ನಗರ ನಕ್ಸಲ’ರನ್ನು ನಾಶ ಮಾಡಬೇಕು, ದೇಶದ ಯುವಕರು ತಪ್ಪುದಾರಿಗೆ ಹೋಗುವುದನ್ನು ತಡೆಯಬೇಕು ಎಂದಾದರೆ ಪೆನ್ ಹಿಡಿದಿರುವ ಮಾವೋವಾದಿಗಳನ್ನು ನಾಶ ಮಾಡಬೇಕು ಎಂದರು. ಇಂತಹ ವ್ಯಕ್ತಿಗಳು ದೇಶದ ಏಕತೆ ಮತ್ತು ಸಮಗ್ರತೆಯನ್ನು ಹಾಳು ಮಾಡಬಲ್ಲರು, ಇಂಥವರನ್ನು ನಿಗ್ರಹಿಸುವ ವ್ಯವಸ್ಥೆಯನ್ನು ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆಯಂಥವು (ಯುಎಪಿಎ) ಗಟ್ಟಿಗೊಳಿಸಿವೆ ಎಂದರು.

‘ನಗರ ನಕ್ಸಲರು’ ಅಂದರೆ ಯಾರು ಎಂಬುದನ್ನು ಪ್ರಧಾನಿಯವರು ಸ್ಪಷ್ಟವಾಗಿ ವ್ಯಾಖ್ಯಾನಿಸಿಲ್ಲ. ಆದರೆ ಅವರು ಪ್ರತಿನಿಧಿಸುವ ಪಕ್ಷದ ಮುಖಂಡರು, ಸರ್ಕಾರದ ಟೀಕಾಕಾರರನ್ನು ಹಾಗೂ ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟಿಸುವವರನ್ನು ‘ನಗರವಾಸಿ ನಕ್ಸಲರು’ ಎಂದು ಕರೆದಿದ್ದಾರೆ. ಹೀಗೆ ಕರೆಸಿಕೊಂಡವರಲ್ಲಿ ಕೆಲವರ ವಿರುದ್ಧ ಯುಎಪಿಎ ಅಡಿ ಪ್ರಕರಣ ದಾಖಲಿಸಿ ಜೈಲಿಗೆ ತಳ್ಳಲಾಗಿದೆ. ಅವರು ಜಾಮೀನು ಪಡೆಯುವುದು ಬಹಳ ಕಷ್ಟ. ಹಲವು ಸಂದರ್ಭಗಳಲ್ಲಿ ಜಾಮೀನು ಸಿಗುವುದೇ ಇಲ್ಲ. ಆದರೆ ಹೀಗೆ ಜೈಲಿಗೆ ತಳ್ಳಲಾದ ವ್ಯಕ್ತಿಗಳ ಪೈಕಿ ಶೇಕಡ 3ರಷ್ಟು ಮಂದಿಯ ವಿರುದ್ಧದ ಆರೋಪಗಳು ಮಾತ್ರ ಸಾಬೀತಾಗಿರುವುದು ಪ್ರಧಾನಿಯವರ ಹೇಳಿಕೆ ಎಷ್ಟು ಟೊಳ್ಳು ಎಂಬುದನ್ನು ಹೇಳುತ್ತಿವೆ. ಬಂಧಿತ ವ್ಯಕ್ತಿಗಳು ದೇಶದ ಭದ್ರತೆಗೆ ಅಪಾಯ ತಂದೊಡ್ಡುವವರಾಗಿದ್ದರೆ, 100ರಲ್ಲಿ 97 ಮಂದಿ ನಿರ್ದೋಷಿಗಳು ಎಂದು ನ್ಯಾಯಾಲಯಗಳು ಹೇಳುತ್ತಿರಲಿಲ್ಲ. ಅಂದರೆ, ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಯುಎಪಿಎ ಪರಿಣಾಮಕಾರಿ ಆಗಿಲ್ಲ. ಆದರೆ ಅದು ಟೀಕಾಕಾರರಿಗೆ ಕಿರುಕುಳ ನೀಡಲು ಆಡಳಿತಾರೂಢ ಪಕ್ಷಕ್ಕೆ ನೆರವಾಗಿದೆ. ಹಲವಾರು ಸಾಮಾಜಿಕ ಕಾರ್ಯಕರ್ತರು, ಅಕಾಡೆಮಿಕ್ ವಲಯದವರು, ವಿದ್ಯಾರ್ಥಿಗಳು ಮತ್ತು ಪತ್ರಕರ್ತರು ಕಾನೂನಿನ ಬಲಿಪಶುಗಳಾಗಿ ಆಗಿದ್ದಾರೆ. ಪತ್ರಕರ್ತ ಸಿದ್ದಿಕ್ ಕಪ್ಪನ್, ವಿದ್ಯಾರ್ಥಿ ಕಾರ್ಯಕರ್ತೆಯರಾದ ದೇವಾಂಗನಾ ಕಲಿತಾ ಮತ್ತು ನತಾಶಾ ನರ್ವಾಲ್ ಅವರಂತಹ ಕೆಲವರಿಗೆ ಜಾಮೀನು ದೊರೆತಿದೆ (ಕಪ್ಪನ್ ಅವರು ಇನ್ನೊಂದು ಪ್ರಕರಣದಲ್ಲಿ ಇನ್ನೂ ಜೈಲಿನಲ್ಲಿದ್ದಾರೆ). ಇನ್ನೂ ಹಲವರು ಜೈಲಿನಲ್ಲಿದ್ದು ಜಾಮೀನು ಪಡೆಯಲು ಹೋರಾಟ ನಡೆಸಿದ್ದಾರೆ. ಕೆಲವರಿಗೆ ಕಾನೂನು ಹೋರಾಟ ನಡೆಸಲು ಆಗುವುದಿಲ್ಲ. ಕಾಯಿಲೆಗೆ ತುತ್ತಾಗಿದ್ದ ಸ್ಟ್ಯಾನ್ ಸ್ವಾಮಿ ಅವರು ಜಾಮೀನು ನಿರೀಕ್ಷೆಯಲ್ಲಿಯೇ ಜೈಲಿನಲ್ಲಿ ಮೃತಪಟ್ಟರು.



ಪ್ರಧಾನಿಯವರು ಸಮರ್ಥಿಸಿಕೊಂಡಿರುವ ಯುಎಪಿಎ ಎಂಬ ಕರಾಳ ಶಾಸನವನ್ನು ದೇಶದ ಭದ್ರತೆ ಹಿತದೃಷ್ಟಿಯಿಂದ ರದ್ದು ಮಾಡಬೇಕು

ಯುಎಪಿಎ ಕಾನೂನು ಪ್ರಭುತ್ವವನ್ನು ಶಕ್ತಗೊಳಿಸುವುದಿಲ್ಲ. ಬದಲಿಗೆ ಅದು ಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ. ಸಾಂವಿಧಾನಿಕ ತತ್ವಗಳನ್ನು ಆಧರಿಸಿರುವ ಕಾನೂನು ಮತ್ತು ಸುವ್ಯವಸ್ಥೆಯನ್ನು ಅದು ದುರ್ಬಲಗೊಳಿಸುತ್ತದೆ. ‘ಕಾನೂನಿಗೆ ಅನುಗುಣವಾಗಿ ಅಲ್ಲದೆ ಬೇರೆ ಯಾವ ರೀತಿಯಿಂದಲೂ ಯಾವುದೇ ವ್ಯಕ್ತಿಗೆ ವೈಯಕ್ತಿಕ ಸ್ವಾತಂತ್ರ್ಯ ನಿರಾಕರಣೆಗೆ ಅವಕಾಶವಿಲ್ಲ’ ಎಂದು ಸಂವಿಧಾನವು ತಾಕೀತು ಮಾಡುತ್ತದೆ. ಆದರೆ ಈ ಕಾಯ್ದೆಯು ಸ್ಪಷ್ಟವಾಗಿ ಗೋಚರಿಸುವ ರೀತಿಯಲ್ಲಿ ಅಪ್ರಜಾಸತ್ತಾತ್ಮಕ ಮಾರ್ಗ ಅನುಸರಿಸಿ ಸಂವಿಧಾನದ ಈ ಸೂಚನೆಯನ್ನು ಉಲ್ಲಂಘಿಸುತ್ತದೆ. ಪ್ರಜೆಗಳ ಹಕ್ಕುಗಳನ್ನು ಗೌರವಿಸುವ ಮೂಲಕ, ಪ್ರಜಾತಾಂತ್ರಿಕ ನಿಯಮಗಳಿಗೆ ಬದ್ಧವಾಗಿರುವ ಮೂಲಕ ಪ್ರಭುತ್ವವು ಹೆಚ್ಚು ಶಕ್ತಿಯುತವಾಗುತ್ತದೆ. ಟೀಕಾಕಾರರ ವಿರುದ್ಧ ದ್ವೇಷದಿಂದ ಕಠಿಣ ಕಾನೂನು ಪ್ರಯೋಗಿಸುವುದರಿಂದ ಪ್ರಭುತ್ವ ಬಲಗೊಳ್ಳುವುದಿಲ್ಲ. ನಾಗರಿಕ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಹಾಗೂ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಯುಎಪಿಎ ಕಾನೂನು ವಾಸ್ತವದಲ್ಲಿ ದೇಶಕ್ಕೆ ಅಪಾಯಕಾರಿ. ದೇಶದ ಭದ್ರತೆ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಈ ಕರಾಳ ಶಾಸನವನ್ನು ರದ್ದುಮಾಡಬೇಕು.

ಕೂಳೆ ಸುಡುವ ಪರಿಪಾಟದ ಹಿಂದಿನ ರಾಜಕಾರಣ ನಿಲ್ಲುವುದೆಂದು?

ದೆಹಲಿಯ ನವೆಂಬರ್ ವಾಯುಮಾಲಿನ್ಯ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ತೀವ್ರ ಸ್ವರೂಪದ ವಾಯುಮಾಲಿನ್ಯಕ್ಕೆ ಹೆಸರಾದ ದೇಶದ ರಾಜಧಾನಿ ದೆಹಲಿಯ ನಿವಾಸಿಗಳಿಗೆ ನವೆಂಬರ್ ತಿಂಗಳು ಉಸಿರು ಕಟ್ಟುವ ಸಮಯ. ವಾಯುಮಾಲಿನ್ಯದ ವಾಡಿಕೆಯ ಮೂಲಗಳ ಜೊತೆಗೆ, ಅದೇ ಸಮಯದಲ್ಲಿ ಪಂಜಾಬ್, ರಾಜಸ್ಥಾನ, ಹರಿಯಾಣ ಮತ್ತು ಉತ್ತರ ಪ್ರದೇಶದಲ್ಲಿ ವ್ಯಾಪಕವಾಗಿರುವ ಭತ್ತದ ‘ಕೂಳೆ ಸುಡುವ’ ಪರಿಪಾಟವು ದೆಹಲಿಯ ಗಾಳಿಯ ಗುಣಮಟ್ಟವನ್ನು ಅಧೋಗತಿಗೆ ಇಳಿಸಿ ಅತ್ಯಂತ ಅಪಾಯಕಾರಿಯನ್ನಾಗಿ ಮಾಡುತ್ತದೆ. ಈ ಕಾರಣದಿಂದಲೇ ಮೂರು ವರ್ಷಗಳ ಹಿಂದೆ ನವೆಂಬರ್ ತಿಂಗಳಿನಲ್ಲಿ, ಸುಪ್ರೀಂ ಕೋರ್ಟ್‌ನ ಅಂದಿನ ನ್ಯಾಯಮೂರ್ತಿ ಅರುಣ್ ಮಿಶ್ರಾ ‘ದೆಹಲಿಯ ಪರಿಸ್ಥಿತಿ ನರಕಕ್ಕಿಂತಲೂ ಕೆಟ್ಟದಾಗಿದೆ’ ಎಂದು ಟೀಕಿಸಿದ್ದರು. ಹಾಗಾದರೆ ಈ ವರ್ಷದ ನವೆಂಬರ್ ಪರಿಸ್ಥಿತಿ ಹೇಗಿರಲಿದೆ? ಅಂತಹ ಮುನ್ಸೂಚನೆಯನ್ನು ಕಂಡುಕೊಳ್ಳಲೆಂದೇ ಸೆಪ್ಟೆಂಬರ್ 30ರಂದು, ಕೇಂದ್ರ ಪರಿಸರ, ಅರಣ್ಯ ಮತ್ತು ವಾಯುಗುಣ ಬದಲಾವಣೆ ಸಚಿವಾಲಯದಲ್ಲಿ ಸಂಬಂಧಿತ ರಾಜ್ಯ ಸರ್ಕಾರಗಳ ಸಭೆ ನಡೆದು, ಈ ಸಮಸ್ಯೆಯನ್ನು ನಿಯಂತ್ರಿಸಿ, ಪರಿಹರಿಸಲು ಇದುವರೆಗೂ ಕೈಗೊಂಡಿರುವ ವಿವಿಧ ಕ್ರಮಗಳ ವಿಸ್ತೃತ ಪರಿಶೀಲನೆ ನಡೆಯಿತು.

ಪ್ರತಿವರ್ಷ ಸೆಪ್ಟೆಂಬರ್- ಅಕ್ಟೋಬರ್ ಅವಧಿಯಲ್ಲಿ ಪಂಜಾಬ್, ಹರಿಯಾಣ, ಉತ್ತರಪ್ರದೇಶ ಮತ್ತು ರಾಜಸ್ಥಾನದ ರೈತರು ಭತ್ತದ ಬೆಳೆಯ ಕಟಾವಿನ ನಂತರ, ಮುಂದಿನ ಬೆಳೆಯ ಸಿದ್ಧತೆಯಾಗಿ, ತಮ್ಮ ಭೂಮಿಯಲ್ಲಿ ಉಳಿದಿರುವ ಕೂಳೆಗಳಿಗೆ ಬೆಂಕಿ ಹಚ್ಚಿ ಸುಡುತ್ತಾರೆ. ಈ ಎರಡು ತಿಂಗಳ ನಡುವಿನ ಸುಮಾರು ಮೂರು ವಾರಗಳ ಅವಧಿಯಲ್ಲಿ ಈ ನಾಲ್ಕೂ ರಾಜ್ಯಗಳಿಂದ ಅಂದಾಜು ಮೂರೂವರೆ ಕೋಟಿ ಟನ್‌ಗಳಷ್ಟು ಕೂಳೆಯನ್ನು ಸುಡಲಾಗುತ್ತದೆ. ಅದರಿಂದ ಹೊರಬರುವ ಹೊಗೆ, ದೂಳು, ರಾಸಾಯನಿಕ ವಸ್ತುಗಳು, ವಿಷಕಾರಿ ಅನಿಲಗಳು ದೆಹಲಿಯತ್ತ ಚಲಿಸಿ, ನಗರವನ್ನು ಆವರಿಸಿ, ದಟ್ಟವಾದ ಹೊಂಜಿಗೆ ಕಾರಣವಾಗಿ ತೀವ್ರ ಸ್ವರೂಪದ ಉಸಿರಾಟದ ತೊಂದರೆಗಳನ್ನು ಉಂಟುಮಾಡುತ್ತವೆ. ಕೂಳೆಗಳಿಗೆ ಬೆಂಕಿ ಹಾಕುವುದನ್ನು ಕಾನೂನುಬಾಹಿರ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು 2015ರಲ್ಲೇ ನಿಷೇಧಿಸಿದ್ದರೂ ಕಾನೂನನ್ನು ಯಶಸ್ವಿಯಾಗಿ ಜಾರಿಗೊಳಿಸುವುದು ಸಾಧ್ಯವಾಗಿಲ್ಲ.

ಭತ್ತದ ಕಟಾವಿನ ನಂತರ 15ರಿಂದ 25 ಸೆಂ.ಮೀ. ಎತ್ತರದ ಕೂಳೆಗಳು ಭೂಮಿಯಲ್ಲಿಯೇ ಉಳಿಯುತ್ತವೆ. ಅವುಗಳನ್ನು ಸಂಪೂರ್ಣವಾಗಿ ತೆಗೆಯಲು ಎಕರೆಯೊಂದಕ್ಕೆ ₹ 3,000 ವೆಚ್ಚವಾಗುತ್ತದೆ. ಅದಕ್ಕಿಂತ ಸುಡುವುದೇ ಅಗ್ಗವೆಂಬುದು ರೈತರ ಅಭಿಪ್ರಾಯ. ಹೀಗೆ ಕೂಳೆಗಳನ್ನು ಸುಡುವುದರಿಂದ ನೆಲದಲ್ಲಿನ ಉಪಯುಕ್ತ ಸೂಕ್ಷ್ಮಜೀವಿಗಳು ಸಾಯುವುದರೊಡನೆ, ಸುಟ್ಟ ಪ್ರತೀ ಟನ್ ಕೂಳೆಗೆ 5.5 ಕಿ.ಗ್ರಾಂ ನೈಟ್ರೋಜನ್, 2.5 ಕಿ.ಗ್ರಾಂ ಪೊಟ್ಯಾಷಿಯಂ, 2.13 ಕಿ.ಗ್ರಾಂ ಫಾಸ್ಫರಸ್ ಮತ್ತು 1 ಕಿ.ಗ್ರಾಂನಷ್ಟು ಸಲ್ಫರ್ ಅನ್ನು ಮಣ್ಣು ಕಳೆದುಕೊಳ್ಳುತ್ತದೆ ಎಂಬುದನ್ನು ಕೃಷಿ ವಿಜ್ಞಾನಿಗಳು ಹೇಳುತ್ತ ಬಂದಿದ್ದರೂ ರೈತರು ಅತ್ತ ಗಮನ ಕೊಟ್ಟಿಲ್ಲ.

2018ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದ ಯಾಂತ್ರೀಕೃತ ಕೃಷಿ ಪ್ರೋತ್ಸಾಹ ಯೋಜನೆಯಡಿ-ಯಲ್ಲಿ, ಏಕಕಾಲದಲ್ಲಿ ಭತ್ತದ ಕೂಳೆಯನ್ನು ಕತ್ತರಿಸಿ, ಗೋಧಿಯ ಬೀಜವನ್ನು ಬಿತ್ತಿ, ಅದರ ಮೇಲೆ ಭತ್ತದ ಹುಲ್ಲನ್ನು ಹರಡುವ, ವಿವಿಧೋದ್ದೇಶದ ‘ಹ್ಯಾಪಿಸೀಡರ್’ ಯಂತ್ರವನ್ನು ಬಳಕೆಗೆ ತರಲಾಯಿತು. ಈ ಯಂತ್ರ ಪ್ರಾರಂಭದಲ್ಲಿ ಬಹಳಷ್ಟು ಜನಪ್ರಿಯವಾಯಿತು. ಆನಂತರ ಇದೇ ಉದ್ದೇಶಕ್ಕಾಗಿ ಹಲವಾರು ಸುಧಾರಿತ ಯಂತ್ರಗಳೂ ಬಂದವು. ಈ ಯಂತ್ರಗಳನ್ನು ವ್ಯಾಪಕವಾಗಿ ಬಳಕೆಗೆ ತರಲು ಶೇ 50ರಿಂದ ಶೇ 80ರವರೆಗೂ ಸಬ್ಸಿಡಿ ನೀಡುವ ಯೋಜನೆ ಜಾರಿಗೆ ಬಂದಿತು. ಆ ಯಂತ್ರಗಳನ್ನು ಕೊಳ್ಳಲಾರದ ಸಣ್ಣ ರೈತರಿಗೆ ಬಾಡಿಗೆಗೆ ನೀಡುವ ವ್ಯವಸ್ಥೆಯೂ ಪ್ರಾರಂಭವಾಯಿತು. ಆದರೆ ಯಾವ ವೆಚ್ಚವೂ ಇಲ್ಲದೆ ಕೂಳೆಗಳನ್ನು ಸುಡುವುದೇ ಸುಲಭ-ವಾದ್ದರಿಂದ ಈ ವಿವಿಧ ಯಂತ್ರಗಳು ನಿರೀಕ್ಷಿತ ಮಟ್ಟದಲ್ಲಿ ಬಳಕೆಗೆ ಬಂದಿಲ್ಲ.

2020ರಲ್ಲಿ ದೆಹಲಿಯ ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಐಎಆರ್‌ಐ), ಎಂಟು ಕಿಣ್ವಕಾರಕ ಜೀವಿಗಳನ್ನು ಒಳಗೊಂಡ ‘ಪೂಸಾ ಕ್ಯಾಪ್ಸೂಲ್’ ಎಂಬ ಜೈವಿಕ ವಿಘಟನಕಾರಿಯನ್ನು (ಬಯೊ ಡೀಕಂಪೋಸರ್) ರೂಪಿಸಿತು. ಈ ಕ್ಯಾಪ್ಸೂಲ್ ಅಥವಾ ಪುಡಿಯನ್ನು ನೀರಿನಲ್ಲಿ ಬೆರೆಸಿ ಕೂಳೆಗಳ ಮೇಲೆ ಸಿಂಪಡಿಸಿದ ಕೆಲವೇ ದಿನಗಳಲ್ಲಿ ಅವು ವಿಘಟನೆಗೊಂಡು, ಮೆದುವಾದ ಹಸಿರು ಗೊಬ್ಬರವಾಗಿ ಮಣ್ಣಿನಲ್ಲಿ ಬೆರೆತು, ಭೂಮಿಯ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಈ ಜೈವಿಕ ವಿಘಟನಕಾರಿಯನ್ನು ಉತ್ಪಾದಿಸುತ್ತಿರುವ ಯುನೈಟೆಡ್ ಫಾಸ್ಫರಸ್ ಕಂಪನಿ (ಯುಪಿಎಲ್) ಅದನ್ನು ರೈತರಿಗೆ ಉಚಿತವಾಗಿ ವಿತರಿಸುತ್ತಿದೆ.

ಕೂಳೆ ಸುಡುವ ಸಮಸ್ಯೆಗೆ ಉತ್ತಮ ಪರಿಹಾರ ಒದಗಿಸುವ ಸಾಮರ್ಥ್ಯವಿರುವ ಜೈವಿಕ ವಿಘಟನಕಾರಿಯ ಬಳಕೆಯು ಮೂರು ವರ್ಷಗಳಿಂದ ಭರದಿಂದ ಸಾಗಿದೆ. ಸೆಪ್ಟೆಂಬರ್ 30ರ ಸಭೆಯಲ್ಲಿ ಬೆಳಕಿಗೆ ಬಂದ ಅಂಕಿಅಂಶಗಳಂತೆ 2021ರ ಅಕ್ಟೋಬರ್-ನವೆಂಬರ್‌ನಲ್ಲಿ, ಪಂಜಾಬ್ ಮತ್ತು ಹರಿಯಾಣದಲ್ಲಿ 4.2 ಲಕ್ಷ ಎಕರೆಗಳಲ್ಲಿದ್ದ ಕೂಳೆಗಳ ಮೇಲೆ ಈ ಜೈವಿಕ ವಿಘಟನಕಾರಿಯನ್ನು ಸಿಂಪಡಿಸಲಾಯಿತು. ಇದರಲ್ಲಿ 3.8 ಲಕ್ಷ ಎಕರೆಗಳಲ್ಲಿ ಈ ಪ್ರಯೋಗ ಯಶಸ್ವಿಯಾದು-ದನ್ನು ಐಎಆರ್‌ಐ ಮತ್ತು ಯುಪಿಎಲ್ ದಾಖಲೆಗಳು ತಿಳಿಸುತ್ತವೆ. ಉಳಿದ 0.4 ಲಕ್ಷ ಎಕರೆಗಳಲ್ಲಿ ಪ್ರಯೋಗ ಹಲವಾರು ಕಾರಣಗಳಿಂದ ನಿರೀಕ್ಷಿತ ಫಲಿತಾಂಶ ನೀಡಲಿಲ್ಲ. 3.8 ಲಕ್ಷ ಎಕರೆಗಳಲ್ಲಿದ್ದ ಕೂಳೆಗಳಿಗೆ ಬೆಂಕಿ ಹಾಕದೇ ಪೂಸಾ ಕ್ಯಾಪ್ಸೂಲ್ ದ್ರಾವಣವನ್ನು ಸಿಂಪಡಿಸಿದ್ದರಿಂದ, 10 ಲಕ್ಷ ಟನ್‌ನಷ್ಟು ಕಾರ್ಬನ್ ಡೈ ಆಕ್ಸೈಡ್, 1.41 ಲಕ್ಷ ಟನ್‌ಗಳಷ್ಟು ಬೂದಿ, 42,697 ಟನ್‌ಗಳಷ್ಟು ಕಾರ್ಬನ್ ಮಾನಾಕ್ಸೈಡ್, 2,135 ಟನ್‌ಗಳಷ್ಟು ಕಣ ಮಾಲಿನ್ಯಕಾರಕಗಳ (ಪಾರ್ಟಿಕ್ಯುಲೇಟ್ ಪೊಲ್ಯೂಟೆಂಟ್ಸ್) ಉತ್ಸರ್ಜನೆ ಕಡಿಮೆಯಾಗಿರುವ ಅಂದಾಜಿದೆ.

ಈ ಎರಡು ರಾಜ್ಯಗಳಲ್ಲಿ ಈ ಅವಧಿಯಲ್ಲಿ ಯೂರಿಯಾದ ಬಳಕೆ ಶೇ 20ರಷ್ಟು ಕಡಿಮೆಯಾಗಿದೆ. 2022ರಲ್ಲಿ 20 ಲಕ್ಷ ಎಕರೆಗಳಲ್ಲಿ ಜೈವಿಕ ವಿಘಟನಕಾರಿ-ಯನ್ನು ಸಿಂಪಡಿಸುವ ಗುರಿಯನ್ನು ಕೇಂದ್ರ ಸರ್ಕಾರ ನಿಗದಿ-ಪಡಿಸಿತ್ತು. ಆದರೆ ಪಂಜಾಬ್ ಸರ್ಕಾರವು ಗುರಿಯನ್ವಯ 5.75 ಲಕ್ಷ ಎಕರೆಗಳಲ್ಲಿನ ಕೂಳೆಗೆ ಈ ಕ್ರಮವನ್ನು ವಿಸ್ತರಿಸುವಲ್ಲಿ ವಿಫಲವಾಗಿದ್ದು ತೀವ್ರ ಟೀಕೆಗೆ ಒಳಗಾಗಿದೆ. ಇದರಿಂದಾಗುವ ತೊಂದರೆಯನ್ನು ತಪ್ಪಿಸಲು ರೈತರಿಗೆ ಪ್ರೋತ್ಸಾಹಕ ರೂಪದಲ್ಲಿ ಹಣವನ್ನು ನೀಡಿ, ಕೂಳೆ ಸುಡದಂತೆ ಮಾಡಬೇಕೆಂಬ ಆಮ್ ಆದ್ಮಿ ಪಕ್ಷದ ಸಲಹೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ.

ರೈತರ ಭೂಮಿಯಲ್ಲಿರುವ ಕೂಳೆಯನ್ನು ಇಂಧನದ ಬಿಲ್ಲೆಗಳಾಗಿ ಪರಿವರ್ತಿಸುವ ತಂತ್ರಜ್ಞಾನ ಇಂದು ಲಭ್ಯವಿದೆ. ಇಂಧನದ ಬಿಲ್ಲೆಗಳನ್ನು ಉತ್ಪಾದಿಸುವ ಉದ್ಯಮಿಗಳು ರೈತರೊಡನೆ ಕೂಳೆಯ ಸರಬರಾಜಿಗೆ ಒಪ್ಪಂದ ಮಾಡಿಕೊಂಡಲ್ಲಿ, ಅಂತಹ ಕಂಪನಿಗಳಿಗೆ ಉತ್ಪಾದನಾ ಸ್ಥಾವರವನ್ನು ಸ್ಥಾಪಿಸಲು ₹ 70 ಲಕ್ಷದಿಂದ 1.4 ಕೋಟಿವರೆಗಿನ ಸಹಾಯಧನವನ್ನು ಸರ್ಕಾರ ಪ್ರಕಟಿಸಿದೆ.

ಈ ಎಲ್ಲ ಕ್ರಮಗಳ ಫಲವಾಗಿ ಈ ವರ್ಷದ ನವೆಂಬರ್ ತಿಂಗಳು ದೆಹಲಿಯ ನಿವಾಸಿಗಳಿಗೆ ಹೆಚ್ಚು ಸಹ್ಯವಾಗಬಲ್ಲದೇ? ಅಂತಹ ಆಶಯ ಸಹಜವಾದರೂ ಅದರ ಸಾಧ್ಯತೆ ಬಹು ಕಡಿಮೆ. ದೆಹಲಿಯ ವಾಯುಮಾಲಿನ್ಯಕ್ಕೆ ಹಲವಾರು ಕಾರಣಗಳಿವೆ. ಆದರೆ ನವೆಂಬರ್ ತಿಂಗಳ ಮಧ್ಯಭಾಗದ ವೇಳೆಗೆ ಪರಿಸ್ಥಿತಿ ತೀರಾ ವಿಕೋಪಕ್ಕೆ ಹೋಗಲು ಕಾರಣ ಕೂಳೆ ಸುಡುವ ಅಭ್ಯಾಸ. ಆ ಸಮಯದಲ್ಲಿ ದೆಹಲಿಯ ವಾಯುಮಂಡಲದಲ್ಲಿರುವ ಒಟ್ಟು ಕಣ ಮಾಲಿನ್ಯಕಾರಕಗಳ ಸುಮಾರು ಅರ್ಧಭಾಗ ಕೂಳೆ ಸುಡುವುದರಿಂದ ಬರುತ್ತದೆ. ಅದನ್ನು ಕಡಿಮೆ ಮಾಡುವುದು ಸರ್ಕಾರಗಳ ಮುಂದಿರುವ ಸವಾಲು. ಈ ಪರಿಸ್ಥಿತಿಗೆ ಕಾರಣವಾಗಿರುವ ನಾಲ್ಕೂ ರಾಜ್ಯಗಳು ರಾಜಕಾರಣ ಮಾಡುವುದನ್ನು ನಿಲ್ಲಿಸಿ, ಪರಸ್ಪರ ದೋಷಾರೋಪವನ್ನು ಕೈಬಿಟ್ಟು, ಸಹಕರಿಸಿ ಶ್ರಮಿಸಿದರೆ, ಮುಂದಿನ ನಾಲ್ಕೈದು ವರ್ಷಗಳಲ್ಲಿ ದೆಹಲಿಯ ನಿವಾಸಿಗಳಿಗೆ ನವೆಂಬರ್ ತಿಂಗಳು ನರಕವಾಗುವುದನ್ನು ತಪ್ಪಿಸಬಹುದು ಎಂಬುದು ತಜ್ಞರ ಖಚಿತ ಅಭಿಪ್ರಾಯ.



ಚುರುಮುರಿ



ಟ್ರ್ಯಾಪ್ ಸೀಕ್ರೆಟ್

• ಮಣ್ಣೆ ರಾಜು

‘ರೀ, ಚಲಪತಿ ಮನೇಲಿ ಆಡಿಯೊ ಟ್ರ್ಯಾಪ್ ಆಗಿ ಅತ್ತೆ, ಸೊಸೆ ಹೊಡೆದಾಡಿಕೊಂಡು ಆಸ್ಪತ್ರೆ ಸೇರಿದ್ದಾರಂತೆ...’ ಸುದ್ದಿ ಹೇಳಿದಳು ಸುಮಿ.

‘ಸೊಸೆಗೆ ಬೈಯ್ಯಬಾರದ್ದನ್ನು ಬೈದು ಪಕ್ಕದ ಮನೆಯವಳ ಜೊತೆ ಅತ್ತೆ ಸಂಕಟ ತೋಡಿಕೊಂಡ ವಿಚಾರ ತಾನೆ?’ ಶಂಕ್ರಿ ಕೇಳಿದ.

‘ಹೌದು, ಪಕ್ಕದ ಮನೆಯವಳು ಅತ್ತೆಯ ಬೈಗುಳವನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಸೊಸೆಗೆ ಕೊಟ್ಟಳಂತೆ. ಆ ವಿಚಾರ ದೊಡ್ಡದಾಗಿ ಅತ್ತೆ, ಸೊಸೆ ಹೊಡೆದಾಡಿಕೊಂಡು ಬ್ಯಾಂಡೇಜ್ ಕಟ್ಟಿಸಿಕೊಂಡು ಆಸ್ಪತ್ರೆ ಹಾಸಿಗೆ ಮೇಲೆ ಮಲಗಿದ್ದಾರೆ’.

‘ಅತ್ತೆ– ಸೊಸೆ ಕಾಟದಲ್ಲಿ ಚಲಪತಿ ಪರಿಸ್ಥಿತಿ ಏನಾಗಿದೆಯೋ...’ ಶಂಕ್ರಿಗೆ ಅಯ್ಯೋ ಪಾಪ ಅನಿಸಿತು.

‘ಪದ್ಮಾಳ ಗಂಡ ‘ಮನಿ’ಟ್ರ್ಯಾಪ್ ಆಗಿರುವ ವಿಚಾರ ಗೊತ್ತಾಯ್ತಾ?’

‘ಗೊತ್ತಾಯ್ತು. ಲಂಚ ಪಡೆಯುವಾಗ ಲೋಕಾ-ಯುಕ್ತದವರು ಅವನನ್ನು ಟ್ರ್ಯಾಪ್ ಮಾಡಿದರಂತೆ’.

‘ಪದ್ಮಾಳಿಗೆ ಹಾಗೇ ಆಗಬೇಕು, ಅವಳ ಧಿಮಾಕು ಜಾಸ್ತಿಯಾಗಿತ್ತು. ‘ಛೇ, ಹೀಗಾಗ ಬಾರದಿತ್ತು...’ ಅಂತ ಮೆಸೇಜ್ ಕಳಿಸಿ ಅವಳ ಹೊಟ್ಟೆ ಉರಿಸಿದ್ದೀನಿ’ ಎಂದಳು ಸುಮಿ.

‘ಮೊನ್ನೆ ನಮ್ಮ ಆಫೀಸ್ ಬಾಸ್ ಹನಿಟ್ರ್ಯಾಪ್ ಆಗಿದ್ದರು. ಹೇಗೋ ಸೆಟಲ್‌ಮೆಂಟ್ ಮಾಡಿಕೊಂಡು ಅದೃಷ್ಟವಶಾತ್ ಬಚಾವಾದ್ರು’.

‘ಹನಿಟ್ರ್ಯಾಪ್ ಕೇಸುಗಳು ಹೆಚ್ಚಾಗುತ್ತಿವೆ ಕಣ್ರೀ, ‘ಹನಿ’ಮಲ್‌ಗಳ ಬಗ್ಗೆ ಗಂಡಸರು ಎಚ್ಚರಿಕೆಯಿಂದ ಇರಬೇಕು...’

‘ಆತಂಕ ಬೇಡ, ‘ಹನಿ’ಮಲ್‌ಗಳು ನಮ್ಮಂತಹವರ ತಂಟೆಗೆ ಬರೋದಿಲ್ಲ, ದೊಡ್ಡ ಅಧಿಕಾರಿಗಳು, ರಾಜಕಾರಣಿಗಳು, ಮಠಾಧೀಶರಿಗೆ ಬಲೆ ಬೀಸುತ್ತವೆ’.

‘ಹನಿ’ಮಲ್‌ಗಳು ಯಾರಿಗಾದರೂ ವಕ್ಕರಿಸಬಹುದು. ಅಪಾಯಕಾರಿ ಹನಿಟ್ರ್ಯಾಪ್‌ಗೆ ಒಳಗಾಗಿ ಜಾಲತಾಣದಲ್ಲಿ ಜಮಾ ಆದ ಅನೇಕರು ಮಾನ, ಪ್ರಾಣ ಕಳೆದುಕೊಂಡಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಹೋದ ಮಾನ ಟೀವಿ ಮೀಡಿಯಾದಲ್ಲಿ ಕುಳಿತು ಕ್ಷಮೆ ಕೇಳಿದರೂ ಬರೋಲ್ಲ ಕಣ್ರೀ. ಮಾನಹರಣ ಮಾಡುವ ಹನಿಟ್ರ್ಯಾಪ್ ಬಗ್ಗೆ ನೀವು ಹುಷಾರಾಗಿರಿ...’ ಎಂದು ಸುಮಿ ಎಚ್ಚರಿಸಿದಳು.

ದಿನದ ಟ್ವೀಟ್

ಅಭಿನಂದನೆಗಳು



ಅದ್ಭುತವಾಗಿ ಜಯ ಗಳಿಸಿದ ಭಾರತ ತಂಡಕ್ಕೆ ಅಭಿನಂದನೆಗಳು. ಮಳೆ ಸುರಿಯುವ ಮುನ್ನ ಇದು ಬಾಂಗ್ಲಾದೇಶದ ಹಿಡಿತದಲ್ಲಿದ್ದ ಪಂದ್ಯ. ನಂತರದಲ್ಲಿ ಭಾರತದ ಬೌಲರ್‌ಗಳು ದಿಟ್ಟ ತಿರುಗೇಟು ನೀಡಿದರು. ಫೀಲ್ಡಿಂಗ್ ಕೂಡ ವಿಶೇಷವಾಗಿತ್ತು.

ವೀರೇಂದ್ರ ಸೆಹ್ವಾಗ್, ಕ್ರಿಕೆಟ್ ವೀಕ್ಷಕ ವಿವರಣೆಗಾರ

ಕಿಡಿನುಡಿ



ಮನುಷ್ಯರ ಮೇಲೆ ಆನೆ ದಾಳಿ ನಿರಂತರ ನಡೆಯುತ್ತಿದೆ. ಮಂಗಳವಾರ ಮತ್ತೊಬ್ಬ ಯುವಕ ಆನೆ ದಾಳಿಗೆ ಬಲಿಯಾಗಿದ್ದಾನೆ. ಆನೆ ದಾಳಿ ತಡೆಯಲು ಕ್ರಮ ತೆಗೆದುಕೊಳ್ಳುವಂತೆ ಸರ್ಕಾರದ ಮೇಲೆ ಪದೇ ಪದೇ ಒತ್ತಡ ಹಾಕಿದರೂ ಯಾವುದೇ ಪ್ರಯೋಜನ ಆಗಿಲ್ಲ. ಹೀಗೆ ಮೃತಪಟ್ಟವರಿಗೆ ಪರಿಹಾರಧನ ಹೆಚ್ಚಿಸುವುದಾಗಿ ಭರವಸೆ ನೀಡಿದ್ದ ಸರ್ಕಾರ, ಅದನ್ನೂ ಈಡೇರಿಸಿಲ್ಲ.

ಎ.ಟಿ.ರಾಮಸ್ವಾಮಿ, ಜೆಡಿಎಸ್ ಶಾಸಕ

25 ವರ್ಷಗಳ ಹಿಂದೆ

ಸೋಮವಾರ, 3-11-1997

• **ವೀರಪ್ಪನ್ ವಿರುದ್ಧ ಕಾರ್ಯತಂತ್ರ: ಕರ್ನಾಟಕ, ತಮಿಳುನಾಡು ಅಧಿಕಾರಿಗಳ ಭೇಟಿ**

ಬೆಂಗಳೂರು, ನ. 2– ಕಾಡುಗಳ್ಳ ವೀರಪ್ಪನ್ ವಿರುದ್ಧ ಕಾರ್ಯತಂತ್ರ ರೂಪಿಸುವ ಸಲುವಾಗಿ ಕರ್ನಾಟಕ ಮತ್ತು ತಮಿಳುನಾಡಿನ ಪೊಲೀಸ್ ಉನ್ನತಾಧಿಕಾರಿಗಳು ಚೆನ್ನೈನಲ್ಲಿ ನಾಳೆ ಭೇಟಿಯಾಗಲಿದ್ದಾರೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ತಿಳಿಸಿದ್ದಾರೆ.

ತಮಿಳುನಾಡು ಸರ್ಕಾರದ ಜೊತೆ ಸೇರಿ ನಡೆಸಲಿರುವ ಜಂಟಿ ಕಾರ್ಯಾಚರಣೆಯ ಕಾರ್ಯವಿಧಾನದ ಕುರಿತು ರೂಪುರೇಷೆ ಸಿದ್ಧಪಡಿಸುವ ಸಲುವಾಗಿ ಅಧಿಕಾರಿಗಳು ಚೆನ್ನೈಗೆ ಹೊರಡಲಿದ್ದಾರೆ. ಡಿಜಿಪಿ ಟಿ. ಶ್ರೀನಿವಾಸಲು ನೇತೃತ್ವದ ಹಿರಿಯ ಅಧಿಕಾ-ರಿಗಳನ್ನು ಒಳಗೊಂಡ ಕರ್ನಾಟಕ ತಂಡವು ತಮಿಳುನಾಡಿನ ಅಧಿಕಾರಿಗಳ ಜೊತೆ ಮಾತುಕತೆ ನಡೆಸಲಿದೆ.

ಶರಣಾಗತನಾಗಲು ವೀರಪ್ಪನ್ ವಿಧಿಸಿರುವ ಹೊಸ ಷರತ್ತುಗಳನ್ನು ಕರ್ನಾಟಕ ಮತ್ತು ತಮಿಳುನಾಡು ಸಂಪೂರ್ಣವಾಗಿ ತಳ್ಳಿಹಾಕಿವೆ.

50 ವರ್ಷಗಳ ಹಿಂದೆ

ಶುಕ್ರವಾರ, 3-11-1972

• **ಕೋಮುಶಕ್ತಿ ವಿರುದ್ಧ ಹೋರಾಟ; ಏಕತೆ ಸಾಧನೆಗೆ ಪ್ರಧಾನಿ ಕರೆ**

ಮುಂಬೈ, ನ. 2– ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಿ ದೇಶವನ್ನು ಪ್ರಗತಿ ಮತ್ತು ಏಕತೆಯತ್ತ ಕೊಂಡೊಯ್ಯಬೇಕು ಎಂದು ಪ್ರಧಾನಿ ಇಂದಿರಾ ಗಾಂಧಿ ಇಂದು ಜನತೆಗೆ ಕರೆ ನೀಡಿದರು.

ಇಲ್ಲಿ ‘ಮಹಾರಾಷ್ಟ್ರ ಸಾಂಪ್ರದಾಯಿಕ್ತಿ ವಿರೋಧಿ’ ಸಮ್ಮೇಳನದ (ಕೋಮು ವಿರೋಧಿರಂಗ) ಉದ್ಘಾಟನೆಯನ್ನು ನೆರವೇರಿಸುತ್ತಿದ್ದ ಅವರು ‘ಕೇವಲ ಶಾಸನಗಳಿಂದ ಏನನ್ನೂ ಸಾಧಿಸಲಾಗದು. ಜನತೆಯೇ ಕೋಮುವಾದದ ವಿರುದ್ಧ ಹೋರಾಡಲು ಬೇಕಾದ ಏಕತೆಯನ್ನು ಮೂಡಿಸಬೇಕು’ ಎಂದು ಸೂಚಿಸಿದರು.

ಏಕತೆಯಿಲ್ಲದೆ, ದೇಶದ ಪ್ರಗತಿಗೆ ಯಾವ ಕ್ರಮ ಕೈಗೊಂಡರೂ ಅದು ಫಲಿಸದು. ಜನತೆ ನೆಮ್ಮದಿಯಿಂದ, ದ್ವೇಷಾಸೂಯೆಗಳಿಲ್ಲದೆ ಶಾಂತಿಯಿಂದ ಇದ್ದರೂ ಕೆಲವರು ಕೋಮುವಾದದ ವಿಷಬೀಜ ಬಿತ್ತಿ ವೈಷಮ್ಯದ ವಾತಾವರಣವನ್ನು ಉಂಟು ಮಾಡುತ್ತಿದ್ದಾರೆ. ಇಂತಹ ಪ್ರವೃತ್ತಿಯನ್ನು ತಡೆಯಬೇಕು. ಅಲ್ಲದೇ, ಕೋಮುಶಕ್ತಿಗಳ ಮಾತುಗಳಿಗೆ ಜನರು ಮರುಳಾಗಬಾರದು ಎಂದೂ ಕರೆ ನೀಡಿದರು.

ಕೋಮುಗಲಭೆಗಳು ತಲೆದೋರುವ ಮುನ್ನವೇ ‘ಕೋಮು ವಿರೋಧಿ ರಂಗಗಳು’ ಸೂಕ್ತ ಕ್ರಮ ಕೈಗೊಂಡು ಗಲಭೆಗಳನ್ನು ನಿವಾರಿಸಬೇಕು. ಸ್ವಾತಂತ್ರ್ಯಾನಂತರ 25 ವರ್ಷಗಳಲ್ಲಿ ಈ ಕೋಮುಪಿಡುಗನ್ನು ತೊಲಗಿಸಲು ಸಾಧ್ಯವಾಗದಿರುವುದು ವಿಷಾದನೀಯ ಎಂದರು.

• **ಖ್ಯಾತ ಕವಿ ಎಜ್ರಾ ಪೌಂಡ್ ನಿಧನ**

ವೆನ್ನಿಸ್ (ಇಟಲಿ) ನ. 2– ಅಮೆರಿಕದಿಂದ ರಾಷ್ಟ್ರದ್ರೋಹ ಆಪಾದನೆಗೆ ಗುರಿಯಾಗಿ 14 ವರ್ಷಗಳ ಹಿಂದೆ ಇಲ್ಲಿ ಬಂದು ನೆಲೆಸಿದ ಖ್ಯಾತ ಕವಿ ಎಜ್ರಾ ಪೌಂಡ್ ಅವರು ಬುಧವಾರ ರಾತ್ರಿ ಇಲ್ಲಿನ ಆಸ್ಪತ್ರೆಯೊಂದರಲ್ಲಿ ನಿಧನ ಹೊಂದಿದರು. ಅವರಿಗೆ 83 ವರ್ಷ ವಯಸ್ಸಾಗಿತ್ತು. ಮಂಗಳವಾರ ಅವರನ್ನು ಇಲ್ಲಿನ ಸೇಂಟ್ ಜಾನ್ ಮತ್ತು ಪಾಲ್ ಆಸ್ಪತ್ರೆಗೆ ಸೇರಿಸಲಾಗಿತ್ತು.

ಸಂಗತ

ಕನ್ನಡದಲ್ಲಿ ವಿಜ್ಞಾನ: ಅಳಿಯಲಿ ಅಜ್ಞಾನ

ವಿಜ್ಞಾನ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಮಾಹಿತಿ ಕನ್ನಡದಲ್ಲಿದ್ದರೆ ಜನಸಮೂಹಕ್ಕೆ ಸರಾಗ, ಪ್ರಯೋಜನಕರ

• ಬಿ.ಎಸ್.ಭಗವಾನ್

‘**ಎರಡು** ಲೋಟ ನೀರಿಗೆ ತಲೆ ಒಡೆದು ಒಂದು ಲೋಟ ಅಕ್ಕಿ ಹಾಕು...’, ‘ಉಗುರು ಬೆಚ್ಚಗಿನ ಹಾಲಿಗೆ ತೊಟ್ಟು ಮೊಸರು ಹೆಪ್ಪಿಗೆ ಸಾಕು’, ‘ಒಂದೆಳೆ ಪಾಕ ಬಂದ್ರಾಯ್ತು’... ಅಡುಗೆಗೆ ಸಂಬಂಧಿಸಿದಂತೆ ಮಗಳಿಗೆ ತಾಯಿಯ ಇಂತಹ ನಿರ್ದೇಶನಗಳು ಓಬಿರಾಯನ-ಕಾಲಕ್ಕೇನೂ ಸರಿದಿಲ್ಲ. ಪುಸ್ತಕದ ಓದಿಗೂ ಮೀರಿ ಬದುಕನ್ನು ಹಸನಾಗಿಸುವುದು ನಮ್ಮ ಪರಂಪರಾಗತ ಅನುಭವಗಳೇ.

ವಿಜ್ಞಾನವು ಸಂಶೋಧನಾಲಯಗಳ, ವಿಶ್ವ-ವಿದ್ಯಾಲಯಗಳ ದಂತಗೋಪುರದಲ್ಲಿ ಉಳಿದರೆ ಅದು ಜನಸಾಮಾನ್ಯರಿಗೆ ನಿಲುಕುವುದು ಹೇಗೆ? ವಿಜ್ಞಾನದ ಮುನ್ನಡೆಯ ಕೆಲ ಅಂಶಗಳನ್ನಾದರೂ ಆಡುನುಡಿಯಲ್ಲೇ ಜನರಿಗೆ ಪರಿಚಯಿಸಬೇಕಿದೆ.

ನಾವು ಇಷ್ಟಪಡಲಿ, ಪಡದಿರಲಿ ವಿಜ್ಞಾನ ಸಾಹಿತ್ಯ ಇಂಗ್ಲಿಷಿನಲ್ಲೇ ವಿಪುಲ, ಅಲ್ಲಿಂದಲೇ ಅದು ಜಗತ್ತಿನ ಉಳಿದ ಭಾಷೆಗಳಿಗೆ ಬರಬೇಕು. ಇತಿಹಾಸದಲ್ಲಿ ಮೇಧಾವಿಗಳು ಮಾತೃಭಾಷೆಗೆ ನಿಷ್ಠರಾಗಿದ್ದರು. ಅವರೆಲ್ಲ ತಂತಮ್ಮ ಮಾತೃಭಾಷೆಯಲ್ಲೇ ಆಲೋಚಿಸಿ ಮಾತೃಭಾಷೆಯಲ್ಲೇ ಬರೆದರು. ಚಿಂತನೆಗೆ ಒಂದು ಭಾಷೆ, ಬರವಣಿಗೆಗೆ ಇನ್ನೊಂದು ಆದರೆ ರಚಿಸುವ ಕೃತಿಗೆ, ಮಂಡಿಸುವ ವಿಚಾರಕ್ಕೆ ಹೇಗೆ ತಾನೆ ನ್ಯಾಯ ಒದಗೀತು? ಈ ತರ್ಕ ಎಲ್ಲ ಜ್ಞಾನಶಾಖೆಗಳಿಗೂ ಅನ್ವಯಿಸುತ್ತದೆ. ಅರಿಸ್ಟಾಟಲ್, ಪ್ಲೇಟೊ, ಯೂಕ್ಲಿಡ್ ಗ್ರೀಕ್ ಭಾಷೆಯಲ್ಲೇ ಗ್ರಂಥಗಳನ್ನು ರಚಿಸಿದರು. ನಂತರ ಅವರ ಅನುಯಾಯಿಗಳು ಅವನ್ನು ಅರೇಬಿಕ್‌ಗೆ ಭಾಷಾಂತರಿಸಿದರು.

ಆರ್ಕಿಮಿಡೀಸ್ ಸ್ನಾನದ ತೊಟ್ಟಿಯಿಂದ ಓಡುತ್ತ ಉದ್ಗರಿಸಿದ ಪದ ‘ಯುರೇಕಾ’ (ಕಂಡುಹಿಡಿದೆ) ಗ್ರೀಕ್ ಭಾಷೆಯದು. ಎಷ್ಟೇ ಭಾಷೆಗಳನ್ನು ಕಲಿತರೂ ಆವೇಗ, ಉದ್ವೇಗಗಳು ಹೊರಹೊಮ್ಮುವುದು ಮಾತೃಭಾಷೆಯ ಮೂಲಕವೇ ಎನ್ನಲು ಈ ಉದಾಹರಣೆಯೇ ಸಾಕು!

ನ್ಯೂಟನ್ ತನ್ನ ‘ಪ್ರಿನ್ಸಿಪಿಯ’ ಗ್ರಂಥವನ್ನು ಬರೆದಿದ್ದು ಲ್ಯಾಟಿನ್ ಭಾಷೆಯಲ್ಲಿ. ಫ್ರಾನ್ಸ್ ದೇಶದ ಗಣಿತ ಶ್ರೇಷ್ಠರೆಲ್ಲ ಗಣಿತ ಕೃಷಿ ನಡೆಸಿದ್ದು ಫ್ರೆಂಚ್ ಭಾಷೆಯಲ್ಲಿ. ಹೀಗೆ ಅಭಿವ್ಯಕ್ತಿಗೆ ಮಾತೃಭಾಷೆಗೆ ಪರ್ಯಾಯವಾದ ಭಾಷೆಯನ್ನು ಊಹಿಸಿಕೊಳ್ಳಲೂ ಆಗದು.

ಭಾರತದಲ್ಲಿ ಆಯಾ ಪ್ರಾಂತ ಭಾಷೆಯಲ್ಲಿ ವಿಜ್ಞಾನ ಜನಪ್ರಿಯವಾಗಬೇಕು. ವಿಜ್ಞಾನ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಮಾಹಿತಿ ಕನ್ನಡದಲ್ಲಿದ್ದರೆ ಜನ ಸಮೂಹಕ್ಕೆ ಸರಾಗ, ಪ್ರಯೋಜನಕರ. ಇಂಗ್ಲಿಷ್ ಅಥವಾ ಮತ್ತ್ಯಾವುದೇ ಭಾಷೆಯಲ್ಲಿರುವ ಅರಿವನ್ನು ಕನ್ನಡಕ್ಕೆ ತಂದುಕೊಳ್ಳುವುದು ಬಹು ಸೂಕ್ಷ್ಮದ ಕೆಲಸ. ಬರವಣಿಗೆಗಾರರ ಹೊಣೆ ದೊಡ್ಡದು. ಇಂಗ್ಲಿಷಿನಲ್ಲಿ-ರುವ ಅಂಶಗಳನ್ನು ಸಮರ್ಥವಾಗಿ ಗ್ರಹಿಸಿ ಕನ್ನಡದಲ್ಲಿ ಯೋಚಿಸಿ ಬರೆಯಬೇಕು. ಈ ದಿಸೆಯಲ್ಲಿ ಕನ್ನಡದಲ್ಲಿ ಸರಿಹೊಂದುವ ಪಾರಿಭಾಷಿಕ ಪದಗಳು ದುರ್ಲಭ, ನಿರೂಪಣೆ ಕಷ್ಟ, ತಕ್ಕ ಅರ್ಥಾನ್ವಯಗಳು ಕಷ್ಟಸಾಧ್ಯ ಎಂಬಂಥ ಅಸಹಾಯಕತೆ, ಅಪಸ್ವರಗಳುಂಟು. ಸಾವಧಾನದಿಂದ ವಿವೇಚಿಸಿದರೆ ಇವು ಭೇದಿಸಲಾಗದ ಅಡೆತಡೆಗಳೇನೂ ಅಲ್ಲ.

ವಿಜ್ಞಾನ- ತಂತ್ರಜ್ಞಾನ ನಿಘಂಟುಗಳು ದಶಕಗಳ ಹಿಂದೆಯೇ ಪ್ರಕಟಗೊಂಡಿವೆ. ಕೆಲವು ಇಂಗ್ಲಿಷ್ ಪದಗಳು ಬಹು ತಾಂತ್ರಿಕವೆನ್ನಿಸಿದರೆ ಹಾಗೆಯೇ ಬಳಸಬಹುದು. 5-12ನೇ ಶತಮಾನಗಳ ಅವಧಿಯಲ್ಲಿ ಇಂಗ್ಲೆಂಡ್ ಮತ್ತು ಆಗ್ನೇಯ ಏಷ್ಯಾದಲ್ಲಿ ಆಂಗ್ಲೊ ಸ್ಯಾಕ್ಸನ್ನರು ಎಂಬ ಜನಸಮುದಾಯವಿತ್ತು. ಅವರ ಭಾಷೆ ‘ಆಂಗ್ಲೊ ಸ್ಯಾಕ್ಸನ್’ ಎಂದು ಕರೆಯಬಹುದಾದ ಹಳೇ ಇಂಗ್ಲಿಷ್. ಪ್ರಸ್ತುತ ಇಂಗ್ಲಿಷ್ ಭಾಷೆಯಲ್ಲಿರುವ ಅನೇಕ ಪದಗಳು ಆಂಗ್ಲೊ ಸ್ಯಾಕ್ಸನ್ ಆಗಿವೆ.

ನಮಗೆ ಪಿ.ಯು.ಸಿ.ಯಲ್ಲಿ ಗಣಿತ ಕಲಿಸುತ್ತಿದ್ದ ಉಪನ್ಯಾಸಕರೊಬ್ಬರು ವೃತ್ತದ ವಿವರಣೆಯನ್ನು ವಿಶಿಷ್ಟವಾಗಿ ನೀಡುತ್ತಿದ್ದರು: ನೋಡಿ, ಒಂದು ಸ್ಥಿರ ಬಿಂದು ಇದೆ. ಚಲಿಸುವ ಇನ್ನೊಂದಕ್ಕೆ ಅದು ನೀನಲ್ಲೇ ಇರು, ಹೇಗೇ ಇರು ನನ್ನಿಂದ ಒಂದೇ ದೂರದಲ್ಲಿರು ಎನ್ನುತ್ತದೆ’. ಬೆಳಕಿನ ಪ್ರಯಾಣಕ್ಕೆ ಯಾವ ಮಾಧ್ಯಮವೂ ಬೇಡ. ಅದು ಕಣವೂ ನಿಜ, ಅಲೆಯೂ ನಿಜ. ‘ಕಣಲೆ’ ಎಂಬ ಸುಂದರ ಹೆಸರು ಬೆಳಕಿಗೆ ಬಂದಿತು. ಇಂತಹ ಪದ ಪ್ರಯೋಗಗಳು ಕನ್ನಡ ವಿಜ್ಞಾನ ಸಂವಹನವನ್ನು ಶಕ್ತಿಯುತಗೊಳಿಸುತ್ತವೆ. ವಿಜ್ಞಾನ ಸಾಕ್ಷರತೆಯಿಂದ ಮೌಢ್ಯ, ಅಂಧಶ್ರದ್ಧೆ ನಿವಾರಣೆಯಾಗಿ ವೈಚಾರಿಕತೆ, ವೈಜ್ಞಾನಿಕ ಮನೋಭಾವ ಬೆಳೆಯುತ್ತವೆ. ಮಳೆ, ಭೂಕಂಪ, ಸುನಾಮಿ, ಅಗ್ನಿಪರ್ವತ, ಗ್ರಹಣ, ಧೂಮಕೇತು ಅಂತಹವು ಕಾರ್ಯಕಾರಣ ಸಂಬಂಧಿತ ವಿದ್ಯಮಾನಗಳೇ ವಿನಾ ಪವಾಡಗಳಲ್ಲ ಎಂಬ ತಥ್ಯ ಮನವರಿಕೆಯಾಗುತ್ತದೆ.



ಯಾವುದೇ ಭಾಷೆಯಲ್ಲಿರುವ ವಿಜ್ಞಾನವನ್ನು ಕನ್ನಡದ ವಾತಾವರಣಕ್ಕೆ ಆವಾಹಿಸಿಕೊಳ್ಳಬಹುದು. 1604ರಲ್ಲಿ ಶೃಂಗೇರಿಯ ಶಂಕರನಾರಾಯಣ ಜೋಯಿಸರು ‘ಗಣಿತಗನ್ನಡಿ’ ಎಂಬ ಕೃತಿ ರಚಿಸಿದರು. ಕನ್ನಡವೂ ಅಲ್ಲದ ಸಂಸ್ಕೃತವೂ ಅಲ್ಲದ ಭಾಷೆಯ ಈ ಕೃತಿ ‘ನಂದಿನಾಗರಿ’ ಎಂಬ ಭಾಷೆಯಲ್ಲಿದ್ದು ಖಗೋಳ ವಿಜ್ಞಾನವನ್ನು ಕುರಿತದ್ದಾಗಿದೆ.

ಕನ್ನಡ ಮಾಧ್ಯಮದಲ್ಲಿ ವಿಜ್ಞಾನ ಕಲಿತರೆ ಮುಂದೆ ಎಂಜಿನಿಯರಿಂಗ್, ವೈದ್ಯಕೀಯ ವ್ಯಾಸಂಗ ಹೇಗೋ ಏನೋ ಎನ್ನುವ ವಿದ್ಯಾರ್ಥಿಗಳ (ಅವರಿಗೂ ಹೆಚ್ಚಾಗಿ ಅವರ ಪೋಷಕರ!) ಆತಂಕ ಅರ್ಥಹೀನ. ಏಕೆಂದರೆ ಆ ಹಂತದ ವೇಳೆಗೆ ತಕ್ಕಮಟ್ಟಿಗೆ ಅವರಲ್ಲಿ ಕನ್ನಡವೇ ಸೇತುವೆಯಾಗಿ ಇಂಗ್ಲಿಷ್ ಭಾಷೆಯ ಪರಿಶ್ರಮ ರೂಪು-ಗೊಂಡಿರುತ್ತದೆ. ಅವರು ಪರಾಮರ್ಶನದ ಮನಃಸ್ಥಿತಿ ರೂಢಿಸಿಕೊಂಡೇ ಇರುತ್ತಾರೆ.

ಅಂದಹಾಗೆ ‘ಬಾಲ ವಿಜ್ಞಾನ’, ‘ವಿಜ್ಞಾನ ಸಂಗಾತಿ’, ‘ಸೂತ್ರ’ದಂಥ ವಿಜ್ಞಾನ ನಿಯತಕಾಲಿಕಗಳ ಪ್ರಸರಣ ಸಂಖ್ಯೆ ಹೆಚ್ಚಬೇಕು. ಮಾಧ್ಯಮಗಳು ಭೂತ, ಭವಿಷ್ಯಕ್ಕಿಂತ ವರ್ತಮಾನಕ್ಕೆ ಆದ್ಯತೆ ನೀಡಬೇಕು, ಜನರಲ್ಲಿ ಭಯ, ಭೀತಿಗೆ ಆಸ್ಪದ ನೀಡದೆ ನಾಳೆಯನ್ನು ಆತ್ಮವಿಶ್ವಾಸದಿಂದ ಬರಮಾಡಿಕೊಳ್ಳುವ ಜಾಯಮಾನ ಬಿತ್ತಬೇಕು.

ವಾಚಕರ ವಾಣಿ

ಈ ರೀತಿಯ ತಾರತಮ್ಯವೇಕೆ?

ಕರ್ನಾಟಕ ರಾಜ್ಯೋತ್ಸವದ ಪ್ರಶಸ್ತಿ ಮೊತ್ತವನ್ನು ರಾಜ್ಯ ಸರ್ಕಾರವು ₹ 1 ಲಕ್ಷದಿಂದ ₹ 5 ಲಕ್ಷಕ್ಕೆ ಏರಿಸಿರುವುದೇನೊ ಸರಿ. ಆದರೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ರಾಜ್ಯೋತ್ಸವದ ನಿಮಿತ್ತ ಗೌರವಿಸಲಾಗುವ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಜೊತೆಗೆ ಕನಿಷ್ಠ ಮೊತ್ತವನ್ನೂ ನೀಡುತ್ತಿಲ್ಲ. ಶಾಲು, ಪೇಟ, ಹಾರ, ಹಣ್ಣು, ಪ್ರಶಸ್ತಿ ಪತ್ರ, ಸ್ಮರಣಿಕೆ-ಯನ್ನಷ್ಟೇ ನೀಡಿ ಕೈ ತೊಳೆದುಕೊಳ್ಳುತ್ತಿರುವುದು ಎಷ್ಟರಮಟ್ಟಿಗೆ ಸರಿ?

ದೊಡ್ಡ ಮೊತ್ತ ನೀಡಲಾಗದಿದ್ದರೂ ಜಿಲ್ಲಾ ಮತ್ತು ತಾಲ್ಲೂಕು ಹಂತಕ್ಕೆ ಹೊಂದಿಕೆಯಾಗುವಂತೆ ಒಂದಿಷ್ಟಾದರೂ ಗೌರವಯುತವಾಗಿ ಪ್ರಶಸ್ತಿ ಮೊತ್ತವನ್ನು ನೀಡಿದರೆ, ಸಾಧಕರನ್ನು ಇನ್ನಷ್ಟು ಗೌರವಯುತವಾಗಿ ನಡೆಸಿಕೊಂಡಂತೆ ಆಗುತ್ತದೆ.

ಸಮುದ್ರವಳ್ಳಿ ವಾಸು, ಹಾಸನ

‘ಕರ್ನಾಟಕ ರಾಜ್ಯೋತ್ಸವ’ವೇ ಸರಿ

ಕರ್ನಾಟಕ ರಾಜ್ಯೋತ್ಸವಕ್ಕೆ ಸಂಬಂಧಿಸಿದಂತೆ ಚಂದ್ರಕಾಂತ ವಡ್ಡು ಅವರು ಎತ್ತಿರುವ ಧ್ವನಿಯನ್ನು (ವಾ.ವಾ., ನ. 2) ಪ್ರಬಲವಾಗಿ ಸಮರ್ಥಿಸುತ್ತೇನೆ. ಸಂವಿಧಾನದ ಮೊದಲ ಶೆಡ್ಯೂಲ್‌ನಲ್ಲಿರುವ ರಾಜ್ಯಗಳ ಪಟ್ಟಿಯಲ್ಲಿ ‘ಕರ್ನಾಟಕ’ ಎಂಬ ರಾಜ್ಯವಿದೆಯೇ ವಿನಾ, ‘ಕನ್ನಡ ರಾಜ್ಯ’ ಎಂದಿಲ್ಲ. ಅಂದಾಗ, ಕನ್ನಡ ರಾಜ್ಯೋತ್ಸವಕ್ಕೆ ಏನು ಅರ್ಥ?

ಕರ್ನಾಟಕದಲ್ಲಿ ಕನ್ನಡವಲ್ಲದೇ ಉರ್ದು, ತುಳು, ಬ್ಯಾರಿ, ಕೊಡವ, ಬಂಜಾರ್... ಹೀಗೆ (2011ರ ಜನಗಣತಿ) 156 ಮಾತೃಭಾಷೆಗಳು ಇವೆ. ಕರ್ನಾಟಕ ಅವರೆಲ್ಲರಿಗೂ ಸೇರಿದ್ದು. ನವೆಂಬರ್ 1ರಂದು ಉದಯವಾಗಿದ್ದು ಕರ್ನಾಟಕ. ಅಂದು ನಾವು ‘ಎಲ್ಲರೂ’ ಸೇರಿ ಆಚರಿಸಬೇಕಾದದ್ದು ‘ಕರ್ನಾಟಕ ರಾಜ್ಯೋತ್ಸವ’. ನಮ್ಮಂಥ ಕನ್ನಡ ಭಾಷಾಭಿಮಾನಿಗಳು ಕನ್ನಡೋತ್ಸವವನ್ನು ಬೇರೊಂದು ದಿನ ಆಚರಿಸೋಣ. ಒಂದು ಕಡೆ ‘ಕನ್ನಡ’ ಇನ್ನೊಂದು ಕಡೆ, ‘ಕರ್ನಾಟಕ’ ಎಂದು ಎರಡನ್ನೂ ಬಳಸುವ, ಪ್ರಕಟಿಸುವ (‘ಕನ್ನಡ’ ಸರ್ಕಾರವಲ್ಲ), ಕರ್ನಾಟಕ ಸರ್ಕಾರ ಹೆಚ್ಚು ಪ್ರಬುದ್ಧ ನಿಲುವನ್ನು ತಾಳಬೇಕು.

ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ, ಬೆಂಗಳೂರು

ದ್ವೇಷಭಾಷೆ ಎಂಬ ಅಮಲು

‘ದ್ವೇಷ ಬಿತ್ತುವ ಭಾಷೆಗೆ ಮದ್ದುಂಟೆ?’ ಎಂಬ ನಟರಾಜ್ ಹುಳಿಯಾರ್ ಅವರ ಲೇಖನವು (ಪ್ರ.ವಾ., ಅ. 31) ಸಾರ್ವಜನಿಕವಾಗಿ ಏನಾದರೂ ಮಾತನಾಡುವಾಗ ಯೋಚನೆ ಮಾಡಿ ಮಾತನಾಡಬೇಕು ಎಂಬುದನ್ನು ಸೂಚ್ಯವಾಗಿ ಹೇಳುತ್ತದೆ. ನಾವು ಹಲವಾರು ಪಂಗಡ, ಧರ್ಮದ ಜನರನ್ನು ಒಳಗೊಂಡ ಬಹುಮುಖಿ ಸಮಾಜದಲ್ಲಿ ಬದುಕುತ್ತಿರುವುದರಿಂದ ಅನ್ಯರ ಭಾವನೆಗಳಿಗೆ ಧಕ್ಕೆಯಾಗದಂತೆ ನುಡಿದರೆ ಮಾತ್ರ ಸಾಮಾಜಿಕ ಸಾಮರಸ್ಯ ಇರುತ್ತದೆ.

ಇಂದು ದ್ವೇಷ ಬಿತ್ತುವ ಮಾತುಗಳನ್ನು ಹರಿಯಬಿಡುವ ಚಟ ಯಾವುದೇ ಒಂದು ವರ್ಗ, ಪಂಗಡಕ್ಕೆ ಸೀಮಿತವಾಗಿಲ್ಲ. ದ್ವೇಷದ ಮಾತನಾಡುವುದು ಒಂದು ಅಮಲಿನಂತೆ ಪಸರಿಸುತ್ತಿದೆ. ನಾವು ಪಾಲಿಸಿದ, ಪೋಷಿಸಿದ ಸಂಸ್ಕೃತಿಗೆ ವಿರುದ್ಧವಾದ ನಡೆಯಾಗಿದೆ. ‘ಇದು ನನ್ನ ದೇಶ, ಈ ಸಮಾಜದಲ್ಲಿ ನನ್ನಂತೆಯೇ ಅನೇಕರು ಇದ್ದಾರೆ, ಎಲ್ಲರ ಶಾಂತಿಯನ್ನು ಕಾಪಾಡುವುದು ನನ್ನ ಆದ್ಯ ಕರ್ತವ್ಯವಾಗಿದೆ’ ಎಂಬ ಭಾವನೆ ಎಲ್ಲರಲ್ಲೂ ಮೂಡಬೇಕು. ಆಗಮಾತ್ರ ನಮ್ಮ ನಾಡು ಸರ್ವ ಜನಾಂಗದ ಶಾಂತಿಯ ತೋಟವಾಗಲು ಸಾಧ್ಯ. ಎಲ್ಲ ಧರ್ಮಕ್ಕಿಂತ ಮನುಷ್ಯಧರ್ಮ ಶ್ರೇಷ್ಠ ಎಂಬ ಅರಿವಿಲ್ಲದೆ ದ್ವೇಷಭಾಷೆಯ ಮೂಲಕ ಸಾಮರಸ್ಯ ಕೆಡಿಸುವವರಿಗೆ ನಮ್ಮ ದೇಶದ ಮೇಲೆ ಗೌರವವಿಲ್ಲ ಎಂದೇ ಅರ್ಥೈಸಿಕೊಳ್ಳಬೇಕು. ನಮ್ಮ ದೇಶ ಅಶಾಂತಿಯ ತಾಣವಾದರೆ ವಿದೇಶಗಳಲ್ಲಿ ನಮ್ಮ ದೇಶದ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡುತ್ತದೆ ಎಂಬ ಅರಿವು ಇಂತಹ ಜನರಿಗೆ ಇದ್ದಂತೆ ಇಲ್ಲ.

ಡಾ. ಕೆ.ಎಸ್.ಗಂಗಾಧರ, ಶಿವಮೊಗ್ಗ

ಎಳೆಯರಿಗೂ ರಾಜ್ಯ ಪ್ರಶಸ್ತಿ

‘ರಾಜ್ಯೋತ್ಸವ ಪ್ರಶಸ್ತಿಗೆ 60 ವರ್ಷದ ವಯೋಮಿತಿಯನ್ನು ನಿಗದಿಪಡಿಸಿರುವುದು ಸರಿಯಾದ ಕ್ರಮವಲ್ಲ’ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ‘ವಯಸ್ಸಿನ ಮಿತಿ ಹೇರಿ ಸರ್ಕಾರ ತಪ್ಪು ಮಾಡಿತ್ತು’ ಎಂತಲೂ ಹೇಳಿದ್ದಾರೆ. ಇದು, ಹಿಂದಿನ ಸರ್ಕಾರದ ತಪ್ಪಲ್ಲ. ವಾಸ್ತವ ಏನೆಂದರೆ, ರಾಜ್ಯೋತ್ಸವ ಪ್ರಶಸ್ತಿಗಳಿಗೆ ಸೂಕ್ತ ಮಾನದಂಡವನ್ನು ರೂಪಿಸಲೆಂದು 2016ರಲ್ಲಿ ಅಂದಿನ ಸರ್ಕಾರವೇ ನ್ಯಾಯಮೂರ್ತಿ ನಾಗಮೋಹನ ದಾಸ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತ್ತು. ನಾನೂ ಅದರ ಸದಸ್ಯನಾಗಿದ್ದೆ. ಅನೇಕ ಸರಣಿ ಸಭೆಗಳ ನಂತರ ನೀಡಲಾದ ಅಂತಿಮ ಶಿಫಾರಸಿನಲ್ಲಿ ವಯೋಮಿತಿಯ ಬಿಗಿಯಾದ ಕಟ್ಟುಪಾಡುಗಳೇನೂ ಇರಲಿಲ್ಲ. ಎಳೆವ-ಯಸ್ಸಿನಲ್ಲೇ ವಿಶೇಷ ಪ್ರತಿಭೆ ಮತ್ತು ಅಪರಿಮಿತ ಸಾಧನೆಯನ್ನು ಪ್ರದರ್ಶಿಸಿದ ಅಪರೂಪದ ವ್ಯಕ್ತಿಗಳನ್ನು ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಬಹುದೆಂದು ನಿರ್ಣಯಿಸಲಾಗಿತ್ತು. ಈ ವಿಷಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಮುಖ್ಯಮಂತ್ರಿಯವರಿಗೆ ಅಥವಾ ಪ್ರಶಸ್ತಿಗಳ ಆಯ್ಕೆ ಸಮಿತಿಗೆ ಸರಿಯಾದ ತಿಳಿವಳಿಕೆ ನೀಡಿಲ್ಲವೆಂದು ಕಾಣುತ್ತದೆ.

ನಾಗೇಶ ಹೆಗಡೆ, ಕೆಂಗೇರಿ

ಸ್ಮಾರಕಗಳ ರಕ್ಷಣೆಗೆ ಬೇಕು ಕ್ರಮ

ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ ಪ್ರತಿಮೆಯನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸ್ಥಾಪಿಸು-ತ್ತಿರುವುದು ಸಂತೋಷದ ಸಂಗತಿ. ಆದರೆ, ಬೆಂಗಳೂರು ನಗರದಲ್ಲಿ ಕೆಂಪೇಗೌಡರ ಕಾಲದ ಅನೇಕ ಸ್ಮಾರಕಗಳಿವೆ. ಆ ಸ್ಮಾರಕಗಳ ಸುತ್ತಮುತ್ತಲಿನ ಅನೇಕ ಆಸ್ತಿಗಳು ಯಾರದೋ ಪಾಲಾಗಿವೆ. ಕೆಲವರು ಸಂಬಂಧಪಟ್ಟ ಇಲಾಖೆಯ ಸಹಕಾರದಿಂದ ಮಂಜೂರು ಸಹ ಮಾಡಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಪರಿಣಾಮವಾಗಿ ಸ್ಮಾರಕಗಳ ಇರುವಿಕೆಯೇ ಗೊತ್ತಾಗದಂತೆ ಆಗಿದೆ.

ಈ ಸಂಬಂಧ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಇಂತಹ ಕಟ್ಟಡಗಳನ್ನು ತೆರವುಗೊಳಿಸುವ ಮೂಲಕ ಸ್ಮಾರಕಗಳನ್ನು ಉಳಿಸಬೇಕು.

ಸಿ. ಕಾಳಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೇಳೆ–ಕಾಳಿನಿಂದ ಕೃತಕ ಮಾಂಸ

• ಎಸ್.ರವಿಪ್ರಕಾಶ್

ಬೆಂಗಳೂರು: ಕಡ್ಲೆಕಾಳು, ಹುರುಳಿ, ಹೆಸರು ಬೇಳೆಯಿಂದ ಕೃತಕವಾಗಿ ಕೋಳಿ ಮಾಂಸದ ಸ್ವಾದದ 'ತುಣುಕು'ಗಳನ್ನು (chicken nuggets) ತಯಾರಿಸಬಹುದೇ? ಹೌದು, ಮುಂಬರುವ ಕೆಲವೇ ವರ್ಷಗಳಲ್ಲಿ ಕೃತಕ ಮಾಂಸದ ತುಣುಕುಗಳು ಮಾರುಕಟ್ಟೆಗೆ ಬರಲಿವೆ!

ಜಾಗತಿಕ ತಾಪಮಾನ ಮತ್ತು ಅದರಿಂದ ವಿಶ್ವದಲ್ಲಿ ಆಗುತ್ತಿರುವ ಅನಾಹುತಗಳಿಗೆ ತೆರೆ ಎಳೆಯಲು ಕೃತಕ ಮಾಂಸ ಸೇವಿಸಬೇಕಾಗಿ ಬರಬಹುದು. ಆದರೆ, ಮಾಂಸದ ಸ್ವಾದ ಮತ್ತು ರುಚಿಗೆ ಮೋಸವಿಲ್ಲ ಎನ್ನುತ್ತಾರೆ ವಿಜ್ಞಾನಿಗಳು.



ಕೃತಕ ಕೋಳಿ ಮಾಂಸದ ತುಣುಕು (ಸಾಂದರ್ಭಿಕ ಚಿತ್ರ)

ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಗೆ ಪಶು ಸಂಗೋಪನೆಯೂ ಒಂದು ಕಾರಣ ಎಂಬ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ; ಪ್ರಾಣಿಜನ್ಯ ಪ್ರೊಟೀನ್‌ಗೆ ಪರ್ಯಾಯವಾಗಿ ಸಸ್ಯಜನ್ಯ ಪ್ರೊಟೀನ್ ಅಭಿವೃದ್ಧಿಗಾಗಿ ಹಲವು ದೇಶಗಳ ಪ್ರಯೋಗಾಲಯಗಳಲ್ಲಿ ವಿಜ್ಞಾನಿಗಳು ಹಗಲಿರುಳು ಶ್ರಮಿಸುತ್ತಿದ್ದಾರೆ.

ಭಾರತದಲ್ಲೂ ಹಲವು ಐಐಟಿಗಳು, ವಿಜ್ಞಾನದ ಪ್ರಯೋಗಾಲಯಗಳಲ್ಲಿ ಕೃತಕವಾಗಿ ಮಾಂಸದ ಸ್ವಾದ ಮತ್ತು ಪ್ರೊಟೀನ್ ಸೃಷ್ಟಿಸುವ ಕಾರ್ಯ ನಡೆದಿದೆ. ಮೈಸೂರಿನ ಸಿಎಫ್‌ಟಿಆರ್‌ಐನಲ್ಲೂ ಇಂತಹದ್ದೊಂದು ಪ್ರಯತ್ನ ನಡೆಸಿರುವ ಬಗ್ಗೆ ಸಂಸ್ಥೆಯ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು. ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಕೃಷಿ ಮತ್ತು ಆಹಾರ ವಿಷಯಕ್ಕೆ ಸಂಬಂಧಿಸಿದ ಗೋಷ್ಠಿಯಲ್ಲಿ ಅವರು ಭಾಗವಹಿಸಿದ್ದರು.

'ಹವಾಮಾನ ಬದಲಾವಣೆಯನ್ನು ನಿಯಂತ್ರಣಕ್ಕೆ ತರಲು ಪ್ರಾಣಿಜನ್ಯ ಪ್ರೊಟೀನ್‌ಗೆ ಪರ್ಯಾಯವಾಗಿ ಸಸ್ಯಜನ್ಯ ಪ್ರೊಟೀನ್ ಬಳಕೆಗೆ ತರುವುದು ಅತ್ಯಗತ್ಯ. ನಮ್ಮ ಸಂಸ್ಥೆಯಲ್ಲಿ ಬೇಳೆ–ಕಾಳುಗಳಿಂದ ಪ್ರೊಟೀನ್ ಅಭಿವೃದ್ಧಿಪಡಿಸುವ ಕಾರ್ಯ ನಡೆದಿದೆ. ಸಸ್ಯಜನ್ಯ ಪ್ರೊಟೀನ್ ತಯಾರಿಕೆಯ ಕ್ಷೇತ್ರದಲ್ಲಿ ಜಾಗತಿಕ ನಾಯಕನಾಗುವ ಅವಕಾಶ ಭಾರತಕ್ಕೆ ಇದೆ' ಎಂದು ಅವರು ಹೇಳಿದರು.

'ಒಂದು ಹಸುವಿಗೆ ಒಂದು ಕೆ.ಜಿ ಹುಲ್ಲು ಅಥವಾ ಸಸ್ಯವನ್ನು ನೀಡಿದರೆ, ಅದರಿಂದ ಉತ್ಪಾದನೆ ಆಗುವ ಪ್ರೊಟೀನ್ ಕೇವಲ ನಾಲ್ಕು ಗ್ರಾಂಗಳು. ಈ ಸಸ್ಯಗಳು ಅಥವಾ ಹುಲ್ಲು ಬೆಳೆಯಲು ಬೇಕಾಗುವ ಭೂಮಿ ಮತ್ತು ನೀರು ಅತ್ಯಧಿಕ. ಅದು ಅತ್ಯಂತ ದುಬಾರಿ ವ್ಯವಹಾರ. ಪ್ರಾಣಿಗಳ ಮಾಂಸಕ್ಕಿಂತ ಸಸ್ಯಜನ್ಯ ಪ್ರೊಟೀನ್ ಅನ್ನೇ ಮಾಂಸದ ಸ್ವಾದದ ರೀತಿಯಲ್ಲಿ ರೂಪಾಂತರಿಸುವುದಕ್ಕೆ ಕಡಿಮೆ ವೆಚ್ಚವಾಗುತ್ತದೆ. ಇದರಿಂದ ಪರಿಸರಕ್ಕೂ ಹಾನಿ ಆಗುವುದಿಲ್ಲ' ಎಂದರು.

'ನಮ್ಮ ದೇಶದಲ್ಲಿ ವಿಭಿನ್ನ ರೀತಿಯ ಕಾಳುಗಳನ್ನು ಬೆಳೆಯುತ್ತೇವೆ. ಇವುಗಳನ್ನು ಬಳಸಿ ಪ್ರೊಟೀನ್ ಅಭಿವೃದ್ಧಿಪಡಿಸಬಹುದು. ಹಲವು ಬಗೆಯ ಕಾಳುಗಳು ಬಳಕೆಯೇ ಆಗದೇ ವ್ಯರ್ಥವಾಗುತ್ತಿದೆ. ಇದನ್ನು ಪ್ರೊಟೀನ್ ತಯಾರಿಕೆಗೆ ಬಳಸಬಹುದು. ಕೆಲವು ಬಗೆಯ ಪಾಚಿಗಳನ್ನೂ ಬಳಸಬಹುದು. ಸಸ್ಯಜನ್ಯ ಪ್ರೊಟೀನ್ ಅಭಿವೃದ್ಧಿಯಲ್ಲಿ ಯಶಸ್ವಿಯಾದರೆ, ಇಡೀ ವಿಶ್ವಕ್ಕೇ ಪೂರೈಸುವಷ್ಟು ಸಾಮರ್ಥ್ಯವಿದೆ. ಈ ದಿಸೆಯಲ್ಲಿ ಹಲವು ನವೋದ್ಯಮಗಳು, ಸಂಶೋಧನಾ ಸಂಸ್ಥೆಗಳು ಕಾರ್ಯನಿರತವಾಗಿವೆ' ಎನ್ನುತ್ತಾರೆ ಅನ್ನಪೂರ್ಣ ಸಿಂಗ್.

ಮುಖ್ಯವಾದ ಸಮಸ್ಯೆ ಎಂದರೆ, ಬೀಜಗಳು ಮತ್ತು ಕಾಳುಗಳಲ್ಲಿರುವ ಪ್ರೊಟೀನ್ ದೇಹದೊಳಗೆ ಬೇಗನೇ ಕರಗುವುದಿಲ್ಲ. ಏಕೆಂದರೆ, ಇದರಲ್ಲಿ ಅಧಿಕ ಪ್ರಮಾಣದ ಆಣ್ವಿಕವಿರುತ್ತದೆ. ಪ್ರಾಣಿ ಜನ್ಯ ಪ್ರೊಟೀನ್ ಬೇಗನೇ ಕರಗುತ್ತದೆ. ಪ್ರಾಣಿಗಳು ಸಸ್ಯಗಳನ್ನು ಸೇವಿಸಿದ ಬಳಿಕ ಅತಿ ಸುಲಭವಾಗಿ ಪ್ರೊಟೀನ್ ಆಗಿ ಮಾರ್ಪಾಡಾಗುವ ವ್ಯವಸ್ಥೆಯನ್ನು ಒಳಗೊಂಡಿವೆ. ಪ್ರಾಣಿಜನ್ಯ ಪ್ರೊಟೀನ್‌ನಂತೆ ಸಸ್ಯಜನ್ಯ ಪ್ರೊಟೀನ್ ಕೂಡ ಮಾನವ ದೇಹದಲ್ಲಿ ಸುಲಭವಾಗಿ ಜೀರ್ಣವಾಗುವಂತೆ ಮಾಡುವುದು ಒಂದು ಪ್ರಮುಖ ಸವಾಲು ಎಂದು ಹೇಳಿದರು.

'ನಮ್ಮ ಸಂಸ್ಥೆಯಲ್ಲಿ ಕಡಳೆಕಾಳು, ಹುರುಳಿ, ಹೆಸರು ಬೇಳೆಯನ್ನು ಬಳಸಿ ಸಸ್ಯಜನ್ಯ ಪ್ರೊಟೀನ್ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಲ್ಲಿ ಸಾಕಷ್ಟು ಯಶಸ್ವಿಯೂ ಸಿಕ್ಕಿದೆ. ಕೋಳಿ ಮಾಂಸದ ತುಣುಕುಗಳಂತೆ ಮಾರ್ಪಡಿಸುವ ಕಾರ್ಯವೂ ನಡೆದಿದೆ. ಅದರ ಸ್ವಾದವನ್ನು ಸೇರಿಸುವ ಕೆಲಸ ಆಗಬೇಕಿದೆ' ಎಂದರು.



ಬೆಂಗಳೂರು ಅರಮನೆ ಮೈದಾನದಲ್ಲಿ ಬುಧವಾರ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಕಾರ್ಯಕ್ರಮಕ್ಕೆ ಸಾರ್ವಜನಿಕರು ಬಂದರು ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ತಣ್ಣೀರಿನಲ್ಲಿ ಹಿಟ್ಟು ಕಲೆಸಿ ಬಿಸಿ ರಾಗಿ ಮುದ್ದೆ!

ರಾಗಿ ಮುದ್ದೆಯನ್ನು ಸುಲಭವಾಗಿ ಮತ್ತು ತ್ವರಿತವಾಗಿ ತಯಾರಿಸಲು ಅನುಕೂಲವಾಗುವ ವಿಶೇಷ ರೀತಿಯಲ್ಲಿ ರಾಗಿ ಹಿಟ್ಟನ್ನು ಅಭಿವೃದ್ಧಿಪಡಿಸಲಾಗಿದೆ. ಈ ಹಿಟ್ಟನ್ನು ತಣ್ಣೀರಿನಲ್ಲಿ ಕಲೆಸಿ ಮುದ್ದೆಯ ರೂಪಕೊಟ್ಟು, ಇಡ್ಲಿಯಂತೆ 5 ರಿಂದ 10 ನಿಮಿಷ ಬೇಯಿಸಿದರೆ ಬಿಸಿ ಬಿಸಿ ಮುದ್ದೆ ತಯಾರು! ನಗರದ ಗಡಿಬಿಡಿ ಜೀವನದಲ್ಲಿ ಕೆಲವರಿಗೆ ಮುದ್ದೆ ತಿನ್ನಲು ಇಷ್ಟವಿದ್ದರೂ ಮಾಡಲು ಸಮಯವಿರುವುದಿಲ್ಲ. ಇವರಿಗಾಗಿ ಈ ಹಿಟ್ಟನ್ನು ತಯಾರಿಸಲಾಗಿದೆ. ಈ ಹಿಟ್ಟು ಮಾರುಕಟ್ಟೆಗೆ ಬಿಡುಗಡೆ ಸಿದ್ಧವಾಗಿದ್ದು, ತಯಾರಿಕೆಗೆ ಯಾವುದೇ ಕಂಪನಿ ಮುಂದೆ ಬಂದರೆ, ಲೈಸೆನ್ಸ್ ನೀಡಲಾಗುವುದು ಎಂದು ಶ್ರೀದೇವಿ ಅನ್ನಪೂರ್ಣಸಿಂಗ್ ತಿಳಿಸಿದರು.

ಹೂಡಿಕೆ ವಿವರ

ಗ್ರೀನ್ ಹೈಡ್ರೋಜನ್	
ಕಂಪನಿ	ಹೂಡಿಕೆ ಮೊತ್ತ (₹ ಕೋಟಿಗಳಲ್ಲಿ)
ಜೆಎಸ್‌ಡಬ್ಲ್ಯುಗ್ರೀನ್ ಎನರ್ಜಿ	40,148
ಪೆಟ್ರೊನಾಸ್	31,200
ರಿನ್ಯೂ ಪವರ್	50,000
ಅವಾದಾ ಎನರ್ಜಿ	45,000
ಎಸಿಎಂಇ ಸೋಲಾರ್	51,000
ಎಬಿಸಿ ಕ್ಲೀನ್‌ಟೆಕ್	50,000

ಎಲೆಕ್ಟ್ರಾನಿಕ್ಸ್ ಸಿಸ್ಟಂ ವಿನ್ಯಾಸ ಮತ್ತು ತಯಾರಿಕೆ	
ಕಂಪನಿ	ಹೂಡಿಕೆ ಮೊತ್ತ (₹ ಕೋಟಿಗಳಲ್ಲಿ)
ಐಎಸ್‌ಎಂಸಿ ಅನಲಾಗ್ ಫ್ಯಾಬ್	22,900

ಮೂಲಸೌಕರ್ಯ, ಕೈಗಾರಿಕಾ/ ಲಾಜಿಸ್ಟಿಕ್ಸ್ ಪಾರ್ಕ್ಸ್	
ಕಂಪನಿ	ಹೂಡಿಕೆ ಮೊತ್ತ (₹ ಕೋಟಿಗಳಲ್ಲಿ)
ಭಾರ್ತಿ ಏರ್‌ಟೆಲ್	15,000
ರಿಲಯನ್ಸ್ ಜಿಯೊ	11,000

ಪ್ರಮುಖ ವಲಯಗಳು (ಕೋರ್ ಸೆಕ್ಟರ್)	
ಕಂಪನಿ	ಹೂಡಿಕೆ ಮೊತ್ತ (₹ ಕೋಟಿಗಳಲ್ಲಿ)
ಆರೀಸ್ ಐರನ್ ಆ್ಯಂಡ್ ಸ್ಟೀಲ್	13,388

ನವೀಕರಿಸಬಹುದಾದ ಇಂಧನ	
ಕಂಪನಿ	ಹೂಡಿಕೆ ಮೊತ್ತ (₹ ಕೋಟಿಗಳಲ್ಲಿ)
ವೇದಾಂತ	80,000
ಅಜ್ಯೂರ್ ಪವರ್ ಇಂಡಿಯಾ	13,300
ಅಯನ ರಿನೀವೆಬಲ್ ಪವರ್	12,000

(₹ 10,000 ಕೋಟಿ ಹಾಗೂ ಅದಕ್ಕಿಂತ ಹೆಚ್ಚಿನ ಹೂಡಿಕೆಯ ಒಪ್ಪಂದ ಅಂತಿಮಗೊಳಿಸಿರುವ ಕಂಪನಿಗಳ ವಿವರ)

ಮೆಕ್ಕೆಜೋಳದ ಪರಿಸರ ಸ್ನೇಹಿ ಬ್ಯಾಗ್

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಪ್ಲಾಸ್ಟಿಕ್ ರೀತಿಯಲ್ಲೇ ಕಾಣುವ ಈ ಬ್ಯಾಗ್ ಪರಿಸರ ಸ್ನೇಹಿ. ಮೆಕ್ಕೆಜೋಳದಿಂದ ಬ್ಯಾಗ್‌ಗಳನ್ನು ತಯಾರಿಸಿ ಹಲವು ಕಂಪನಿಗಳ ಉತ್ಪನ್ನಗಳ ಪ್ಯಾಕೇಜಿಂಗ್‌ಗೆ ಪೂರೈಸಲಾಗುತ್ತಿದೆ.

ಬೆಂಗಳೂರಿನ ನವೋದ್ಯಮ 'ಇಕೊ365' ಕಂಪನಿ ಇಂತಹ ವಿನೂತನ ಪ್ರಯತ್ನ ಕೈಗೊಂಡಿದೆ. ಜಾಗತಿಕ ಹೂಡಿಕೆದಾರರ ಸಮಾವೇಶದ ಪ್ರದರ್ಶನದಲ್ಲಿ ಈ ಜೈವಿಕ ಪ್ಲಾಸ್ಟಿಕ್ ಬ್ಯಾಗ್ ಗಮನಸೆಳೆಯುತ್ತಿದೆ.

'ರಾಸಾಯನಿಕ ಮುಕ್ತ ಜೈವಿಕ ಪ್ಲಾಸ್ಟಿಕ್ ಬ್ಯಾಗ್ ಇದಾಗಿದ್ದು, ಮಣ್ಣಿನಲ್ಲಿ ಸುಲಭವಾಗಿ ಕೊಳೆಯುತ್ತದೆ. ಇದರಿಂದ, ಪರಿಸರಕ್ಕೆ ಯಾವುದೇ ರೀತಿ ಧಕ್ಕೆಯಾಗುವುದಿಲ್ಲ. ಒಂದು ಬಾರಿ ಮಣ್ಣಿನಲ್ಲಿ ಕರಗಿದಾಗ ಸಸ್ಯಗಳಿಗೆ ಪೋಷಕಾಂಶಗಳನ್ನು ಸಹ ಒದಗಿಸುತ್ತದೆ' ಎಂದು ಕಂಪನಿ ಪ್ರತಿಪಾದಿಸಿದೆ.

'ಎರಡು ವರ್ಷಗಳಿಂದ ಈ ಬ್ಯಾಗ್‌ಗಳನ್ನು ತಯಾರಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಗಿದೆ. ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವುದಿಲ್ಲ. ಆದಿತ್ಯ ಬಿರ್ಲಾ ಗ್ರೂಪ್, ಫ್ಲಿಪ್‌ಕಾರ್ಟ್, ಸ್ವಿಗ್ಗಿ, ಮಿಂತ್ರಾ, ಅಮೆಝಾನ್, ಮೈಂಡ್‌ಟ್ರೀ, ಡೆಲ್, ಎಬಿಬಿ, ಮ್ಯಾಕ್‌ಡೊನಾಲ್ಡ್ ಸೇರಿದಂತೆ ಹಲವು ಕಂಪನಿಗಳಿಗೆ ಬ್ಯಾಗ್‌ಗಳನ್ನು ಪೂರೈಸುತ್ತಿದ್ದೇವೆ' ಎಂದು ಕಂಪನಿಯ ಪ್ರತಿನಿಧಿ ಮಿತೇಶ್ ಸುರಾಣ ವಿವರಿಸುತ್ತಾರೆ.



'ಬಟ್ಟೆಗಳು, ಕಸ ಹಾಕಲು ಸೇರಿದಂತೆ ದಿನನಿತ್ಯದ ಬಳಕೆಗೆ ವಿವಿಧ ರೀತಿಯ ಬ್ಯಾಗ್‌ಗಳು ಲಭ್ಯ. ಗ್ರಾಹಕರ ಬೇಡಿಕೆಯನ್ನು ಪರಿಗಣಿಸಿ ವಿವಿಧ ರೀತಿ ಬ್ಯಾಗ್‌ಗಳನ್ನು ಸಹ ತಯಾರಿಸುತ್ತೇವೆ. ವಾರ್ಷಿಕ 1,800 ಮೆಟ್ರಿಕ್ ಟನ್ ಉತ್ಪಾದನೆ ಸಾಮರ್ಥ್ಯವನ್ನು ಕಂಪನಿ ಹೊಂದಿದೆ. ಜತೆಗೆ, 25ಸಾವಿರ ಚದರ ಅಡಿಯಷ್ಟು ಜಾಗವನ್ನು ಜೈವಿಕ ಪ್ಲಾಸ್ಟಿಕ್ ಅನ್ನು ಗೊಬ್ಬರವನ್ನಾಗಿ ಪರಿವರ್ತಿಸಲು ಮೀಸಲಿರಿಸಲಾಗಿದೆ. ನಮ್ಮ ಉತ್ಪನ್ನಗಳನ್ನು ಕೇಂದ್ರೀಯ ಪೆಟ್ರೊಕೆಮಿಕಲ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಐಪಿಇಟಿ) ಹಾಗೂ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ(ಸಿಪಿಸಿಬಿ) ಪ್ರಮಾಣೀಕರಿಸಿವೆ' ಎಂದು ಅವರು ಹೇಳುತ್ತಾರೆ.

ವಿಮಾನ ತಯಾರಿಸಲು ಹೂಡಿಕೆದಾರರ ನಿರೀಕ್ಷೆ: ವೈಮಾಂತರಿಕ್ಷ ತಜ್ಞರು ಬೆಂಗಳೂರಿನಲ್ಲಿ 1997ರಲ್ಲಿ ಆರಂಭಿಸಿದ 'ಜೆನ್‌ಸೆರ್' ಕಂಪನಿ ವೈಮಾನಿಕ ಕ್ಷೇತ್ರದಲ್ಲಿ ವಿವಿಧ ಸೇವೆಗಳನ್ನು ಒದಗಿಸುತ್ತಿದೆ.

ಈಗ ಏಳು ಸೀಟುಗಳ ವಿಮಾನದ ವಿಶಿಷ್ಟ ವಿನ್ಯಾಸವನ್ನು ಈ ಕಂಪನಿಯ ಅಂಗಸಂಸ್ಥೆ 'ಅಂಗಾಸ್' ರೂಪಿಸಿದೆ. ಹೂಡಿಕೆದಾರರು ಆಸಕ್ತಿ ತೋರಿಸಿದರೆ ಸಹಭಾಗಿತ್ವದಲ್ಲಿ ವಿಮಾನಗಳನ್ನು ತಯಾರಿಸಲಾಗುವುದು ಎಂದು ಕಂಪನಿಯ ಪ್ರತಿನಿಧಿ ತಿಳಿಸಿದರು.


ಗಮನಸೆಳೆದ ಚಳ್ಳಕೆರೆ ಎಣ್ಣೆ

ದೇಶಿಯವಾಗಿ ತಯಾರಿಸಿದ 'ಚಳ್ಳಕೆರೆ ನಟ್ಸ್' ಎನ್ನುವ ಶೇಂಗಾ ಎಣ್ಣೆ ಸಹ ಪ್ರದರ್ಶನದಲ್ಲಿ ಗಮನಸೆಳೆಯಿತು. ಈ ಎಣ್ಣೆಯನ್ನು ಸ್ಥಳೀಯವಾಗಿ ಬೆಳೆಯುವ 'ಗೆಜ್ಜೆ ಕಡಲೆಕಾಯಿ' ಎನ್ನುವ ವಿಶೇಷ ನಾಟಿ ತಳಿಯ ಬೀಜಗಳಿಂದ ತಯಾರಿಸಲಾಗಿದೆ.

ಮರದ ಗಾಣದ ಮೂಲಕ ಸಾಂಪ್ರದಾಯಿಕ ಪದ್ಧತಿಯಲ್ಲಿ ಈ ಎಣ್ಣೆಯನ್ನು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಸಿದ್ದೇಶ್ವರಣದುರ್ಗದ ಶ್ರೀ ಲಕ್ಷ್ಮಿ ರಂಗನಾಥ್ ನ್ಯಾಚುರಲ್ ಪ್ರಾಡಕ್ಟ್ಸ್ ತಯಾರಿಸುತ್ತಿದೆ.

'ದೇಶದಲ್ಲಿ ಹೂಡಿಕೆ ಸ್ನೇಹಿ ವಾತಾವರಣ'

ಸುಸ್ಥಿರ ಮತ್ತು ಶಾಂತಿಯುತ ವಾತಾವರಣವನ್ನು ಹೂಡಿಕೆದಾರರು ಬಯಸುತ್ತಾರೆ. ಈಗ ಕರ್ನಾಟಕವೂ ಸೇರಿದಂತೆ ದೇಶದಲ್ಲಿ ಅಂತಹ ವಾತಾವರಣ ಇದೆ. ಇಂಧನ, ಆಹಾರ ಮತ್ತು ಭದ್ರತಾ ವಿಚಾರಗಳು ಹೂಡಿಕೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ. ಹೇರಳವಾದ ಇಂಧನ ಸಂಪನ್ಮೂಲ ಇರುವ ರಾಷ್ಟ್ರಗಳಲ್ಲಿ ಅಸ್ಥಿರತೆ ಇದೆ. ಯುದ್ಧದಿಂದ ಆಹಾರ ಧಾನ್ಯಗಳ ಸಮಸ್ಯೆ ಕೆಲವೆಡೆ ಇದೆ. ಆದರೆ, ಭಾರತದಲ್ಲಿ ಅಂತಹ ಯಾವ ಸಮಸ್ಯೆಗಳೂ ಇಲ್ಲ. ಚೀನಾ ಮತ್ತು ಯುರೋಪ್‌ನಿಂದ ಹೂಡಿಕೆದಾರರು ಕಾಲ್ತೆಗೆಯುತ್ತಿದ್ದಾರೆ. ಅಂತಹ ಹೂಡಿಕೆದಾರರನ್ನು ಆಕರ್ಷಿಸುವ ಕೆಲಸ ಆಗಬೇಕಿದೆ. ಕಾನೂನುಗಳ ಸರಳೀಕರಣ, ಸುಲಲಿತ ವಹಿವಾಟು, ಹೂಡಿಕೆ ಸ್ನೇಹಿ ಆಡಳಿತದ ಮೂಲಕ ಭಾರತವು ಹೂಡಿಕೆದಾರರ ನೆಚ್ಚಿನ ಆಯ್ಕೆಯ ತಾಣವಾಗುತ್ತಿದೆ. ಕರ್ನಾಟಕವು ದೇಶದ ಕೈಗಾರಿಕಾ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡುತ್ತಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ದೇಶದಲ್ಲೇ ಹೆಚ್ಚು ಯಶಸ್ಸು ಸಾಧಿಸಿದೆ. ಕೇಂದ್ರ ಸರ್ಕಾರದ ನೀತಿಗಳಿಗೆ ಪೂರಕವಾಗಿ ಕರ್ನಾಟಕ ಸರ್ಕಾರವೂ ನಡೆಯುತ್ತಿರುವುದರಿಂದ ಇದು ಸಾಧ್ಯವಾಗಿದೆ



ನಿರ್ಮಲಾ ಸೀತಾರಾಮನ್
ಕೇಂದ್ರ ಹಣಕಾಸು ಸಚಿವೆ

'ಇಲ್ಲಿ ಹೂಡಿಕೆ ಮಾಡುವವರು ಬುದ್ಧಿವಂತರು'

ಕರ್ನಾಟಕದಲ್ಲಿ ಕೌಶಲವುಳ್ಳ ಮಾನವ ಸಂಪನ್ಮೂಲ ಲಭ್ಯವಿದೆ. ಅತ್ಯುತ್ತಮ ತಂತ್ರಜ್ಞಾನ ಮತ್ತು ಕೈಗಾರಿಕೆಗಳ ಜತೆ ಸಮನ್ವಯವೂ ಚೆನ್ನಾಗಿದೆ. ಇಲ್ಲಿ ಹೂಡಿಕೆ ಮಾಡುವವರು ಬುದ್ಧಿವಂತರು. ಜಗತ್ತಿನ ಬೇರೆ ಬೇರೆ ದೇಶಗಳ ಉದ್ಯಮಿಗಳು ಇಲ್ಲಿ ಹೂಡಿಕೆ ಮಾಡಲು ಉತ್ಸುಕರಾಗಿರುವುದು ಹಲವು ಬಾರಿ ನನ್ನ ಅನುಭವಕ್ಕೆ ಬಂದಿದೆ. ಕರ್ನಾಟಕದಲ್ಲಿರುವ ಮೂಲಸೌಕರ್ಯ, ಉತ್ತಮವಾದ ಸಾರಿಗೆ ಸಂಪರ್ಕ, ಉದ್ಯಮಸ್ನೇಹಿ ವಾತಾವರಣ ಇದಕ್ಕೆ ಕಾರಣ. ಇಲ್ಲಿನ ಸ್ಥಳೀಯ ಕಲೆ ಮತ್ತು ಪರಂಪರೆ ಕುರಿತು ಕಡಿಮೆ ವೆಚ್ಚದಲ್ಲಿ ನಿರ್ಮಿಸಿರುವ 'ಕಾಂತಾರ' ಸಿನಿಮಾ ಹತ್ತು ಪಟ್ಟು ಹೆಚ್ಚು ಸಂಪಾದಿಸಿದೆ. ಇದು ಯಶಸ್ವಿ ಹೂಡಿಕೆಗೆ ಒಂದು ಮಾದರಿ



ಪೀಯೂಷ್ ಗೋಯಲ್
ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

'ಗಣಿಯಲ್ಲಿ ಹೂಡಿಕೆಗೆ ಅವಕಾಶ'

ದೇಶದಲ್ಲಿ ಕಲ್ಲಿದ್ದಲು ಸೇರಿದಂತೆ ಗಣಿ ಕ್ಷೇತ್ರದಲ್ಲಿ ಹೂಡಿಕೆಗೆ ಹೆಚ್ಚು ಅವಕಾಶಗಳಿವೆ. ಹೂಡಿಕೆದಾರರು ಈ ಕ್ಷೇತ್ರದತ್ತ ಆಸಕ್ತಿ ತೋರಬೇಕು. ಕಲ್ಲಿದ್ದಲು ಗಣಿಗಳ ಹರಾಜು ಪ್ರಕ್ರಿಯೆ ಆರಂಭವಾಗಿದೆ. ಅತ್ಯುತ್ತಮ ಪ್ರತಿಕ್ರಿಯೆಯೂ ವ್ಯಕ್ತವಾಗುತ್ತಿದೆ. ಗಣಿ ಕ್ಷೇತ್ರದಿಂದ ದೇಶದ ಜಿಡಿಪಿಗೆ ಶೇ 2.5ರಷ್ಟು ಕೊಡುಗೆ ಬರುವಂತಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ಇನ್ನಷ್ಟು ಗಣಿಗಳ ಹರಾಜು ನಡೆಯಲಿದೆ



ಪ್ರಲ್ಹಾದ ಜೋಶಿ
ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಆಮ್ ಅದ್ಮಿ ಪಕ್ಷ (ಎಎಪಿ) ತಡೆಯೊಡ್ಡಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 265

ನಾರದನ ನಿಂದಿಸಿದ ಮೇನಾದೇವಿ

ಮೇನಾದೇವಿ ಕೆಲಕಾಲದ ನಂತರ ಎಚ್ಚೆತ್ತಳು. ತಿರಸ್ಕಾರಭಾವದಿಂದ ತನ್ನ ಮಕ್ಕಳನ್ನು ನೋಡಿದಳು. ಮುಖ್ಯವಾಗಿ ಪಾರ್ವತಿಯನ್ನೂ ಚೆನ್ನಾಗಿ ಬೈದಳು. ದುಃಖದಿಂದ ಪ್ರಲಾಪಿಸಿದಳು. ಮಗಳು ಪಾರ್ವತೀ ವಿಕಾರರೂಪದ ಶಿವನನ್ನು ಮದುವೆಯಾಗಲು ನಾರದನೇ ಕಾರಣ ಎಂದು ದೂಷಿಸಿದಳು.

'ಎಲೈ ನಾರದ, ನೀನು ಮೋಸಗಾರ. ತಿಳಿವಳಿಕೆಯಿಲ್ಲದ ನಮ್ಮನ್ನು ಮೋಸಗೊಳಿಸಿರುವೆ. ನಿನ್ನ ಕಪಟವಾದ ಮಾತುಗಳನ್ನು ನಂಬಿ ನನ್ನ ಮಗಳು ಯಾವ ಮುನಿಗಳೂ ಮಾಡಲು ಅಸಾಧ್ಯವಾದ ಘೋರತಪಸ್ಸಾ-ಚರಿಸಿದಳು. ಆದರೆ ಆ ತಪಸ್ಸಿಗೆ ಇಂತಹ ವಿಕಾರನಾದ ಗಂಡ ಸಿಗಬೇಕೇ' ಎಂದು ಗೋಳಾಡಿದ ಮೇನಾದೇವಿಯ ಕೋಪ ಸಪ್ತರ್ಷಿಗಳ ಕಡೆ ತಿರುಗಿತು.

'ಶಿವನಿಗೆ ಪಾರ್ವತಿಯನ್ನು ಧಾರೆ ಎರೆದುಕೊಡುವಂತೆ ನನ್ನನ್ನು ಮರಳುಗೊಳಿಸಿದ ಆ ಸಪ್ತರ್ಷಿಗಳು ಎಲ್ಲಿ ಹೋದರು? ನನಗೆ ಮಾಡಿರುವ ದ್ರೋಹಕ್ಕಾಗಿ ಅವರ ಗಡ್ಡವನ್ನು ಕಿತ್ತುಬಿಸಾಡುತ್ತೇನೆ. ಮಹಾತಪಸ್ವಿನಿ ಎನಿಸಿಕೊಂಡ ಅರುಂಧತಿ ಸಹ ಮಹಾ ಮೋಸಗಾತಿ. ಅವಳು ಕೈಗೆ ಸಿಕ್ಕರೆ ಸರಿಯಾಗಿ ಶಿಕ್ಷಿಸುತ್ತೇನೆ' ಎಂದು ಅಬ್ಬರಿಸಿದಳು.

ಇಂತಹ ಮೋಸಗಾರರಿಂದ ತನ್ನ ಸರ್ವಸ್ವವೂ ಹಾಳಾಯಿತು ಎಂದು ಪ್ರಲಾಪಿಸುತ್ತಿದ್ದ ಮೇನಾದೇವಿಯನ್ನು ಸಮಾಧಾನಿಸಲು ಬಂದ ಪಾರ್ವತಿಯನ್ನು ನೋಡಿ ಮತ್ತಷ್ಟು ಸಿಡಿಮಿಡಿಗೊಂಡಳು. 'ನನಗೆ ಇಷ್ಟವಿಲ್ಲದ ಕಾರ್ಯವನ್ನು ಏಕೆ ಮಾಡಿದೆ? ಬುದ್ಧಿಹೀನಳಾಗಿ ವಿಕಾರರೂಪದ ಗಂಡನನ್ನು ಪಡೆಯಲು ವರ್ಷಗಟ್ಟಲೇ ತಪಸ್ಸು ಮಾಡಿದೆಯಲ್ಲ. ಚಿನ್ನವನ್ನು ಕೊಟ್ಟು ನೀನು ಗಾಜನ್ನು ಪಡೆದುಕೊಂಡಂಥ ಶತಮೂರ್ಖಳಾಗಿರುವೆ. ಚಂದನವನ್ನು ಬಿಟ್ಟು ಕೆಸರನ್ನು ಮೈಗೆ ಬಳಿದುಕೊಂಡಿರುವೆ. ಹಂಸವನ್ನು ಹಿಡಿಯಲು ಹೋಗಿ ಕಾಗೆಯನ್ನು ಹಿಡಿದಿರುವೆ. ಹತ್ತಿರ ಸಿಗುವಂತಹ ಪವಿತ್ರಜಲವನ್ನು ಬಿಟ್ಟು ದೂರದಲ್ಲಿನ ಕೊಚ್ಚೆಯ ನೀರನ್ನು ಕುಡಿದಿರುವೆ. ಸೂರ್ಯನನ್ನು ಬಿಟ್ಟು, ದೀಪದ ಹುಳವನ್ನು ಹಿಡಿದುಕೊಂಡಿರುವೆ. ಅಕ್ಕಿಯನ್ನು ಬಿಟ್ಟು ನೀನು ಹೊಟ್ಟನ್ನು ಭಕ್ಷಿಸುತ್ತಿರುವೆ. ತುಪ್ಪವನ್ನು ಬಿಟ್ಟು ಹರಳೆಣ್ಣೆಯನ್ನು ಕುಡಿದಿರುವೆ. ಸಿಂಹವನ್ನು ಬಿಟ್ಟು ನರಿಯನ್ನು ಸೇವಿಸಿರುವೆ. ಪವಿತ್ರವಾದ ಯಜ್ಞಭಸ್ಮವನ್ನು ಬಿಟ್ಟು, ನೀನು ಅಪವಿತ್ರವಾದ ಸ್ಮಶಾನದ ಬೂದಿಯನ್ನು ಸ್ವೀಕರಿಸಿರುವೆ. ನೀನು ಬುದ್ಧಿಯಿಲ್ಲದೇ ಶಿವನನ್ನು ಕುರಿತು ತಪಸ್ಸು ಮಾಡಿದೆ. ನಿನಗೆ ಎಂತಹ ಸುಂದರರೂಪವಿದ್ದರೇನು ಪ್ರಯೋಜನ? ನಿನಗೆ ಬಂಗಾರ ಯಾವುದು, ಕಾಗೆ ಬಂಗಾರ ಯಾವುದೆಂಬುದನ್ನು ತಿಳಿಯದಷ್ಟು ದಡ್ಡಳಾಗಿರುವೆ. ನೀನು ಮಾಡಿದ ಕಾರ್ಯ, ಅದನ್ನು ಮಾಡುವಂತೆ ಉಪದೇಶಮಾಡಿದ ದುಷ್ಟರು, ನಿನಗೆ ಈ ಕೆಟ್ಟ ಕೆಲಸದಲ್ಲಿ ನೆರವಾದ ನಿನ್ನ ಸಖಿಯರೂ ಬಹುನಿಂದ್ಯರು. ನಾರದ, ನಿನಗೂ ನಿನ್ನ ಬುದ್ಧಿಗೂ ಧಿಕ್ಕಾರವಿರಲಿ. ನಿನ್ನ ಕುಲಕ್ಕೂ ಕಾರ್ಯಕ್ಕೂ ಧಿಕ್ಕಾರ. ಕೆಟ್ಟ ಬುದ್ಧಿಯನ್ನು ಉಪದೇಶಿಸಿದ ಸಪ್ತರ್ಷಿಗಳಿಗೂ ಧಿಕ್ಕಾರ. ನನ್ನ ಮನೆಗೆ ಬೆಂಕಿಯನ್ನು ನೀವು ಹತ್ತಿಸಿರುವಿರಿ. ನೀವೆಲ್ಲರೂ ಸೇರಿ ಏನನ್ನು ಸಾಧಿಸಿರುವಿರಿ? ನಮ್ಮ ಕುಲವನ್ನೇ ಹಾಳುಮಾಡಿದಿರಿ. ಇದರಿಂದ ನನ್ನ ಮರಣವಾಗುವುದು ನಿಶ್ಚಿತ. ನಾನು ಬಂಜೆಯಾಗಿದ್ದರೂ ಚೆನ್ನಾಗಿತ್ತು. ನನ್ನ ಗರ್ಭವಾದರೂ ಆಗಲೇ ಬಿದ್ದು ಹೋಗಬೇಕಿತ್ತು. ಆಗಲೇ ನಾನು ಸತ್ತಿದ್ದರೆ ಚೆನ್ನಾಗಿತ್ತು. ಅಯ್ಯೋ! ನನ್ನ ಜೀವನವೇ ಹಾಳಾಯಿತಲ್ಲಾ!' ಎಂದು ಪ್ರಲಾಪಿಸುತ್ತಾ, ಮೇನಾದೇವಿ ಮತ್ತೆ ಮೂರ್ಛೆಗೊಂಡು ನೆಲಕ್ಕೆ ದೊಪ್ಪನೆ ಬಿದ್ದಳು.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಜೀರ್ಣಿಸಲಾಗದ ಋಣ

ಅನ್ನವುಣುವಂದು ಕೇಳ್; ಅದನು ಬೇಯಿಸಿದ ನೀರ್ |
ನಿನ್ನ ದುಡಿತದ ಬೆಮರೊ, ಪರರ ಕಣ್ಣೀರೋ? ||
ತಿನ್ನು ನೀಂ ಜಗಕೆ ತಿನಲಿತ್ತನಿತ; ಮಿಕ್ಕೂಟ |
ಜೀರ್ಣಿಸದ ಋಣಶೇಷ – ಮಂಕುತಿಮ್ಮ || 748 ||

ಪದ-ಅರ್ಥ: ಅನ್ನವುಣುವಂದು = ಅನ್ನವ + ಉಣುವಂದು, ನೀರ್ = ನೀರು, ತಿನಲಿತ್ತನಿತ = ತಿನಲು + ಇತ್ತ + ಅನಿತ (ಅಷ್ಟುಮಾತ್ರ), ಮಿಕ್ಕೂಟ = ಮಿಕ್ಕ + ಊಟ, ಜೀರ್ಣಿಸದ = ಜೀರ್ಣಿಸಿಕೊಳ್ಳಲಾಗದ.

ವಾಚ್ಯಾರ್ಥ: ಊಟ ಮಾಡುವಾಗ ಕೇಳಿಕೋ, ಆಹಾರವನ್ನು ಬೇಯಿಸಿದ ನೀರು ನಿನ್ನ ಬೆವರಿನ ಫಲವೋ ಅಥವಾ ಪರರ ಕಣ್ಣೀರಿನಿಂದ ಬಂದದ್ದೋ. ನೀನು ಜಗತ್ತಿಗೆ ಎಷ್ಟು ನೀಡುತ್ತೀಯೋ ಅಷ್ಟನ್ನು ಮಾತ್ರ ತಿನ್ನಲು ಅರ್ಹನಾಗಿರುತ್ತೀ. ಹಾಗಲ್ಲದೆ ಪಡೆದ ಆಹಾರ ಎಂದೆಂದಿಗೂ ಜೀರ್ಣವಾಗದೆ ಉಳಿಯುವ ಋಣ.

ವಿವರಣೆ: ನನ್ನ ತಂದೆ ಸರ್ಕಾರಿ ಕೆಲಸದಿಂದ ನಿವೃತ್ತರಾಗುವ ಹೊತ್ತಿಗೆ ಇಲಾಖೆಯ ಅತ್ಯುನ್ನತ ಸ್ಥಾನದಲ್ಲಿದ್ದರು. ಆದರೂ ಕಚೇರಿಗೆ ತಮ್ಮ ಹಳೆಯ ಸ್ಕೂಟರ್‌ನಲ್ಲಿಯೇ ಹೋಗುತ್ತಿದ್ದರು. ಒಂದು ಬಾರಿ ಮುಖ್ಯ ಕಾರ್ಯದರ್ಶಿಯವರು ಫೋನ್ ಮಾಡಿ, 'ಏನು? ನೀವು ನಿತ್ಯ ಸ್ಕೂಟರಿನಲ್ಲಿಯೇ ಆಫೀಸಿಗೆ ಹೋಗುತ್ತೀರಂತೆ? ಯಾಕೆ, ನಿಮಗೆ ಮೂರು ಕಾರುಗಳಿವೆಯಲ್ಲ?' ಎಂದು ಕೇಳಿದಾಗ ನನ್ನ ತಂದೆ, 'ಸರ್, ಆ ಕಾರುಗಳನ್ನು ಕರ್ತವ್ಯದ ಮೇಲೆ ಪ್ರವಾಸ ಮಾಡುವುದಕ್ಕೆ ಕೊಟ್ಟದ್ದು, ನಾನು ಮನೆಯಿಂದ ಆಫೀಸಿಗೆ ಹೋಗಿ ಬರಲು ನನಗೆ ಸರ್ಕಾರ ಸಂಬಳ ಕೊಟ್ಟಿದೆ. ಅಷ್ಟು ಸಾಕು' ಎಂದರು. ಅವರು ನಿವೃತ್ತರಾಗುವವರೆಗೂ ನಮಗೊಂದು ಮನೆಯಾಗಲೀ, ಸೈಟಾಗಲೀ ಇರಲಿಲ್ಲ. ಅದು ಬೇಕು ಎಂದು ನಮಗಾರಿಗೂ ಅನ್ನಿಸಿರಲಿಲ್ಲ. ಅವರು ನಿವೃತ್ತರಾದ ಆರೇಳು ವರ್ಷಗಳ ನಂತರ ಅವರ ಸ್ಥಾನಕ್ಕೆ ಬಂದ ಹಿರಿಯರೊಬ್ಬರು ಕಷ್ಟಪಟ್ಟು, ಹುಡುಕಿಕೊಂಡು, ದೂರದಲ್ಲಿದ್ದ ನಮ್ಮ ಪುಟ್ಟ ಮನೆಗೆ ಬಂದಿದ್ದರು. 'ಏನು ಸಾರ್, ಇಷ್ಟು ದೂರದಲ್ಲಿ, ಇಷ್ಟು ಸಣ್ಣ ಮನೆ ಕಟ್ಟಿಸಿದ್ದೀರಿ? ಜಯನಗರದಲ್ಲೋ, ರಾಜಾಜಿನಗರದಲ್ಲೋ ದೊಡ್ಡ ಮನೆ ಕಟ್ಟಿಸಬಾರದಿತ್ತೇ?' ಎಂದು ಕೇಳಿದಾಗ ನನ್ನ ತಂದೆ, 'ಕಟ್ಟಿಸಬಹುದಿತ್ತಪ್ಪ, ಆದರೆ ನನ್ನ ಬಳಿ ಅಷ್ಟು ಹಣ ಇರಲಿಲ್ಲ' ಎಂದರು. ಅದಕ್ಕೆ ಆ ಹಿರಿಯರು ಸೂಚ್ಯವಾಗಿ ನಕ್ಕು, 'ಸರ್, ನೀವು ಮನಸ್ಸು ಮಾಡಿದ್ದರೆ ಎಷ್ಟು ಹಣ ಮಾಡಬಹುದಿತ್ತು! ನೀವು ಮಾಡಿಕೊಳ್ಳಲಿಲ್ಲ ಅಷ್ಟೇ' ಎಂದು ನುಡಿದರು. ನಮ್ಮ ತಂದೆಯವರು ಏನು ಹೇಳುತ್ತಾರೆ ಎಂಬುದನ್ನು ನಾನು ಕುತೂಹಲದಿಂದ ಕೇಳುತ್ತಿದ್ದೆ. ಒಂದು ಕ್ಷಣವೂ ಯೋಚಿಸದೆ ತಂದೆ ಹೇಳಿದರು, 'ಮಾಡಬಹುದಿತ್ತಪ್ಪ, ಬೇಕಾದಷ್ಟು ಮಾಡಬಹುದಾಗಿತ್ತು, ಆದರೆ ನನ್ನ ಮಗ ಹುಚ್ಚನಾಗುತ್ತಿದ್ದ!' ಇದೆಂಥ ಮೌಲ್ಯಪ್ರಜ್ಞೆ! ತಾನು ಮಾಡಿದ ಅನ್ಯಾಯದ ಗಳಿಕೆಗೆ ತಾನು ಮಾತ್ರವಲ್ಲ, ತನ್ನ ಪರಿವಾರ ಕೂಡ ಶಿಕ್ಷೆಪಡಬೇಕಾಗುತ್ತದೆ ಎಂಬ ನಂಬಿಕೆ ಅದು!

ಕಗ್ಗ ಹೇಳುವುದು ಅದನ್ನೇ. ಊಟ ಮಾಡುವಾಗ ಒಂದು ಕ್ಷಣ ಯೋಚಿಸಬೇಕು. ನನ್ನ ಅನ್ನ ದೊರೆತಿರುವುದು ನನ್ನ ಪ್ರಾಮಾಣಿಕವಾದ ದುಡಿತದ ಫಲವೇ ಅಥವಾ ಪರರಿಗೆ ಅನ್ಯಾಯ ಮಾಡಿ, ಲಂಚದಿಂದ, ಮೋಸದಿಂದ, ಗಳಿಸಿದ ಹಣದಿಂದ ಬಂದದ್ದೇ? ಅನ್ಯಾಯದಿಂದ ಬಂದ ಹಣ ಪರರ ಕಣ್ಣೀರಿನ, ಶಾಪದ ಫಲ. ನಾನು ಜಗತ್ತಿಗೆ ಪ್ರಾಮಾಣಿಕತೆಯಿಂದ ಏನನ್ನು ಕೊಡುತ್ತೇನೋ ಅಷ್ಟನ್ನು ಮಾತ್ರ ಪಡೆಯುವ ಅರ್ಹತೆ ನನಗಿದೆ. ಅದಲ್ಲದೆ ಕುಟಿಲೋಪಾಯಗಳಿಂದ ಬಂದ ಹಣ ವಿಷವಿದ್ದಂತೆ. ಅದು ಜೀರ್ಣಿಸಲಾಗದ ಋಣಶೇಷ. ಲಂಚ ಕೊಡುವವರು ಯಾರಾದರೂ ಶುಭ ಹಾರೈಸಿ ಕೊಡುತ್ತಾರೆಯೆ? ಹಾಳಾಗಿ ಹೋಗು ಎಂದು ಶಾಪ ಹಾಕಿ ಕೊಡುತ್ತಾರೆ. ಪ್ರಾಮಾಣಿಕವಾಗಿ ದುಡಿದ ಹಣವನ್ನೇ ಅರಗಿಸಿಕೊಳ್ಳಲು ಕಷ್ಟವಾಗಿರುವಾಗ ಶಾಪದ ಹಣ ಒಳ್ಳೆಯದನ್ನು ಮಾಡೀತೇ? ತಿಂದ ಪಾಪದ ಹಣ ಅದರ ಅನೇಕ ಪಟ್ಟನ್ನು ಕಕ್ಕಿಸಿಬಿಡುತ್ತದೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ನವೆಂಬರ್ 3, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ದಶಮಿ ಗಂ. 19-31, ನಕ್ಷತ್ರ: ಶತಭಿಷ ಗಂ. 24-49 ಯೋಗ: ವೃದ್ಧಿ ಗಂ. 07-49, ಧ್ರುವ ಗಂ. 29-24 ಕರಣ: ತೈತಿಲ ಗಂ. 08-18, ತುಲಾ ಮಾಸದ 16 ನೇ ದಿನ.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-29 ಸೂರ್ಯಾಸ್ತ : 05-59
ಮುಸ್ಲಿಂ ದಿನಾಂಕ : 07 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 3, 5

ಮೇಷ: ವ್ಯಾಪಾರ ವ್ಯವಹಾರದಲ್ಲಿ ಮಧ್ಯವರ್ತಿಗಳ ಉಪಟಳಕ್ಕೆ ಗುರಿಯಾಗುವ ಸಾಧ್ಯತೆ. ಅಭಿವೃದ್ಧಿ ಅವಕಾಶಗಳು ಸಿಕ್ಕಿದರೂ, ಬಳಸಿಕೊಳ್ಳಲು ಆಗದಂಥ ಪರಿಸ್ಥಿತಿಗೆ ತಲುಪುವಿರಿ. ಆರ್ಥಿಕ ತಾಪತ್ರಯಗಳ ತೊಂದರೆ.

ವೃಷಭ: ನೆರೆಹೊರೆಯವರ ಸಮಸ್ಯೆ ಬಗೆಹರಿಸುವ ಬಗ್ಗೆ ನಿಮ್ಮ ಪ್ರಯತ್ನವಿರಲಿ. ಪೂಜೆಯಿಂದ ಮನಸ್ಸು ಉಲ್ಲಾಸಗೊಳ್ಳಲಿದೆ. ಅಧಿಕಾರಿಗಳಿಗೆ ನಿಮ್ಮ ಮೇಲಿದ್ದ ಅಸಮಾಧಾನ ದೂರಾಗುವುದು. ವಿವಾಹ ವಿಷಯಗಳು ಚಾಲನೆಗೊಳ್ಳಲಿವೆ.

ಮಿಥುನ: ಈ ದಿನದ ನಿಮ್ಮ ಪ್ರಯತ್ನ ವ್ಯರ್ಥವಾಗಬಹುದು. ಬೆಲೆಬಾಳುವ ವಸ್ತು ಕಳೆದುಹೋಗುವ ಸಾಧ್ಯತೆಯಿದೆ. ಆದ್ದರಿಂದ ಜಾಗ್ರತರಾಗಿರಿ. ಬೋಧನೆಯಲ್ಲಿ ವಿಶೇಷವಾಗಿ ಸಾಧನೆ ಅಥವಾ ಹೆಸರನ್ನು ಸಂಪಾದಿಸುವಂತಾಗಲಿದೆ.

ಕರ್ಕಾಟಕ: ಕಚೇರಿಯಲ್ಲಿ ಸಹೋದ್ಯೋಗಿಗಳ ಸಲಹೆ, ಸಹಕಾರ ಪಡೆಯುವುದು ಅಗತ್ಯವಾಗುವುದು. ರಾಜಕೀಯ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳಲು ಚಿಂತನೆ ನಡೆಸುವಿರಿ. ನಿಗದಿತ ಸಮಯದೊಳಗೆ ಕೆಲಸವನ್ನು ಪೂರ್ಣಗೊಳಿಸಿ.

ಸಿಂಹ: ಹಲವು ವರ್ಷಗಳ ಹಿಂದೆಯೇ ಸಂಕಲ್ಪಿಸಿದ ಕೆಲಸ ಒಂದು ಈ ದಿನ ನಡೆಯುವಂತಾಗಲಿದೆ. ಕೆಲಸದಲ್ಲಿ ನೀವು ಸಾಗುತ್ತಿರುವ ಮಾರ್ಗವು ಸರಿಯಾಗಿದೆ ಎಂಬ ದೃಢತೆ ನಿಮಗೆ ಬರಲಿದೆ. ಕೌಟುಂಬಿಕವಾಗಿ ನೆಮ್ಮದಿ ಪಡೆಯುವಿರಿ.

ಕನ್ಯಾ: ಪ್ರಸ್ತುತ ಕೆಲಸದಲ್ಲೇ ಮುಂದುವರೆಯುವುದರಿಂದ ಧನ ಮತ್ತು ಗೌರವ ಸಂಪಾದನೆಯ ಅವಕಾಶಗಳನ್ನು ಪಡೆಯುವಿರಿ. ಯಾವುದೇ ಬದಲಾವಣೆ ಸರಿಯಲ್ಲ. ನಿಮ್ಮ ಉದಾರ ಮನೋಭಾವ ನಿಮಗೆ ಅನುಕೂಲ ಒದಗಿಸಲಿದೆ.

ತುಲಾ: ಜನರನ್ನು ಆಕರ್ಷಿಸುವ ಕಲೆ ನಿಮ್ಮಲ್ಲಿ ಚೆನ್ನಾಗಿರುವುದರಿಂದ ನಿಮ್ಮೆಲ್ಲಾ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿ ಕಾಣುವಿರಿ. ವ್ಯಾಪಾರ ವಹಿವಾಟುಗಳಲ್ಲಿ ಮುನ್ನಡೆ. ಕ್ರೀಡಾಪಟುಗಳು ಎಲ್ಲ ಸ್ಪರ್ಧೆಗಳಲ್ಲೂ ಜಯ ಗಳಿಸುವರು.

ವೃಶ್ಚಿಕ: ನೀವು ಯಶಸ್ಸಿನ ಹಾದಿಯಲ್ಲಿದ್ದೀರಿ. ನಿಮ್ಮ ಯಶಸ್ಸಿಗೆ ಕಾರಣರಾದವರನ್ನು ಕಾರ್ಯ ಮುಗಿಯುವವರೆಗೆ ಜೊತೆಯಲ್ಲಿರಿಸಿಕೊಳ್ಳಿ. ಸವಾಲೊಡ್ಡುವ ಸನ್ನಿವೇಶಗಳು ಸಹೋದರಿ ಅಥವಾ ಭಾವನಿಂದ ಎದುರಾಗಬಹುದು.

ಧನು: ನಿರುದ್ಯೋಗಿಗಳಿಗೆ ಹೊರ ರಾಜ್ಯವೊಂದರಲ್ಲಿ ಕೆಲಸ ನಿರ್ವಹಿಸುವ ಅವಕಾಶ ಎದುರಾದರೆ ಒಪ್ಪಿಕೊಳ್ಳುವುದು ಉತ್ತಮ. ದಿನನಿತ್ಯ ಬಳಕೆಯ ಅವಶ್ಯ ಉಪಕರಣಗಳ ಖರೀದಿಗಾಗಿ ಧನವ್ಯಯದ ಸಾಧ್ಯತೆ ಇದೆ.

ಮಕರ: ಸಂಸ್ಥೆಯ ವತಿಯಿಂದ ಹೆಚ್ಚಿನ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾದಲ್ಲಿ ಸದುಪಯೋಗಪಡಿಸಿಕೊಳ್ಳಿ. ಹೆಂಡತಿಯ ಮಾತು ಮುಖ್ಯವೆನಿಸುತ್ತದೆ. ಸೇವಾ ಹಿರಿತನದಿಂದ ಹೆಚ್ಚಿನ ಸ್ಥಾನಮಾನ.


ಕುಂಭ: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಕುಶಲಮತಿಯನ್ನು ಹೊಂದಿರುವ ನೀವು, ಇಂದು ಸಣ್ಣ-ಪುಟ್ಟ ತಪ್ಪುಗಳನ್ನು ಮಾಡುವ ಲಕ್ಷಣಗಳಿವೆ. ಧರ್ಮಕಾರ್ಯದಲ್ಲಿ ಆಸಕ್ತಿ ಹೆಚ್ಚಿ, ಉತ್ತಮ ಶುಭ ಫಲ ಕಾಣುವಿರಿ.

ಮೀನ: ಪಿತ್ರಾರ್ಜಿತ ಆಸ್ತಿಯ ವ್ಯವಹಾರಗಳು ಒಂದು ಹಂತ ತಲುಪಿದ್ದಕ್ಕೆ ಸಮಾಧಾನವಾಗುವುದು. ಸ್ನೇಹಿತನ ಹಣವನ್ನು ದಿನಾಂತ್ಯಕ್ಕೆ ಹಿಂದಿರುಗಿಸುವ ಪ್ರಯತ್ನ ಮಾಡಿ. ನೆಚ್ಚಿನ ಉದ್ಯೋಗಕ್ಕಾಗಿ ಪ್ರಯತ್ನ ನಡೆಸಬೇಕಾಗುತ್ತದೆ.

ಪದಬಂಧ 5127
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಲೆಸಿದ ಗೋಧಿ ಹಿಟ್ಟು (3)
3.ಪರವಾಗಿ ತೆಗೆದುಕೊಂಡಿರುವ ವೇತನ (3)
5.ಕಮರಿಯೊಳಗಿರುವ ಆನೆ (2)
6.ಗುಟುರು ಹಾಕುತ್ತಿರುವ ಗಂಡು ಕುರಿ (3)
8.ನೆನಪಲ್ಲೇ ಇರುವ ವ್ಯಾಜ್ಯ (2)
10.ಬಿಡಲು ಯೋಗ್ಯವಾದುದು (2)
11.ಭವನದಲ್ಲಿರುವ ಸಂಸಾರ (2)
13.ತಿರುವು ಮುರುವಾಗಿ ಹಾಕಿರುವ ರಂಗೋಲಿ (2)
15.ಸಾಲ ಪಡೆದು ನೋಡಿರುವ ಸಮುದ್ರ (3)
17.ಕಾಮನೆ ಹುಟ್ಟಿಸಿರುವ ಸದನ! (2)
18.ಮರಮುಟ್ಟು ತಿಂದು ಮಣ್ಣು ಮಾಡುವ ಹುಳು (3)
19.ಕರುವಿನೊಳಗಿರುವ ಬೆನ್ನೆಲುಬು (3)

ಮೇಲಿಂದ ಕೆಳಕ್ಕೆ
1.ಕತ್ತರಿಸುವ ಸಾಧನ (3)
2.ಕರದಲ್ಲಿ ಹಿಡಿದಿರುವ ಚಿಪ್ಪು (3)
3.ಸುಗಂಧಯುಕ್ತವಾದ ಜಲ (3)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ಖಡ್ಗದಿಂದ ಮಾಡುವ ಸಾಧನೆ (5)
7.ಗದ್ದದ ಮೇಲೆ ಬೆಳೆದಿರುವ ಕೂದಲು (2)
9.ವರ್ತನೆಯಲ್ಲಿ ಈ ಪರಿ ಆಗಿರುವ ಬದಲಾವಣೆ! (5)
12.ತಪ್ಪಿಗೆ ತೆರುವ ಪರಿಹಾರ (2)
14.ಕೂದಲನ್ನು ಬಾಚುವ ಸಾಧನ (3)
15.ಕಮಂಡಲ ಹಿಡಿದಿರುವುದಕ್ಕೇ ಈ ಕೋಪ! (3)
16.ಭಾಗಲಬ್ಧ ಕಲಿಯದ ಜಿಪುಣ (3)
17.ಮರುದಿನ ಅರಳಿದ ಹೂವು! (3



5126ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಲೋಭನ 3.ಕಂತುಪಿತ
5.ಗುಲಾಬಿ 7.ಸಜಾ
9.ರಣ 10.ನುಚ್ಚು
11.ಕಂಸ 12.ಮುರ
14.ಮಿತ 16.ಪಾನಕ
18.ಕರಂಡಕ 19.ಪಿತಾಮಹ

ಮೇಲಿಂದ ಕೆಳಕ್ಕೆ:
1.ಪ್ರವಾಸ 2.ನಗು
3.ಕಂಬಿ 4.ತರುಣ
6.ಲಾಭ 8.ಜಾಮೀನುದಾರ
9.ರಥಸಪ್ತಮಿ 12.ಮುದುಕ
13.ಮೌನ 15.ತರಹ
16.ಪಾಕ 17.ಕಪಿ

ಸುಡೊಕು 5513


		6		4		3		5
			5		7			
	9	2		3		7		1
2	1		9		3	6		
				1				3
3	8			5			7	
9		8						7
	6			9			3	
4		3			1	2		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5512 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	18,145
ಇಂದಿನ ಅಂತ್ಯ	18,083
▼	62
ದಿನದ ಗರಿಷ್ಠ	18,178

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹520

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹490-666
ದ್ವಿತಳಿ (ಬಿ.ವಿ)	₹471-777

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1590)
ಸೋಯಾ (ರಿಫೈನ್ಡ್)	₹1375 (1360)
ಸೂರ್ಯಕಾಂತಿ (ರಿಫೈನ್ಡ್)	₹1630 (1600)
ಪಾಮೋಲಿನ್	₹1020 (1000)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2500-3500
ಮಧ್ಯಮ	₹1500-2500
ಸಣ್ಣ	₹500-1500

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹145
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹131

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಬೆಂಗಳೂರು–ಪುಣೆ ಮಾರ್ಗದಲ್ಲಿ ನ. 23ರಿಂದ ಆಕಾಸಾ ಏರ್ ಸೇವೆ

ಮುಂಬೈ (ಪಿಟಿಐ): ಆಕಾಸಾ ಏರ್ ವಿಮಾನಯಾನ ಕಂಪನಿಯು ಇದೇ ತಿಂಗಳ 23ರಿಂದ ಬೆಂಗಳೂರು–ಪುಣೆ ಮಾರ್ಗದಲ್ಲಿ ವಿಮಾನ ಸೇವೆ ಆರಂಭಿಸುವುದಾಗಿ ಬುಧವಾರ ತಿಳಿಸಿದೆ.

ಆಗಸ್ಟ್ 7ರಂದು ಕಾರ್ಯಾಚರಣೆ ಆರಂಭಿಸಿದ ಕಂಪನಿಯ ನೆಟ್‌ವರ್ಕ್ ವ್ಯಾಪ್ತಿಗೆ ಒಂಬತ್ತನೇ ನಗರ ಸೇರ್ಪಡೆ ಆಗಿದೆ.

ಬೇಡಿಕೆ ಹೆಚ್ಚಾಗುತ್ತಿರುವುದರಿಂದ ಬೆಂಗಳೂರು ಮತ್ತು ಮುಂಬೈ ಮಾರ್ಗದಲ್ಲಿ ವಿಮಾನ ಸೇವೆಯನ್ನು ಹೆಚ್ಚಿಸಲಾಗುವುದು. ನಿತ್ಯವೂ ಈ ಮಾರ್ಗದಲ್ಲಿ ಏಳು ಬಾರಿ ವಿಮಾನ ಸಂಚರಿಸಲಿದೆ ಎಂದು ಕಂಪನಿ ತಿಳಿಸಿದೆ.

ಬೆಂಗಳೂರಿನಿಂದ ಮುಂಬೈ, ಅಹಮದಾಬಾದ್, ದೆಹಲಿ, ಚೆನ್ನೈ, ಕೊಚ್ಚಿ, ಗುವಾಹತಿ ಮತ್ತು ಪುಣೆ ನಗರಗಳ ನಡುವೆ ನಿತ್ಯವೂ 20 ವಿಮಾನಗಳು ಸೇವೆ ನೀಡಲಿವೆ.

ಪ್ರಮುಖ ಐ.ಟಿ. ಕೇಂದ್ರಗಳಾದ ಪುಣೆ ಮತ್ತು ಬೆಂಗಳೂರು ಮಧ್ಯೆ ಸಂಪರ್ಕ ಕಲ್ಪಿಸುವುದರಿಂದ ಎರಡೂ ಮಾರ್ಗಗಳಲ್ಲಿ ಕಡಿಮೆ ಬೆಲೆಗೆ ಹೆಚ್ಚುವರಿ ಸಂಪರ್ಕಗಳನ್ನು ನೀಡಲಾಗುವುದು ಎಂದು ಕಂಪನಿಯ ಸಹ ಸ್ಥಾಪಕ ಪ್ರವೀಣ್ ಅಯ್ಯರ್ ತಿಳಿಸಿದ್ದಾರೆ.

ಆರ್ಥಿಕತೆಗೆ ಅಗತ್ಯ ಬೆಂಬಲ: ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್

ಹಣದುಬ್ಬರ ನಿರ್ವಹಣೆ: ಸಮರ್ಥನೆ

ಮುಂಬೈ (ಪಿಟಿಐ): ಹಣದುಬ್ಬರವನ್ನು ನಿಯಂತ್ರಿಸಲು ಮುಂಚಿತವಾಗಿಯೇ ಕ್ರಮ ಕೈಗೊಂಡಿದ್ದಲ್ಲಿ ಅದರಿಂದ ಆರ್ಥಿಕತೆ ಮತ್ತು ನಾಗರಿಕರು ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು ಎಂದು ಹೇಳುವ ಮೂಲಕ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಬೆಲೆ ಏರಿಕೆ ಪರಿಸ್ಥಿತಿಯ ನಿರ್ವಹಣೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಹಣದುಬ್ಬರ ನಿಯಂತ್ರಣದಲ್ಲಿ ಆರ್‌ಬಿಐ ವಿಫಲವಾಗಿರುವುದನ್ನು ಒಪ್ಪಿಕೊಂಡ ಅವರು, ಹಣದುಬ್ಬರದಲ್ಲಿ ಆಗುತ್ತಿರುವ ಏರಿಕೆಗೆ ಅನುಗುಣವಾಗಿ ಬಡ್ಡಿದರ ಹೆಚ್ಚಳ ಮಾಡದೇ ಆರ್ಥಿಕತೆಗೆ ಬೆಂಬಲ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ.

ಹಣದುಬ್ಬರವನ್ನು ಗರಿಷ್ಠ ಶೇಕಡ 6ರ ಒಳಗೆ ನಿಯಂತ್ರಿಸುವಂತೆ ಕೇಂದ್ರ ಸರ್ಕಾರವು ಆರ್‌ಬಿಐಗೆ ಸೂಚಿಸಿದೆ. ಆದರೆ, ಸತತ ಮೂರು ತ್ರೈಮಾಸಿಕಗಳಲ್ಲಿ ಹಣದುಬ್ಬರವು ಶೇ 6ರ ಮಟ್ಟವನ್ನೂ ಮೀರಿದೆ.

ಬಡ್ಡಿದರವನ್ನು ಕಡಿಮೆ ಇರಿಸುವ



ಮೂಲಕ ಹಾಗೂ ಮುಂಚಿತವಾಗಿಯೇ ಬಡ್ಡಿದರ ಹೆಚ್ಚಳ ಮಾಡದೆ, ಆರ್ಥಿಕತೆಯು ಸಂಪೂರ್ಣವಾಗಿ ಕುಸಿಯುದನ್ನು ತಡೆಯಲಾಗಿದೆ ಎಂದು ಅವರು ಎಫ್‌ಐಬಿಎಸಿ ಸಮಾವೇಶದಲ್ಲಿ ಹೇಳಿದ್ದಾರೆ.

ರೂಪಾಯಿ ಕುಸಿತದ ಬಗ್ಗೆ ಮಾತನಾಡಿದ ಅವರು, 'ಪರಿಸ್ಥಿತಿಯನ್ನು ಭಾವನಾತ್ಮಕ ನೆಲೆಯಲ್ಲಿ ನೋಡಬಾರದು. ಅಮೆರಿಕದ ಡಾಲರ್ ಎದುರು ಇತರೆ ಕರೆನ್ಸಿಗಳಿಗೆ ಹೋಲಿಸಿದರೆ ಭಾರತದ ಕರೆನ್ಸಿಯು ಕಡಿಮೆ ಪ್ರಮಾಣದಲ್ಲಿ ಇಳಿಕೆ ಆಗಿದೆ. ಅಲ್ಲದೆ, ಇತರೆ ಕರೆನ್ಸಿಗಳ ಎದುರು ರೂಪಾಯಿ ಮೌಲ್ಯ ಹೆಚ್ಚಾಗಿದೆ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಏಕರೂಪದ ಐಟಿಆರ್ ಅರ್ಜಿ: ಸಾರ್ವಜನಿಕ ಪ್ರತಿಕ್ರಿಯೆ ಆಹ್ವಾನ

ನವದೆಹಲಿ (ಪಿಟಿಐ): ಎಲ್ಲ ತೆರಿಗೆದಾರರಿಗೂ ಏಕರೂಪದ ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಕೆಯ ಅರ್ಜಿಯನ್ನು ಜಾರಿಗೆ ತರಲು ಹಣಕಾಸು ಸಚಿವಾಲಯ ಮುಂದಾಗಿದೆ.

ಹೊಸ ಅರ್ಜಿ ನಮೂನೆಯ ಕುರಿತು ಡಿಸೆಂಬರ್ 15ರ ಒಳಗಾಗಿ ಸಾರ್ವಜನಿಕ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯು (ಸಿಬಿಡಿಟಿ) ಹೇಳಿದೆ.

ಟ್ರಸ್ಟ್‌ಗಳು ಮತ್ತು ಎನ್‌ಜಿಒಗಳನ್ನು ಹೊರತುಪಡಿಸಿ ಉಳಿದೆಲ್ಲಾ ತೆರಿಗೆದಾರರು ಪ್ರಸ್ತಾವಿತ ಐಟಿಆರ್ ಅರ್ಜಿಯ ಮೂಲಕ ರಿಟರ್ನ್ಸ್ ಸಲ್ಲಿಸಬಹುದಾಗಿದೆ ಎಂದು ಹೇಳಿದೆ.

ಡಿಜಿಟಲ್ ರೂಪದ ಆಸ್ತಿಗಳ ಬಗ್ಗೆ ಮಾಹಿತಿ ನೀಡಲು ಈ ಅರ್ಜಿ ನಮೂನೆಯಲ್ಲಿ ಪ್ರತ್ಯೇಕ



ವಿಭಾಗವನ್ನು ನೀಡಲು ನಿರ್ಧರಿಸಲಾಗಿದೆ. ಸದ್ಯ, ವಿವಿಧ ವಿಭಾಗಗಳ ತೆರಿಗೆದಾರರಿಗೆ 7 ಬಗೆಯ ಐಟಿಆರ್ ಅರ್ಜಿಗಳು ಬಳಕೆಯಲ್ಲಿವೆ.

ಹೆಚ್ಚಿನ ಸಂಖ್ಯೆಯ ಸಣ್ಣ ಮತ್ತು ಮಧ್ಯಮ ಗಾತ್ರದ ತೆರಿಗೆದಾರರು ಐಟಿಆರ್ ಫಾರಂ 1 (ಸಹಜ್) ಮತ್ತು ಐಟಿಆರ್ ಫಾರಂ 4 (ಸುಗಮ್) ಬಳಸುತ್ತಿದ್ದಾರೆ.

ಮಾರುತಿ: 2.5 ಕೋಟಿ ತಯಾರಿಕೆ

ನವದೆಹಲಿ (ಪಿಟಿಐ): ವಾಹನ ತಯಾರಿಕೆಯಲ್ಲಿ 2.5 ಕೋಟಿಯ ಮೈಲಿಗಲ್ಲು ದಾಟಿರುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಬುಧವಾರ ತಿಳಿಸಿದೆ.

ಕಂಪನಿಯು ಹರಿಯಾಣದ ಗುರುಗ್ರಾಮ ಮತ್ತು ಮಾನೇಸರ್‌ನಲ್ಲಿ ಒಟ್ಟು 2 ಘಟಕಗಳನ್ನು ಹೊಂದಿದ್ದು, ವಾರ್ಷಿಕ ಸಾಮರ್ಥ್ಯ 15 ಲಕ್ಷ ಇದೆ.

ಕಂಪನಿಯು ದೇಶದಲ್ಲಿ 16 ಪ್ರಯಾಣಿಕ ವಾಹನ ಮಾದರಿಗಳನ್ನು ಮಾರಾಟ ಮಾಡುತ್ತಿದ್ದು, 100ಕ್ಕೂ ಅಧಿಕ ದೇಶಗಳಿಗೆ ರಫ್ತು ಮಾಡುತ್ತಿದೆ.

ಪ್ರಯಾಣಿಕ ವಾಹನಗಳಿಗೆ ಬೇಡಿಕೆ ಹೆಚ್ಚಾಗುವ ನಿರೀಕ್ಷೆಯೊಂದಿಗೆ ಹರಿಯಾಣದ ಖಾರ್ಖೋಡಾದಲ್ಲಿ ಹೊಸ ಘಟಕ ಸ್ಥಾಪಿಸುವ ಕೆಲಸ ನಡೆಯುತ್ತಿದೆ ಎಂದು ಕಂಪನಿ ತಿಳಿಸಿದೆ.

ಕೇರಳದ 140 ಸಿಬ್ಬಂದಿ ಸ್ಥಳಾಂತರ ಕೈಬಿಟ್ಟ ಬೈಜುಸ್

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಶಿಕ್ಷಣ ನೀಡುವ ಬೈಜುಸ್ ಕಂಪನಿಯು ತನ್ನ ಕೇರಳ ಕಚೇರಿಯಲ್ಲಿನ 140 ಸಿಬ್ಬಂದಿಯನ್ನು ಸ್ಥಳಾಂತರಿಸುವ ನಿರ್ಧಾರ ಹಿಂಪಡೆದಿದೆ.

ಬೈಜುಸ್ ಸ್ಥಾಪಕ ಬೈಜು ರವೀಂದ್ರನ್ ಅವರು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಭೇಟಿ ಮಾಡಿದ ಬಳಿಕ ಈ ನಿರ್ಧಾರ ತೆಗೆದುಕೊಂಡಿದ್ದು, ರಾಜ್ಯದಲ್ಲಿ 600 ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದಾಗಿಯೂ ಅವರು ಘೋಷಿಸಿದ್ದಾರೆ.

ವೆಚ್ಚ ತಗ್ಗಿಸುವ ಭಾಗವಾಗಿ, ತಿರುವನಂತಪುರದ ಕಚೇರಿ ಮುಚ್ಚಲು ಯೋಜಿಸಿದ್ದು, ಅದಕ್ಕಾಗಿ ಟಿವಿಎಂ ಪ್ರಾಡಕ್ಟ್ ಡೆವಲಪ್‌ಮೆಂಟ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದ 140 ಸಿಬ್ಬಂದಿಗೆ ಬೆಂಗಳೂರಿಗೆ ಸ್ಥಳಾಂತರ ಆಗುವಂತೆ ಸೂಚನೆ ನೀಡಿತ್ತು. ಒಂದೊಮ್ಮೆ 12 ತಿಂಗಳಿನಲ್ಲಿ ಕೆಲಸ ಹುಡುಕಿಕೊಳ್ಳಲು ಸಾಧ್ಯವಾಗದೇ ಇದ್ದರೆ ಮತ್ತೆ ಬೈಜುಸ್‌ನಲ್ಲಿ ಕೆಲಸ ನೀಡುವ ಭರವಸೆಯನ್ನೂ ಕಂಪನಿ ಈ ಉದ್ಯೋಗಿಗಳಿಗೆ ನೀಡಿತ್ತು. ಆದರೆ, ಮುಖ್ಯಮಂತ್ರಿಯನ್ನು ಭೇಟಿಯಾದ ಬಳಿಕ ವಹಿವಾಟು ವಿಸ್ತರಿಸುವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ.

ಕೇರಳದಲ್ಲಿ ಹೂಡಿಕೆ ಮುಂದುವರಿಯಲಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿಯೇ ಇನ್ನೂ 3 ಕಚೇರಿಗಳನ್ನು ತರೆಯಲಾಗುವುದು ಎಂದು ರವೀಂದ್ರನ್ ತಿಳಿಸಿದ್ದಾರೆ.

ಇಳಿಕೆ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಬುಧವಾರ 215 ಅಂಶ ಇಳಿಕೆ ಕಂಡು 60,906 ಅಂಶಗಳಿಗೆ ತಲುಪಿತು.

ಮುಂಬೈ ಧಾರಣೆ

ಶೇಂಗಾ

2–11-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1610)
ಒಂದು ವಾರದ ಡೆಲಿವರಿ	1585 (1605)
ಸೋಯಾ ಕಚ್ಚಾ	1310 (1285)
ಪಾಮ್ ವಾರದ ಡೆಲಿವರಿ	1018 (998)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (1530)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,575 (50,450)
ಬೆಳ್ಳಿ ಕೆ.ಜಿ 58,600 (59,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ರಾಶಿ	43009-46599	ಚಾಲಿ	37840-41940
ಬಂಟ್ವಾಳ		ಸಿಪ್ಪೆಗೋಟು	17219-20369	ಕೋಕ	19599-30238
ಕೋಕ	12500-25000	**ಸಿದ್ದಾಪುರ**		ಕೆಂಪುಗೋಟು	25599-35705
ಹೊಸತು	27500-38000	ಬಿಳಿಗೋಟು	30109-33999	ರಾಶಿ	47697-50209
ಹಳತು	48000-56000	ಚಾಲಿ	37099-41439	ತಟ್ಟಿಬೆಟ್ಟೆ	39100-46020
ಕುಮಟ		ಕೋಕ	26799-32799	**ತಿಪಟೂರು ಕೊಬ್ಬರಿ**	
ಚಿಪ್ಪು	22509-33009	ಕೆಂಪುಗೋಟು	29219-33999	ಕನಿಷ್ಠ	12500
ಕೋಕ	16019-30001	ರಾಶಿ	46899-48699	ಗರಿಷ್ಠ	13500
ಫ್ಯಾಕ್ಟರಿ	10509-21129	ತಟ್ಟಿಬೆಟ್ಟೆ	38609-44399	ಮಾದರಿ	13000
ಹೊಸಚಾಲಿ	37699-41029	**ಶಿರಸಿ**		**ಕಾಫಿ ಧಾರಣೆ 50ಕೆ.ಜಿಗೆ**	
ಪುತ್ತೂರು		ಬೆಟ್ಟೆ	38699-46599	**ಮುದ್ರೆಮನೆ**	
ಹೊಸತು	32000-38000	ಬಿಳಿಗೋಟು	25199-36299	ಎಪಿ	14500
ಸಾಗರ		ಚಾಲಿ	35869-42609	ಎಸಿ	7280
ಬಿಳಿಗೋಟು	28100-29000	ರಾಶಿ	46200-46200	ಆರ್‌ಪಿ	8500
ಚಾಲಿ	31199-37399	**ಯಲ್ಲಾಪುರ**		ಆರ್‌ಸಿ	4600
ಕೋಕ	29553-32989	ಬಿಳಿಗೋಟು	27109-35629		

ಏರ್‌ಏಷ್ಯಾ ಇಂಡಿಯಾ ಸಂಪೂರ್ಣವಾಗಿ ಟಾಟಾ ತೆಕ್ಕೆಗೆ

ನವದೆಹಲಿ (ಪಿಟಿಐ): ಏರ್‌ಏಷ್ಯಾ ಇಂಡಿಯಾ ಕಂಪನಿಯಲ್ಲಿ ತಾನು ಹೊಂದಿರುವ ಪಾಲನ್ನು ಏರ್ ಇಂಡಿಯಾ ಕಂಪನಿಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿರುವುದಾಗಿ ಮಲೇಷ್ಯಾದ ಏರ್‌ಏಷ್ಯಾ ಬುಧವಾರ ತಿಳಿಸಿದೆ.

ಟಾಟಾ ಸಮೂಹ ಮತ್ತು ಏರ್‌ಏಷ್ಯಾ ಮಾಲೀಕತ್ವದ 'ಏರ್‌ಏಷ್ಯಾ ಇಂಡಿಯಾ' ವಿಮಾನಯಾನ ಕಂಪನಿಯು 2014ರ ಜೂನ್‌ನಲ್ಲಿ ಆರಂಭವಾಗಿದೆ. ಈ ಕಂಪನಿಯಲ್ಲಿ ಟಾಟಾ ಸನ್ಸ್ ಶೇ 83.67ರಷ್ಟು ಷೇರುಗಳನ್ನು ಹಾಗೂ ಏರ್‌ಏಷ್ಯಾ ಶೇ 16.33ರಷ್ಟು ಷೇರುಗಳನ್ನು ಹೊಂದಿದೆ.

ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ವಿಸ್ತಾರಾ, ಏರ್‌ಏಷ್ಯಾ ಇಂಡಿಯಾ ವಿಮಾನಯಾನ ಕಂಪನಿಗಳು ಟಾಟಾ ಸಮೂಹಕ್ಕೆ ಸೇರಿವೆ. ವಿಸ್ತಾರಾ ಕಂಪನಿಯಲ್ಲಿ ಸಿಂಗಪುರ ಏರ್‌ಲೈನ್ಸ್ ಕೂಡ ಪಾಲು ಹೊಂದಿದೆ.

'ಅಮೆರಿಕ, ದಕ್ಷಿಣ ಕೊರಿಯಾ ಇತಿಹಾಸದಲ್ಲೇ ಭಾರಿ ಬೆಲೆ ತೆರಲಿವೆ'

25 ಕ್ಷಿಪಣಿ ಉಡಾಯಿಸಿದ ಉ. ಕೊರಿಯಾ

ಸೋಲ್ (ಎಎಫ್‌ಪಿ): ಉತ್ತರ ಕೊರಿಯಾ ಬುಧವಾರ ದಕ್ಷಿಣ ಕೊರಿಯಾದತ್ತ 25 ಕ್ಷಿಪಣಿಗಳನ್ನು ಉಡಾಯಿಸಿದ್ದು, ಇದರಲ್ಲಿ ಒಂದು ಕ್ಷಿಪಣಿ ದಕ್ಷಿಣ ಕೊರಿಯಾ ಕಡಲ ಜಲಗಡಿಗೆ ಅಪ್ಪಳಿಸಿದೆ.

ಉತ್ತರ ಕೊರಿಯಾ ಮಿಲಿಟರಿಯು ಬೆಳಿಗ್ಗೆ ನಸುಕಿನಲ್ಲಿ 19 ಕ್ಷಿಪಣಿಗಳನ್ನು ಉಡಾಯಿಸಿತ್ತು. ಮಧ್ಯಾಹ್ನ ಮತ್ತೆ ಆರು ಕ್ಷಿಪಣಿಗಳನ್ನು ತನ್ನ ಪೂರ್ವ ಮತ್ತು ಪಶ್ಚಿಮ ಕರಾವಳಿಯಿಂದ ಪ್ರಯೋಗಿಸಿದೆ. ದಕ್ಷಿಣ ಕೊರಿಯಾದ ದ್ವೀಪದಲ್ಲಿ ವಾಯುದಾಳಿ ಎಚ್ಚರಿಕೆಯ ಗಂಟೆ ಇಡೀ ದಿನ ಮೊಳಗಿತು.

ಇದರಲ್ಲಿ ಕಡಿಮೆ ದೂರ ವ್ಯಾಪ್ತಿಯ ಮೂರು ಖಂಡಾಂತರ ಕ್ಷಿಪಣಿಗಳನ್ನೂ ಉತ್ತರ ಕೊರಿಯಾ ಹಾರಿಸಿದೆ. ಈ ಪೈಕಿ ಒಂದು ಕ್ಷಿಪಣಿ ಉಭಯ ರಾಷ್ಟ್ರಗಳ ನಡುವಿನ ವಾಸ್ತವಿಕ ಕಡಲ ಜಲಗಡಿ ದಾಟಿತು. ಇದರಿಂದ ಉಲ್ಲುಂಗ್ಡೊ ದ್ವೀಪದ ನಿವಾಸಿಗಳಿಗೆ ಬಂಕರ್‌ಗಳಲ್ಲಿ ಆಶ್ರಯ ಪಡೆಯಲು ದಕ್ಷಿಣ ಕೊರಿಯಾ ಎಚ್ಚರಿಸಿತು. ತನ್ನ ಗಡಿಯಲ್ಲಿ ಕ್ಷಿಪಣಿಗಳನ್ನು ಉಡಾಯಿಸುವ ಮೂಲಕ ತ್ವರಿತ ಪ್ರತ್ಯುತ್ತರ ನೀಡಿದೆ.

ಅಮೆರಿಕ ಮತ್ತು ದಕ್ಷಿಣ ಕೊರಿಯಾ ನಡೆಸುತ್ತಿರುವ ಜಂಟಿ ವೈಮಾನಿಕ ತಾಲೀಮನ್ನು ಆಕ್ರಮಣದ ಸಿದ್ಧತೆ ಎಂದು ಭಾವಿಸಿರುವ ಉತ್ತರ ಕೊರಿಯಾ, 'ಉಭಯರಾಷ್ಟ್ರಗಳು ಇತಿಹಾಸದಲ್ಲೇ ಅತ್ಯಂತ ಭಯಾನಕ ಬೆಲೆ ತೆರಲಿವೆ. ಅಣ್ವಸ್ತ್ರ ದಾಳಿ ನಡೆಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿತು. ಇದಾದ, ಕೆಲವೇ ತಾಸುಗಳಲ್ಲಿ ಕ್ಷಿಪಣಿಗಳ ಪ್ರಯೋಗ ನಡೆದಿದೆ.

ಜಂಟಿ ವೈಮಾನಿಕ ತಾಲೀಮಿಗೆ ಪ್ರತ್ಯುತ್ತರವಾಗಿ ಸಮುದ್ರ ಗಡಿಯ ಬಫರ್ ವಲಯದ ಮೇಲೆ ಉತ್ತರ ಕೊರಿಯಾ ಫಿರಂಗಿ ದಾಳಿ ನಡೆಸುತ್ತಿದ್ದು, ಅಣ್ವಸ್ತ್ರ ಪರೀಕ್ಷೆಗೆ ಮುಂದಾದರೂ ಅಚ್ಚರಿ ಇಲ್ಲ ಎಂದು ತಜ್ಞರು ಹೇಳಿದ್ದಾರೆ.

ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್ 'ಇದು ಪ್ರಾದೇಶಿಕ ಆಕ್ರಮಣದ ಬೆದರಿಕೆ' ಎಂದು ಕಿಡಿಕಾರಿದ್ದಾರೆ.

'ಉತ್ತರ ಕೊರಿಯಾ ಮೇಲೆ ಆಕ್ರಮಣದ ಉದ್ದೇಶವಿಲ್ಲ. ಆ ರಾಷ್ಟ್ರದ ಅಣ್ವಸ್ತ್ರದ ಮಹತ್ವಾಕಾಂಕ್ಷೆಗಳನ್ನು ನಿಗ್ರಹಿಸಲು ಮಿತ್ರ ರಾಷ್ಟ್ರಗಳೊಂದಿಗೆ ಅಮೆರಿಕ ಕೆಲಸ ಮಾಡಲಿದೆ' ಎಂದು ಶ್ವೇತಭವನ ಹೇಳಿದೆ.

'1953ರಲ್ಲಿ ಕೊರಿಯಾ ಯುದ್ಧದ ಕೊನೆಯಲ್ಲಿ ದ್ವೀಪಕಲ್ಪದ ವಿಭಜನೆಯ ನಂತರ ಉತ್ತರ ಕೊರಿಯಾದ ಕ್ಷಿಪಣಿಗಳು ದಕ್ಷಿಣ ಕೊರಿಯಾದ ವಾಸ್ತವಿಕ ಜಲಗಡಿಯ ಹತ್ತಿರಕ್ಕೆ ಬಂದು ಬಿದ್ದಿವೆ. ಇದು ಅಸಹನೀಯ ಬೆಳವಣಿಗೆ' ಎಂದು ದಕ್ಷಿಣ ಕೊರಿಯಾ ಸೇನೆ ಹೇಳಿದೆ.

ಎರಡೂ ರಾಷ್ಟ್ರಗಳ ನಡುವೆ ರಾಜತಾಂತ್ರಿಕತೆ ಹದಗೆಟ್ಟಿರುವ ಸಂದರ್ಭದಲ್ಲಿ ಜಂಟಿ ವೈಮಾನಿಕ ತಾಲೀಮು, ಪ್ರತೀಕಾರದ ಕ್ಷಿಪಣಿ ಉಡಾವಣೆ ಸಂಘರ್ಷ ಉಲ್ಬಣಿಸುವ ಸಾಧ್ಯತೆ ಹೆಚ್ಚಿಸಿದೆ.



ಉತ್ತರ ಕೊರಿಯಾ ಬುಧವಾರ ಕ್ಷಿಪಣಿ ಉಡಾವಣೆ ಪರೀಕ್ಷೆ ನಡೆಸಿತು – ಎಎಫ್‌ಪಿ ಚಿತ್ರ

ಬಹುಮತದತ್ತ ನೇತನ್ಯಾಹು ನೇತೃತ್ವದ ಒಕ್ಕೂಟ

ಜೆರುಸಲೇಂ(ಪಿಟಿಐ/ಎಪಿ): ಇಸ್ರೇಲ್ ಮಾಜಿ ಪ್ರಧಾನಿ ಬೆಂಜಮಿನ್ ನೇತನ್ಯಾಹು ಮತ್ತೊಮ್ಮೆ ಪ್ರಧಾನಿ ಗಾದಿಗೆ ಏರುವ ಸಾಧ್ಯತೆ ಹೆಚ್ಚಿದೆ.

ನೇತನ್ಯಾಹು ನೇತೃತ್ವದ ಲಿಕುದ್ ಹಾಗೂ ರಿಲೀಜಿಯಸ್ ಜಿವೊನಿಸ್ಟ್, ಶಾಸ್ ಮತ್ತು ಯುನೈಟೆಡ್ ತೋರಾ ಜುದಾಯಿಸಂ ಪಕ್ಷಗಳನ್ನು ಒಳಗೊಂಡ ಒಕ್ಕೂಟವು ಇಸ್ರೇಲ್‌ನಲ್ಲಿ ಹೊಸ ಸರ್ಕಾರ ರಚಿಸುವ ನಿರೀಕ್ಷೆ ಇದೆ.

ಇತ್ತೀಚೆಗೆ ನಡೆದಿದ್ದ ಚುನಾವಣೆಯಲ್ಲಿ ಚಲಾವಣೆಯಾಗಿದ್ದ ಮತಗಳ ಪೈಕಿ ಶೇ 85ರಷ್ಟು ಮತಗಳ ಎಣಿಕೆ ಬುಧವಾರ ಪೂರ್ಣಗೊಂಡಿದ್ದು, ನೇತನ್ಯಾಹು ನೇತೃತ್ವದ ಒಕ್ಕೂಟವು 65 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ.

'ಕೇಂದ್ರೀಯ ಚುನಾವಣಾ ಸಮಿತಿ ಬುಧವಾರ ಒಟ್ಟು 40,81,243 ಮತಗಳ ಎಣಿಕೆ ಕಾರ್ಯ ನಡೆಸಿದೆ. ಈ ಪೈಕಿ 24,201 ಮತಗಳು ಅಮಾನ್ಯಗೊಂಡಿವೆ' ಎಂದು ದಿ ಟೈಮ್ಸ್ ಆಫ್ ಇಸ್ರೇಲ್ ದಿನಪತ್ರಿಕೆ ವರದಿ ಮಾಡಿದೆ.

ಹವಾಮಾನ ಶೃಂಗಸಭೆಗೆ ಸುನಕ್

ಲಂಡನ್ (ಪಿಟಿಐ): ಮುಂದಿನ ವಾರ ಈಜಿಪ್ಟ್‌ನಲ್ಲಿ ನಡೆಯಲಿರುವ ಜಾಗತಿಕ ಹವಾಮಾನ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಾಗಿ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಬುಧವಾರ ಹೇಳಿದ್ದಾರೆ.

ದೇಶದೊಳಗಿನ ಆಂತರಿಕ ಸಮಸ್ಯೆಗಳು ಹಾಗೂ ಆರ್ಥಿಕ ಬಿಕ್ಕಟ್ಟು ಪರಿಹರಿಸುವುದರ ಕಡೆ ಹೆಚ್ಚಿನ ಗಮನ ಕೇಂದ್ರೀಕರಿಸುವ ಉದ್ದೇಶದಿಂದ ಶೃಂಗ ಸಭೆಯಲ್ಲಿ ಪಾಲ್ಗೊಳ್ಳದಿರಲು ಸುನಕ್ ನಿರ್ಧರಿಸಿದ್ದರು. ಈ ಸಂಬಂಧ ಅವರ ಕಾರ್ಯಾಲಯ ಪ್ರಕಟಣೆ ಹೊರಡಿಸಿತ್ತು. ಸುನಕ್ ಅವರ ತೀರ್ಮಾನಕ್ಕೆ ಭಾರಿ ಟೀಕೆ ವ್ಯಕ್ತವಾಗಿತ್ತು. ಹೀಗಾಗಿ ಅವರು ತೀರ್ಮಾನ ಬದಲಿಸಿದ್ದಾರೆ.

'ಹವಾಮಾನ ಬದಲಾವಣೆ ಕುರಿತು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ದೀರ್ಘಾವಧಿಯ ಸಮೃದ್ಧಿ ಸಿಗುವುದಿಲ್ಲ' ಎಂದು ಸುನಕ್ ಟ್ವೀಟ್ ಮಾಡಿದ್ದಾರೆ. ಸುನಕ್ ನಡೆಯನ್ನು ಬ್ರಿಟನ್‌ನ ವಿರೋಧ ಪಕ್ಷ ಲೇಬರ್ ಪಾರ್ಟಿ ಟೀಕಿಸಿದೆ. ಪ್ರಧಾನಿ ನಿರ್ಧಾರದಿಂದ ಜಾಗತಿಕ ವೇದಿಕೆಯಲ್ಲಿ ಬ್ರಿಟನ್ ಮುಜುಗರ ಅನುಭವಿಸುವಂತಾಗಿದೆ ಎಂದು ಹೇಳಿದೆ.

ಐಫೋನ್ ಫ್ಯಾಕ್ಟರಿ ಸುತ್ತಮುತ್ತ ಲಾಕ್‌ಡೌನ್

ಬೀಜಿಂಗ್ (ಎಎಫ್‌ಪಿ): ವಿಶ್ವದ ಅತಿದೊಡ್ಡ ಐಫೋನ್ ಫ್ಯಾಕ್ಟರಿಯ ಸುತ್ತಮುತ್ತಲ ಪ್ರದೇಶದ 6 ಲಕ್ಷ ಜನರ ಮೇಲೆ ಚೀನಾದ ಅಧಿಕಾರಿಗಳು ಬುಧವಾರ ಲಾಕ್‌ಡೌನ್ ವಿಧಿಸಿದ್ದಾರೆ.

ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಿರುವ ಸ್ವಯಂಸೇವಕರು, 'ಕೋವಿಡ್ ಪರೀಕ್ಷೆ ಮತ್ತು ತುರ್ತು ವೈದ್ಯಕೀಯ ಚಿಕಿತ್ಸೆ ಪಡೆಯುವವರನ್ನು ಹೊರತುಪಡಿಸಿ ಉಳಿದವರು ತಮ್ಮ ನಿವಾಸಗಳಿಂದ ಹೊರಬರಬಾರದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯುದ್ಧಕಾಲದ ಧಾನ್ಯ ಸಾಗಣೆ ಒಪ್ಪಂದಕ್ಕೆ ಮರಳಿದ ರಷ್ಯಾ

ಕೀವ್ (ಎಪಿ/ರಾಯಿಟರ್ಸ್): ಉಕ್ರೇನ್‌ನಿಂದ ಆಹಾರ ಧಾನ್ಯ ಸುಗಮ ರಫ್ತಿಗೆ ಅವಕಾಶ ಕಲ್ಪಿಸುವ ವಿಶ್ವಸಂಸ್ಥೆ ಮಧ್ಯಸ್ಥಿಕೆಯ ಯುದ್ಧಕಾಲದ ಒಪ್ಪಂದದಿಂದ ಹೊರಗುಳಿಯುವ ಬೆದರಿಕೆ ಹಾಕಿದ್ದ ರಷ್ಯಾ ಮನಸು ಬದಲಾಯಿಸಿದೆ. ಟರ್ಕಿಯೆ ಮಧ್ಯಸ್ಥಿಕೆ ವಹಿಸಿ, ರಷ್ಯಾ ಅಧ್ಯಕ್ಷ ಪುಟಿನ್ ಮನವೊಲಿಸಿದ ಪರಿಣಾಮ ಬುಧವಾರ ಈ ಮಹತ್ವದ ಬೆಳವಣಿಗೆ ನಡೆದಿದೆ.

ವಿಶ್ವಸಂಸ್ಥೆ ಮತ್ತು ಟರ್ಕಿಯೆ ಮಧ್ಯಸ್ಥಿಕೆಯಲ್ಲಿ ನಡೆದ ಯುದ್ಧಕಾಲದ ಧಾನ್ಯ ರಫ್ತು ಒಪ್ಪಂದದಲ್ಲಿ ಪುನಃ ಭಾಗಿಯಾಗಲು ರಷ್ಯಾ ಒಪ್ಪಿಗೆ ಸೂಚಿಸಿದೆ ಎಂದು ರಷ್ಯಾದ ರಕ್ಷಣಾ ಸಚಿವ ಸರ್ಗಿ ಶೋಯಿಗು ಅವರು ಟರ್ಕಿಯೆ ರಕ್ಷಣಾ ಸಚಿವ ಹುಲುಸಿ ಆಕಾರ್ ಅವರಿಗೆ ಕರೆ ಮಾಡಿ ತಿಳಿಸಿದ್ದಾರೆ. ಅಲ್ಲದೆ ಒಪ್ಪಂದದಲ್ಲಿ ಮುಂದುವರಿಯುವುದಾಗಿ ರಷ್ಯಾ ಹೇಳಿದೆ. ಈ ಒಪ್ಪಂದವು ಉಕ್ರೇನಿನ ಲಕ್ಷಾಂತರ ಟನ್ ಆಹಾರಧಾನ್ಯದ ರಫ್ತಿಗೆ ಅವಕಾಶ ಕಲ್ಪಿಸಿತ್ತು ಎಂದು ಟರ್ಕಿಯೆ ಅಧ್ಯಕ್ಷ ರಿಸೆಪ್ ತಯ್ಯಿಪ್ ಎರ್ಡೋಗನ್ ಹೇಳಿದರು.

> ಯುದ್ಧಕಾಲದ ಧಾನ್ಯ ರಫ್ತು ಒಪ್ಪಂದ ತಡೆಹಿಡಿಯುವ ರಷ್ಯಾದ ಬೆದರಿಕೆ ಮತ್ತು ಸಂಘರ್ಷ ತೀವ್ರಗೊಳಿಸುವ ತಂತ್ರ ವಿಫಲಗೊಂಡಿದೆ
> **ಮಿಖಾಯಿಲೊ ಪೊಡೊಲಿಯಾಕ್**, ಅಧ್ಯಕ್ಷರ ಸಲಹೆಗಾರ, ಉಕ್ರೇನ್

ಈ ಒಪ್ಪಂದವು ಸೊಮಾಲಿಯಾ, ಜಿಬೌಟಿ ಮತ್ತು ಸುಡಾನ್ ಸೇರಿ ಆಫ್ರಿಕಾದ ರಾಷ್ಟ್ರಗಳಿಗೆ ಆಹಾರ ಧಾನ್ಯಗಳ ಸಾಗಣೆಗೆ ಆದ್ಯತೆ ನೀಡಲಿದೆ ಎಂದು ಎರ್ಡೋಗನ್ ಹೇಳಿದರು.

ಶ್ರೀಮಂತ ರಾಷ್ಟ್ರಗಳಲ್ಲಿ ಆಹಾರ ಧಾನ್ಯ ದಾಸ್ತಾನು ಮುಗಿಯುತ್ತಿರುವಾಗಲೇ ರಷ್ಯಾ ಯುದ್ಧಕಾಲದ ಧಾನ್ಯ ರಫ್ತು ಕಾರಿಡಾರ್‌ನಿಂದ ಹೊರಗುಳಿಯುವ ಬೆದರಿಕೆ ಹಾಕಿತ್ತು. ಕಾರಣ ಉಕ್ರೇನ್ ಸೇನೆಯು ಪಾಶ್ಚಿಮಾತ್ಯ ಶಸ್ತ್ರಾಸ್ತ್ರಗಳ ನೆರವಿನಿಂದ ತನ್ನ ಕಪ್ಪು ಸಮುದ್ರದ ನೌಕೆಯ ಮೇಲೆ ದಾಳಿ ನಡೆಸಿದ್ದಕ್ಕೆ ಪ್ರತೀಕಾರವಾಗಿ ರಷ್ಯಾ ಒಪ್ಪಂದ ಬಹಿಷ್ಕರಿಸುವ ನಿರ್ಧಾರ ಪ್ರಕಟಿಸಿತ್ತು. ಇದರಿಂದ ಜಾಗತಿಕ ಆಹಾರ ಭದ್ರತೆ, ಇಂಧನ ಮತ್ತು ರಸಗೊಬ್ಬರ ಪೂರೈಕೆ ಸಮಸ್ಯೆ ಉಲ್ಬಣಿಸಲಿದೆ ಎಂದು ಭಾರತ ಕೂಡ ಕಳವಳ ವ್ಯಕ್ತಪಡಿಸಿತ್ತು.


ರಷ್ಯಾದ ಮಿಲಿಟರಿ ಉಪಗ್ರಹ ಉಡಾವಣೆ

ಮಾಸ್ಕೊ (ರಾಯಿಟರ್ಸ್): ಮಿಲಿಟರಿ ಉಪಗ್ರಹವನ್ನು ಬಾಹ್ಯಾಕಾಶಕ್ಕೆ ಸೇರಿಸಲು ಸೋಯುಜ್ ರಾಕೆಟ್ ಅನ್ನು ರಷ್ಯಾ ಬುಧವಾರ ಉಡಾವಣೆ ಮಾಡಿದೆ.


ಸೋಯುಜ್ -2.1ಬಿ ಮಧ್ಯಮ ವರ್ಗದ ಉಡಾವಣಾ ರಾಕೆಟ್ ಅನ್ನು ಪ್ಲೆಸೆಟ್ಸ್ಕ್ ಕಾಸ್ಮೊಡ್ರೋಮ್‌ನಿಂದ ಬೆಳಿಗ್ಗೆ 9:48ಕ್ಕೆ ಬಾಹ್ಯಾಕಾಶಕ್ಕೆ ಹಾರಿಸಲಾಯಿತು ಎಂದು ರಕ್ಷಣಾ ಸಚಿವಾಲಯದ ಮಾಹಿತಿ ಉಲ್ಲೇಖಿಸಿ ರಷ್ಯಾದ ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.

ತೂಗು ಸೇತುವೆ ದುರಂತ: ನಾಪತ್ತೆಯಾದವರಿಗಾಗಿ ನದಿದಂಡೆಯಲ್ಲಿ, ಆಸ್ಪತ್ರೆಯಲ್ಲಿ ಕಾದು ಕುಳಿದ ಸಂಬಂಧಿಗಳು

ಮೊರ್ಬಿ: ಮುಂದುವರಿದ ಶೋಧಕಾರ್ಯ



ನದಿಯಲ್ಲಿ ಬುಧವಾರವೂ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು —ಪಿಟಿಐ ಚಿತ್ರ



ಮೊರ್ಬಿ/ಅಹಮದಾಬಾದ್ (ಪಿಟಿಐ/ಎಎಫ್‌ಪಿ/ರಾಯಿಟರ್ಸ್): ಮೊರ್ಬಿ ತೂಗುಸೇತುವೆಯ ದುರಂತದಲ್ಲಿ ನಾಪತ್ತೆಯಾಗಿರುವವರ ಪತ್ತೆಗೆ ಬುಧವಾರವೂ ಶೋಧಕಾರ್ಯ ಮುಂದುವರಿದಿತ್ತು. ಶೋಧಕಾರ್ಯದ ಮೂಲಕ ಈವರೆಗೆ 136 ಶವಗಳನ್ನು ಹೊರತೆಗೆಯಲಾಗಿದ್ದು, 170 ಮಂದಿಯನ್ನು ರಕ್ಷಿಸಲಾಗಿದೆ. ಆದರೆ, ನಾಪತ್ತೆಯಾದವರ ನಿಖರ ಸಂಖ್ಯೆ ಇಲ್ಲದೇ ಇರುವ ಕಾರಣಕ್ಕೆ ಶೋಧಕಾರ್ಯ ಮುಂದುವರಿಸಲಾಗಿದೆ.

ದುರಂತಕ್ಕೆ ಸಂತಾಪ ಸೂಚಿಸಿ ರಾಜ್ಯ ಸರ್ಕಾರವು ಬುಧವಾರ ಶೋಕಾಚರಣೆ ಆಚರಿಸಿದೆ. ರಾಜ್ಯದಾದ್ಯಂತ ರಾಷ್ಟ್ರಧ್ವಜವನ್ನು ಅರ್ಧ ಎತ್ತರದಲ್ಲಿ ಆಚರಿಸಲಾಗಿತ್ತು. ಬುಧವಾರ ನಡೆಯಬೇಕಿದ್ದ ಸರ್ಕಾರಿ ಕಾರ್ಯಕ್ರಮಗಳನ್ನು ದಿನದಮಟ್ಟಿಗೆ ಮುಂದೂಡಲಾಗಿತ್ತು.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್), ಭೂಸೇನೆ ಮತ್ತು ವಾಯುಪಡೆಯ ತುಕಡಿಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಅವಘಡದ ಸ್ಥಳದಲ್ಲಿ ಮತ್ತು ಜಿಲ್ಲಾ ಆಸ್ಪತ್ರೆಯ ಬಳಿ ಹಲವರು ಇನ್ನೂ ತಮ್ಮ ಕುಟುಂಬದವರ ಮಾಹಿತಿಗಾಗಿ ಕಾದು ನಿಂತಿದ್ದಾರೆ. ರಕ್ಷಿಸಲಾದವರ ಮತ್ತು ಮೃತಪಟ್ಟವರ ಪಟ್ಟಿಯಲ್ಲಿ ತಮ್ಮ ಕುಟುಂಬದವರ ಹೆಸರು ಇಲ್ಲದೇ ಇರುವ ಕಾರಣ, ಶೋಧಕಾರ್ಯ ಮುಂದುವರಿಸುವಂತೆ ಅವರು ಮನವಿ ಮಾಡಿದ್ದಾರೆ.

'ನದಿಯ ಅಂಚಿನಲ್ಲಿ ಕೇವಲ ಹತ್ತು ಅಡಿಯಷ್ಟು ನೀರಿದ್ದು, ತಳದಲ್ಲಿ ಕಲ್ಲುಗಳು ವಿಪರೀತ ಪ್ರಮಾಣದಲ್ಲಿವೆ. ಅಲ್ಲಿ ನೀರಿಗೆ ಬಿದ್ದವರು, ಕಲ್ಲಿಗೆ ಅಪ್ಪಳಿಸಿ ಮೃತಪಟ್ಟಿದ್ದಾರೆ. ಹಲವರಿಗೆ ಗಂಭೀರ ಗಾಯಗಳಾಗಿವೆ. ನದಿಯ ಮಧ್ಯಭಾಗದಲ್ಲಿ 20 ಅಡಿಗಿಂತಲೂ ಹೆಚ್ಚು ನೀರು ಇದೆ. ಅಲ್ಲದೆ, ಅಲ್ಲಿ ಕೆಸರು ವಿಪರೀತ ಪ್ರಮಾಣದಲ್ಲಿದೆ. ಅಲ್ಲಿ ಹಲವಾರು ಶವಗಳು ಸಿಲುಕಿಕೊಂಡಿದ್ದವು. ಕೆಸರು ವಿಪರೀತ ಪ್ರಮಾಣದಲ್ಲಿ ಇರುವ ಕಾರಣ, ಅಲ್ಲಿ ಇನ್ನೂ ಹಲವಾರು ಶವಗಳು ಸಿಲುಕಿಕೊಂಡಿರುವ ಸಾಧ್ಯತೆ. ಆದರೆ ಶೋಧಕಾರ್ಯವೂ ಕಷ್ಟವಾಗುತ್ತಿದೆ' ಎಂದು ಎನ್‌ಡಿಆರ್‌ಎಫ್ ವಕ್ತಾರರು ಸ್ಥಳೀಯ ಮಾಧ್ಯಮಗಳಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ಕೆಸರು ಇರುವ ಸ್ಥಳಗಳಲ್ಲಿ ಶೋಧಕಾರ್ಯ ನಡೆಸಲು ಅತ್ಯಾಧುನಿಕ ರೋಬೊ ಕ್ಯಾಮೆರಾ ಬಳಸಲಾಗುತ್ತಿದೆ. ಜತೆಗೆ ಸೋನಾರ್ ಸಂವೇದಕಗಳನ್ನೂ ಬಳಸಲಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ರಕ್ಷಣೆಗೆ ಶ್ಲಾಘನೆ: ದುರಂತ ನಡೆದ ಸಂದರ್ಭದಲ್ಲಿ ರಕ್ಷಣೆಗೆ ಧಾವಿಸಿದ ಸಾರ್ವಜನಿಕರನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶಂಸಿಸಲಾಗುತ್ತಿದೆ. ದುರಂತ ನಡೆದಾಗ ಸ್ಥಳದಲ್ಲೇ ಇದ್ದ ಇಬ್ಬರು ಮುಸ್ಲಿಂ ಯುವಕರು 50ಕ್ಕೂ ಹೆಚ್ಚು ಜನರನ್ನು ರಕ್ಷಿಸಿದ್ದಾರೆ ಎನ್ನಲಾಗಿದೆ. ಎನ್‌.ಡಿ.ಟಿ.ವಿ, ಇಂಡಿಯಾ ಟುಡೇ ವಾಹಿನಿಗಳು ಆ ಯುವಕರ ಸಂದರ್ಶನ ನಡೆಸಿವೆ.

'ಗುಜರಾತ್ ಆಸ್ಪತ್ರೆ ಮಾದರಿ'

'ಪ್ರಧಾನಿ ಭೇಟಿ ನೀಡುತ್ತಾರೆ ಎಂಬ ಕಾರಣಕ್ಕೆ ಮೊರ್ಬಿ ಆಸ್ಪತ್ರೆಯನ್ನು ಒಂದೇ ರಾತ್ರಿಯಲ್ಲಿ ನವೀಕರಣ ಮಾಡಲಾಗಿದೆ. ಗುಜರಾತ್ ಸರ್ಕಾರ ಮತ್ತು ಆಡಳಿತ ಯಂತ್ರವು ಅಷ್ಟು ಶಕ್ತವಾಗಿದೆ ಎಂದಾದರೆ, ರಾಜ್ಯದ ಎಲ್ಲಾ ಆಸ್ಪತ್ರೆಗಳನ್ನು ಅದೇ ರೀತಿ ನವೀಕರಣ ಮಾಡಲಿ. ದೇಶದ ಎಲ್ಲಾ ಆಸ್ಪತ್ರೆಗಳನ್ನೂ ಇದೇ ರೀತಿ ನವೀಕರಣ ಮಾಡಲಿ' ಎಂದು ಎನ್‌ಸಿಪಿಯ ರಾಷ್ಟ್ರೀಯ ವಕ್ತಾರ ಕ್ಲಾಯ್ಡ್ ಕ್ರಾಸ್ಟೋ ಅವರು ಬಿಜೆಪಿಗೆ ಸವಾಲು ಹಾಕಿದ್ದಾರೆ.

'ಮೋದಿ ಭೇಟಿಯ ಕಾರಣಕ್ಕೇ ನವೀಕರಣ ಮಾಡಿದ್ದರೂ ಅದರಿಂದ ರೋಗಿಗಳಿಗೆ ಅನುಕೂಲವಾಗಿದೆ. ಹೊಸ ಹಾಸಿಗೆ ಮತ್ತು ಹೊದಿಕೆಗಳು ದೊರೆತಿವೆ. ಕುಡಿಯುವ ನೀರಿನ ಫಿಲ್ಟರ್‌ಗಳು ಕೆಲಸ ಮಾಡುತ್ತಿವೆ. ಒಂದೇ ರಾತ್ರಿಯಲ್ಲಿ ಇದನ್ನೆಲ್ಲಾ ಮಾಡಲು ಸಾಧ್ಯವಾಗಿದೆ. ದೇಶದೆಲ್ಲೆಡೆ ಇದನ್ನು ಮಾಡಲು ಸಾಧ್ಯವಾದರೆ, ಇದನ್ನು ಗುಜರಾತ್ ಆಸ್ಪತ್ರೆ ಮಾದರಿ ಎಂದು ಕರೆಯಬಹುದು' ಎಂದು ಅವರು ಹೇಳಿದ್ದಾರೆ.

'ಇದನ್ನು ಗುಜರಾತ್‌ನ ಎಲ್ಲಾ ಆಸ್ಪತ್ರೆಗಳಲ್ಲಿ ಮಾಡಲು ಸಾಧ್ಯವಾಗದೇ ಇದ್ದರೆ, ಬಿಜೆಪಿ ಸರ್ಕಾರವು ಆಸ್ಪತ್ರೆ ನವೀಕರಣ ಮಾಡಿದ್ದು ಮೋದಿ ಭೇಟಿ ನೀಡುತ್ತಾರೆ ಎಂಬುದಕ್ಕೆ ಮಾತ್ರ. ಮೊರ್ಬಿ ಸಂತ್ರಸ್ತರ ಬಗ್ಗೆ ಅವರಿಗೆ ಕಾಳಜಿ ಇಲ್ಲ ಎಂಬುದು ಸಾಬೀತಾಗುತ್ತದೆ' ಎಂದು ಅವರು ಹೇಳಿದ್ದಾರೆ.

'ಅನರ್ಹರಿಗೆ ಸೇತುವೆ ನವೀಕರಣ ಗುತ್ತಿಗೆ'

ಒಂದನೇ ಪುಟದಿಂದ...

ನವೀಕರಣದ ವೇಳೆ ಕೇಬಲ್‌ಗಳಿಗೆ ಬಣ್ಣ ಬಳಿದು, ಹೊಳಪು ನೀಡಲಾಗಿದೆಯಷ್ಟೆ. ಅಲ್ಲದೆ ಈ ಬಾರಿ ನಾಲ್ಕು ಎಳೆಯ ಅಲ್ಯೂಮಿನಿಯಂ ಫಲಕಗಳನ್ನು ಬಳಸಿ ಪ್ಲಾಟ್‌ಫಾರಂ ಹಾಕಲಾಗಿದ್ದು, ಅವುಗಳ ತೂಕ ಹೆಚ್ಚು. ತೂಕ ಹೆಚ್ಚಾದ್ದರಿಂದ ಮತ್ತು ಕೇಬಲ್‌ಗಳು ದುರ್ಬಲವಾಗಿದ್ದರಿಂದ ಭಾರ ತಡೆಯಲಾಗದೆ ಅವು ತುಂಡಾಗಿವೆ. ಕೇಬಲ್ ತುಂಡಾದ ಜಾಗದಲ್ಲೇ ತುಕ್ಕು ಹಿಡಿದಿತ್ತು ಎಂದು ವಿಧಿ ವಿಜ್ಞಾನ ಪರೀಕ್ಷೆಯ ವರದಿಯಲ್ಲಿ ವಿವರಿಸಲಾಗಿದೆ' ಎಂದು ವಕೀಲರು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ.

ನವೀಕರಣದ ವೇಳೆ ಕೇಬಲ್‌ಗಳನ್ನೂ ಬದಲಿಸಲು ಸೂಚಿಸಲಾಗಿತ್ತೇ ಎಂಬ ಮಾಹಿತಿ ಲಭ್ಯವಾಗಿಲ್ಲ. ಪೊಲೀಸರಾಗಲೀ, ಮೊರ್ಬಿ ನಗರ ಪಾಲಿಕೆ ಅಧಿಕಾರಿಗಳಾಗಲೀ ಈ ಬಗ್ಗೆ ಮಾಹಿತಿ ನೀಡಿಲ್ಲ.

ಪ್ಲಾಸ್ಟರ್ ಬದಲು: ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ, ಟೀಕೆ

ಮೊರ್ಬಿ (ಎಎಫ್‌ಪಿ/ರಾಯಿಟರ್ಸ್): ಮೊರ್ಬಿ ತೂಗುಸೇತುವೆ ದುರಂತದಲ್ಲಿ ಗಾಯಗೊಂಡು ಆಸ್ಪತ್ರೆ ಸೇರಿರುವ ವ್ಯಕ್ತಿಯೊಬ್ಬರ ಎರಡು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಕಾರಣವಾಗಿವೆ. ಅಕ್ಟೋಬರ್ 31ರಂದು ಒಂದು ಚಿತ್ರವನ್ನು ತೆಗೆಯಲಾಗಿದೆ ಎನ್ನಲಾಗಿದೆ. ಆ ಚಿತ್ರದಲ್ಲಿ ವ್ಯಕ್ತಿಯು ಆಸ್ಪತ್ರೆಯ ಹಾಸಿಗೆಯಲ್ಲಿ ಕೂತಿದ್ದು, ಅವರ ಬಲಗಾಲಿನ ಮಂಡಿಗೆ ಸಣ್ಣ ಬ್ಯಾಂಡೇಜ್ ಹಾಕಲಾಗಿದೆ. ಇನ್ನೊಂದು ಚಿತ್ರವನ್ನು ನವೆಂಬರ್ 1ರಂದು ತೆಗೆಯಲಾಗಿದೆ ಎಂದು ಹೇಳಲಾಗಿದೆ. ಎರಡನೇ ಚಿತ್ರದಲ್ಲಿ ವ್ಯಕ್ತಿಯು ಅದೇ ಹಾಸಿಗೆಯಲ್ಲಿ ಮಲಗಿದ್ದು, ಅವರ ಬಲಗಾಲಿಗೆ ಮಂಡಿಯಿಂದ ಪಾದದವರೆಗೆ ಪ್ಲಾಸ್ಟರ್ ಮಾಡಲಾಗಿದೆ.



ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿರುವ ಚಿತ್ರಗಳು

ಆಸ್ಪತ್ರೆ ಭೇಟಿ ವೇಳೆ ಪ್ರಧಾನಿ ಮೋದಿ ಅವರು ಈ ವ್ಯಕ್ತಿಯನ್ನು ಭೇಟಿಯಾಗಿದ್ದಾರೆ. ಮೋದಿ ಭೇಟಿ ನೀಡುತ್ತಾರೆ ಎಂಬ ಕಾರಣದಿಂದಲೇ ವ್ಯಕ್ತಿಗೆ ಹೆಚ್ಚಿನ ಬ್ಯಾಂಡೇಜ್ ಮಾಡಲಾಗಿದೆ ಎಂದು ಹಲವರು ಟೀಕಿಸಿದ್ದಾರೆ. 'ವ್ಯಕ್ತಿಯ ಮಂಡಿಗೆ ಗಾಯವಾಗಿತ್ತು. ಅದಕ್ಕೆ ಮೊದಲು ಸಣ್ಣ ಬ್ಯಾಂಡೇಜ್ ಮಾಡಲಾಗಿತ್ತು. ನಂತರ ಅವರ ಮೂಳೆ ಮುರಿದದ್ದು ಗೊತ್ತಾಯಿತು. ಹೀಗಾಗಿ ಪೂರ್ಣ ಮಟ್ಟದಲ್ಲಿ ಪ್ಲಾಸ್ಟರ್ ಮಾಡಲಾಗಿದೆ' ಎಂದು ಕೆಲವರು ಸಮಜಾಯಿಷಿ ನೀಡಿದ್ದಾರೆ.

'ಸತ್ಯವನ್ನು ಮರೆಮಾಚುವ ಯತ್ನವೇ?': ಮೊರ್ಬಿ ತೂಗುಸೇತುವೆ ನಿರ್ವಹಣೆಯ ಗುತ್ತಿಗೆ ಪಡೆದಿದ್ದ ಒರೆವಾ ಕಂಪನಿಯ ಫಲಕವನ್ನು, ಸೇತುವೆ ಗೋಪುರದ ಮೇಲೆ ಅಳವಡಿಸಲಾಗಿತ್ತು. ಪ್ರಧಾನಿ ಮೋದಿ ಭೇಟಿಯ ಸಂದರ್ಭದಲ್ಲಿ ಆ ಫಲಕಕ್ಕೆ ಬಟ್ಟೆ ಮುಚ್ಚಿ, ಅದನ್ನು ಮರೆಮಾಚಲಾಗಿತ್ತು. ಇದನ್ನು ಪತ್ರಕರ್ತ ರಾಜದೀಪ್ ಸರ್ದೇಸಾಯಿ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದರು. 'ಇದು ಸತ್ಯವನ್ನು ಮರೆಮಾಚುವ ಯತ್ನವೇ' ಎಂದು ಅವರು ಪ್ರಶ್ನಿಸಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಬಿಜೆಪಿ ಕಾರ್ಯಕರ್ತರು ಯಾವುದೇ ಫಲಕಗಳನ್ನು ಮರೆಮಾಚಿಲ್ಲ ಎಂದು ಬೇರೆ ಚಿತ್ರಗಳನ್ನು ಟ್ವೀಟ್ ಮಾಡಿದ್ದಾರೆ. ಅದಕ್ಕೆ ಪ್ರತಿಕ್ರಿಯೆ ನೀಡಿರುವ ಸರ್ದೇಸಾಯಿ ಅವರು, ಫಲಕ ತೆರೆದಿರುವ ಮತ್ತು ಅದನ್ನು ಬಟ್ಟೆಯಿಂದ ಮರೆಮಾಚುತ್ತಿರುವ ವಿಡಿಯೊಗಳನ್ನು ಟ್ವೀಟ್ ಮಾಡಿದ್ದಾರೆ.

'ಕೈ', 'ಕಮಲ'ಕ್ಕೆ ಭಿನ್ನಮತೀಯರ ಬಿಸಿ

ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆ: ಎರಡೂ ಪಕ್ಷಗಳ ಲೆಕ್ಕಾಚಾರ ಏರುಪೇರು ಸಾಧ್ಯತೆ

ಪ್ರಜಾ ಮತ
ಜನತಂತ್ರದ ಹಬ್ಬ 2022



ಹಿಮಾಚಲ ಪ್ರದೇಶದ ನಾದೌನ್‌ನಲ್ಲಿ ಬುಧವಾರ ನಡೆದ ಬಿಜೆಪಿ ಚುನಾವಣಾ ಪ್ರಚಾರದಲ್ಲಿ ಕೇಂದ್ರ ಗೃಹಸಚಿವ ಅಮಿತ್ ಶಾ ಭಾಗಿಯಾಗಿದ್ದರು —ಪಿಟಿಐ ಚಿತ್ರ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಗೆ ಕೆಲವು ದಿನ ಉಳಿದಿದ್ದು, ಆಡಳಿತಾರೂಢ ಬಿಜೆಪಿ ಹಾಗೂ ಪ್ರತಿಪಕ್ಷ ಕಾಂಗ್ರೆಸ್ ಭಿನ್ನಮತದ ಬಿಸಿ ಎದುರಿಸುತ್ತಿವೆ. ಪಕ್ಷದ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಬಂಡಾಯ ಎದ್ದಿರುವ ಮುಖಂಡರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುತ್ತಿದೆ.

ಕಾಂಗ್ರೆಸ್‌ಗೆ 10ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ, ಬಿಜೆಪಿಗೆ 20ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಭಿನ್ನಮತೀಯರು ಅಡ್ಡಿಯಾಗಿದ್ದಾರೆ. ನಾಮಪತ್ರ ವಾಪಸ್ ಪಡೆಯದೇ ಅವರು ಕಣದಲ್ಲಿ ಉಳಿದುಕೊಂಡಿರುವುದು ಎರಡೂ ರಾಷ್ಟ್ರೀಯ ಪಕ್ಷಗಳಿಗೆ ತಲೆನೋವಾಗಿದೆ. ಬಿಜೆಪಿಯ 5 ಮುಖಂಡರನ್ನು ಪಕ್ಷದಿಂದ ಕಿತ್ತುಹಾಕಲಾಗಿದೆ. ಅಧಿಕೃತ ಅಭ್ಯರ್ಥಿಗಳ ವಿರುದ್ಧ ನಾಮಪತ್ರ ಸಲ್ಲಿಸಿದ್ದ ಮಾಜಿ ಸ್ಪೀಕರ್ ಹಾಗೂ ಮಾಜಿ ಸಚಿವ ಸೇರಿದಂತೆ ಪಕ್ಷದ 6 ಮುಖಂಡರನ್ನು ಕಾಂಗ್ರೆಸ್ ಉಚ್ಚಾಟಿಸಿದೆ. ಭಿನ್ನಮತೀಯ ಅಭ್ಯರ್ಥಿಗಳು ಪಕ್ಷಗಳ ನಿರೀಕ್ಷೆಯನ್ನು ಬುಡಮೇಲು ಮಾಡುವ ಸಾಧ್ಯತೆಯಿದೆ.

ಬಂಡಾಯದ ಕಹಳೆ

ಪಚ್ಚಡ್, ಅನ್ನಿ, ಸುಲಹ್, ಚೌಪಾಲ್, ಹಮೀರ್‌ಪುರ್, ಅಕ್ರಿ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ತಮ್ಮ ಪಕ್ಷದವರೇ ಎದುರಾಳಿಯಾಗಿದ್ದಾರೆ. ಮಂಡಿ, ಬಿಲಾಸ್‌ಪುರ, ಧರ್ಮಶಾಲಾ, ಚಂಬಾ, ದೆಹ್ರಾ, ಹಮೀರ್‌ಪುರ, ಫತೇಪುರ, ಅನ್ನಿ, ಸುಂದರನಗರಗಳಲ್ಲಿ ಬಿಜೆಪಿ ಸಹ ಇದೇ ಪರಿಸ್ಥಿತಿ ಎದುರಿಸುತ್ತಿದೆ.

ಮಾಜಿ ಸ್ಪೀಕರ್ ಗಂಗೂರಾಮ್ ಮುಸಾಫಿರ್ ಅವರು ಪಚ್ಚಡ್ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ದಯಾಳ್ ಪ್ಯಾರಿ ವಿರುದ್ಧ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಇವರು 2017ರಲ್ಲಿ ಸೋತಿದ್ದರು. ಕಳೆದ ಬಾರಿ ಸೋತಿದ್ದ ಜಗಜೀವನ್‌ಪಾಲ್ ಅವರಿಗೆ ಈ ಬಾರಿ ಕಾಂಗ್ರೆಸ್ ಟಿಕೆಟ್ ನಿರಾಕರಿಸಿದ್ದಕ್ಕೆ ಅವರು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಧುಮುಕಿದ್ದಾರೆ.

ಬಿಜೆಪಿಯ 11 ಹಾಲಿ ಶಾಸಕರಿಗೆ ಈ ಬಾರಿ ಟಿಕೆಟ್ ನೀಡಿಲ್ಲ. ಕುಲ್ಲು ರಾಜಮನೆತನದ ಹಿತೇಶ್ವರ್ ಸಿಂಗ್ ಅವರು ಬಂಜಾರ್ ಕ್ಷೇತ್ರದಲ್ಲಿ ಬಂಡಾಯ ಸಾರಿದ್ದಾರೆ. ಕಳೆದ ಬಾರಿ ದೆಹ್ರಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದಿದ್ದ ಹೋಷ್ಯಾರ್ ಸಿಂಗ್ ಅವರು ಬಳಿಕ ಬಿಜೆಪಿ ಸೇರಿದ್ದರು. ಆದರೆ ಈ ಬಾರಿ ಅವರು ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ.

ಚುನಾವಣಾ ಕಣದಲ್ಲಿ...

- ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಹಿಮಾಚಲ ಪ್ರದೇಶದ ಚುನಾವಣೆಗೆ ಪಕ್ಷದ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆ ಮಾಡಲಿದ್ದಾರೆ; ಕಾಂಗ್ರೆಸ್ ಪ್ರಣಾಳಿಕೆ ಶನಿವಾರ ಬಿಡುಗಡೆಯಾಗುವ ಸಾಧ್ಯತೆಯಿದೆ
- ಪ್ರಧಾನಿ ನರೇಂದ್ರ ಮೋದಿ ಅವರು ಇದೇ 5 ಹಾಗೂ 9ರಂದು ಹಿಮಾಚಲ ಪ್ರದೇಶದ ಎರಡು ಕಡೆ ಬಹಿರಂಗ ರ‍್ಯಾಲಿ ನಡೆಸಲಿದ್ದಾರೆ
- ಮಲ್ಲಿಕಾರ್ಜುನ ಖರ್ಗೆ ಅವರು ಇದೇ 8 ಹಾಗೂ 9ರಂದು ಹಿಮಾಚಲ ಪ್ರದೇಶದಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಎಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಅವರು ನಡೆಸುತ್ತಿರುವ ಮೊದಲ ಚುನಾವಣಾ ಪ್ರಚಾರವಿದು
- ಗುಜರಾತ್ ಚುನಾವಣೆಗೆ ಸಜ್ಜಾಗಿರುವ ಕಾಂಗ್ರೆಸ್, ರಾಜ್ಯದಲ್ಲಿ 'ಪರಿವರ್ತನ ಸಂಕಲ್ಪ ಯಾತ್ರೆ' ಶುರು ಮಾಡಿದೆ. ಒಟ್ಟು 5,400 ಕಿಲೋಮೀಟರ್ ಕ್ರಮಿಸಲಿರುವ ಈ ಯಾತ್ರೆಯ ಭಾಗವಾಗಿ, 145 ಬೃಹತ್ ರ‍್ಯಾಲಿ ಹಾಗೂ 95 ಸಮಾವೇಶಗಳು ನಡೆಯಲಿವೆ
- **ಗುಜರಾತ್:** ಬಿಜೆಪಿ ಮಾಜಿ ಸಂಸದ ಪ್ರಭಾತ್‌ಸಿಂಹ ಚೌಹಾಣ್ ಅವರು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಇವರಿಗೆ ಪಂಚಮಹಲ್ ಕ್ಷೇತ್ರದ ಟಿಕೆಟ್ ನೀಡಲು ನಿರಾಕರಿಸಿತ್ತು

ನುಡಿ–ಕಿಡಿ

ಮೊದಲ ಪರಮವೀರ ಚಕ್ರ ಗೌರವ ಸಿಕ್ಕಿದ್ದು ಹಿಮಾಚಲದ ಸೋಮನಾಥ ಶರ್ಮಾ ಅವರಿಗೆ. ಆದರೆ, ರಾಜ್ಯದ ಜನರು 40 ವರ್ಷಗಳಿಂದ 'ಒಂದು ಶ್ರೇಣಿ, ಒಂದು ಪಿಂಚಣಿ' ಯೋಜನೆ ಜಾರಿಗೆ ಆಗ್ರಹಿಸುತ್ತಿದ್ದರು. ಕಾಂಗ್ರೆಸ್ ಕಿವುಡಾಗಿತ್ತು. ಮೋದಿ ಅಧಿಕಾರಕ್ಕೆ ಬಂದ ಬಳಿಕ ಯೋಜನೆ ಜಾರಿಗೊಳಿಸಿದರು

ಅಮಿತ್ ಶಾ, ಕೇಂದ್ರ ಗೃಹಸಚಿವ

ಚೆನ್ನೈ: ಜಲಾಶಯಗಳ ನೀರಿನ ಮಟ್ಟ ಹೆಚ್ಚಳ



ಚೆನ್ನೈನಲ್ಲಿ ಮಹಿಳೆಯೊಬ್ಬರು ಸಾಕಿದ ನಾಯಿಯನ್ನು ಹೊತ್ತು ಸುರಕ್ಷಿತ ಜಾಗದತ್ತ ಹೊರಟಿದ್ದು ಬುಧವಾರ ಕಂಡುಬಂತು —ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಕಳೆದ ಕೆಲ ದಿನಗಳಿಂದ ರಾಜ್ಯದ ಕೆಲ ಭಾಗಗಳಲ್ಲಿ ಅಬ್ಬರಿಸಿದ್ದ ಮಳೆ, ಬುಧವಾರ ಬಿಡುವು ನೀಡಿತು. ಆದರೆ, ನಗರದ ಕೆಲ ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದ ಕಾರಣ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು. ವಸತಿ ಪ್ರದೇಶಗಳಲ್ಲಿಯೂ ನೀರು ನುಗ್ಗಿತು.

ಚೆನ್ನೈ ನಗರಕ್ಕೆ ನೀರು ಪೂರೈಕೆ ಮಾಡುವ ಪುಳಲ್ ಹಾಗೂ ಚೆಂಬರಂಬಕ್ಕಂ ಜಲಾಶಯಗಳಲ್ಲಿ ನೀರಿನ ಮಟ್ಟದಲ್ಲಿ ದಿಢೀರ್ ಹೆಚ್ಚಳ ಕಂಡುಬಂದ ಕಾರಣ, ಈ ಅಣೆಕಟ್ಟುಗಳಿಂದ ನೀರನ್ನು ಬಿಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರಿ ಮಳೆ ಮುನ್ಸೂಚನೆ ಹಿನ್ನೆಲೆಯಲ್ಲಿ ಕೆಲ ಜಿಲ್ಲೆಗಳಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಚೆನ್ನೈ ಮತ್ತು ತಿರುವಳ್ಳೂರಿನಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಿದ್ದರೆ, ಕಾಂಚೀಪುರಂ, ಚೆಂಗಲ್‌ಪಟ್ಟು, ರಾಣಿಪೇಟ್, ವಿಲ್ಲುಪುರಂ ಮತ್ತು ವೆಲ್ಲೂರು ಜಿಲ್ಲೆಗಳಲ್ಲಿ ಶಾಲೆಗಳಿಗೆ ಮಾತ್ರ ರಜೆ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.


ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಎಳಿಲಗಂನಲ್ಲಿರುವ ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರಕ್ಕೆ ಭೇಟಿ ನೀಡಿ, ಪರಿಹಾರ ಮತ್ತು ರಕ್ಷಣಾ ಕಾರ್ಯ ಕುರಿತು ಮಾಹಿತಿ ಪಡೆದರು.

'ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಲು ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಚೆನ್ನೈ ನಗರ ಶೀಘ್ರವೇ ಪ್ರವಾಹ ಪರಿಸ್ಥಿತಿ ಮುಕ್ತವಾಗಲಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಸಾಮಾಜಿಕ ಮಾಧ್ಯಮ 'ಲೋಕಲ್ ಸರ್ಕಲ್ಸ್' ಸಮೀಕ್ಷೆ

ಶೇ 35ರಷ್ಟು ಮನೆಗಳಿಗೆ ಮಾತ್ರ ಕೊಳಾಯಿ ಮೂಲಕ ನೀರು

ಪ್ರಜಾವಾಣಿ ವಾರ್ತೆ



ಪ್ರಾತಿನಿಧಿಕ ಚಿತ್ರ

ನವದೆಹಲಿ: ದೇಶದ ಶೇ 35ರಷ್ಟು ಮನೆಗಳಿಗೆ ಮಾತ್ರ ಆಯಾ ಸ್ಥಳೀಯ ಸಂಸ್ಥೆಗಳು ಕೊಳಾಯಿ ಮೂಲಕ ಗುಣಮಟ್ಟದ ನೀರು ಪೂರೈಕೆ ಮಾಡುತ್ತಿವೆ ಎಂದು ಸಮೀಕ್ಷೆಯೊಂದು ಹೇಳಿದೆ.

ಉಳಿದ ಶೇ 65ರಷ್ಟು ಮನೆಗಳಲ್ಲಿ, ಪೂರೈಕೆಯಾಗುವ ನೀರನ್ನು ಶುದ್ಧೀಕರಿಸಲು ಆಧುನಿಕ ವಿಧಾನಗಳನ್ನು ಬಳಕೆ ಮಾಡಲಾಗುತ್ತದೆ ಎಂದು 'ಲೋಕಲ್ ಸರ್ಕಲ್ಸ್' ಎಂಬ ಸಾಮಾಜಿಕ ಮಾಧ್ಯಮ ವೇದಿಕೆ ನಡೆಸಿರುವ ಸಮೀಕ್ಷೆಯಿಂದ ಗೊತ್ತಾಗಿದೆ.

ಪುರಸಭೆ, ನಗರಸಭೆ, ಜಲಮಂಡಳಿ ಅಥವಾ ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳು ಪೂರೈಸುವ ನಲ್ಲಿ ನೀರಿನ ಗುಣಮಟ್ಟದ ಬಗ್ಗೆ ಸಾರ್ವಜನಿಕರಿಂದ ಪ್ರತಿಕ್ರಿಯೆ ಸಂಗ್ರಹಿಸಲಾಯಿತು. ಪೂರೈಕೆಯಾಗುತ್ತಿರುವ ನೀರು ಅತ್ಯುತ್ತಮ ಗುಣಮಟ್ಟದ್ದಾಗಿದೆ ಎಂಬುದಾಗಿ ಶೇ 12ರಷ್ಟು ಜನರು ಹೇಳಿದ್ದರೆ, ಶೇ 23ರಷ್ಟು ಜನರ ಉತ್ತಮ, ಶೇ 36ರಷ್ಟು ಮಂದಿ ಸಾಧಾರಣ ಗುಣಮಟ್ಟದ್ದಾಗಿದೆ ಎಂದು ಉತ್ತರಿಸಿದ್ದಾರೆ ಎಂದು ಸಮೀಕ್ಷಾ ವರದಿಯಲ್ಲಿ ವಿವರಿಸಲಾಗಿದೆ.

ಶುದ್ಧ ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ ಸರ್ಕಾರವು ಪ್ರಮಾಣಿತ ಮಾನದಂಡಗಳನ್ನು ರೂಪಿಸಬೇಕು. ಈ ಮಾನದಂಡಗಳನ್ನು ಎಲ್ಲ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಬೇಕು ಹಾಗೂ ಇವುಗಳ ಅನುಷ್ಠಾನಕ್ಕೆ ಕಾಲಮಿತಿ ನಿಗದಿ ಮಾಡಬೇಕು ಎಂದು ಸಮೀಕ್ಷಾ ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ದೇಶದ 311 ಜಿಲ್ಲೆಗಳಲ್ಲಿ ನಡೆದ ಸಮೀಕ್ಷೆಯಲ್ಲಿ 22,000 ಮನೆಗಳಿಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲಾಗಿದೆ.

ನೂರು ಕೆ.ಜಿ. ಕುಲಾಂತರಿ ಸಾಸಿವೆ ಬೀಜಕ್ಕೆ ಬೇಡಿಕೆ



ನವದೆಹಲಿ (ಪಿಟಿಐ): ಕುಲಾಂತರಿ ಹೈಬ್ರಿಡ್ ಸಾಸಿವೆ (ಜಿಎಂ) ಡಿಎಂಎಚ್–11 ಅನ್ನು ಪ್ರಸ್ತುತ ಹಿಂಗಾರು ಋತುವಿನಲ್ಲಿ ಮಾದರಿ ಫಾರ್ಮ್‌ಗಳಲ್ಲಿ ಬೆಳೆಯಲು ಒಂದು ಕ್ವಿಂಟಲ್ ಜಿಎಂ ಸಾಸಿವೆ ಬಿತ್ತನೆ ಬೀಜ ಒದಗಿಸುವಂತೆ ಖಾದ್ಯ ತೈಲಗಳ ಉದ್ಯಮ ಸಂಸ್ಥೆ ಎಸ್‌ಇಎ ಬುಧವಾರ ಕೇಂದ್ರ ಕೃಷಿ ಸಚಿವಾಲಯವನ್ನು ಒತ್ತಾಯಿಸಿದೆ.

ಈ ಸಂಬಂಧ ಎಸ್‌ಇಎ ಅಧ್ಯಕ್ಷ ಅಜಯ್ ಝುಂಝುನ್‌ವಾಲಾ ಅವರು ಕೃಷಿ ಕಾರ್ಯದರ್ಶಿ ಮನೋಜ್ ಅಹುಜಾ ಅವರಿಗೆ ಪತ್ರ ಬರೆದಿದ್ದಾರೆ.

ಸುಮಾರು 200 ಮಂದಿ ಮಾದರಿ ರೈತರಿಂದ ಜಿಎಂ ಸಾಸಿವೆ ಬೆಳೆಸಲು ಎಸ್‌ಇಎ ಬಯಸಿದ್ದು, ಇದಕ್ಕಾಗಿ ಒಂದು ಕ್ವಿಂಟಲ್ ಡಿಎಂಎಚ್–11 ಸಾಸಿವೆ ಬಿತ್ತನೆ ಬೀಜವನ್ನು ಕೃಷಿ ಸಚಿವಾಲಯ ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

ಪ್ರಮುಖವಾಗಿ ಸಾಸಿವೆ ಬೆಳೆಯುವ ರಾಜಸ್ಥಾನ, ಮಧ್ಯಪ್ರದೇಶ, ಪಂಜಾಬ್ ಮತ್ತು ಹರಿಯಾಣದಲ್ಲಿ ಪ್ರಸ್ತುತ ಹಿಂಗಾರಿನಲ್ಲಿ ಸಾಸಿವೆ ಕೃಷಿಯ ಸುಮಾರು ಒಂದು ಸಾವಿರ ಫಾರ್ಮ್‌ಗಳಲ್ಲಿ ಜಿಎಂ ಸಾಸಿವೆ ಬೆಳೆಸುವ ಯೋಜನೆ ಇದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಕುಲಾಂತರಿ ಹೈಬ್ರಿಡ್ ಸಾಸಿವೆ ಬೆಳೆಗೆ ಪರಿಸರ ಅನುಮತಿಯನ್ನು ಜೆನೆಟಿಕ್ ಎಂಜಿನಿಯರಿಂಗ್ ಮೌಲ್ಯಮಾಪನ ಸಮಿತಿಯ (ಜಿಇಎಸಿ) ಶಿಫಾರಸಿನ ಮೇರೆಗೆ ಕೇಂದ್ರ ಸರ್ಕಾರ ಅಕ್ಟೋಬರ್‌ನಲ್ಲಿ ಅನುಮತಿ ನೀಡಿದೆ.

ಸಂಕ್ಷಿಪ್ತ ಸುದ್ದಿ

ಹಣ ಅಕ್ರಮ ವರ್ಗಾವಣೆ: ಸೊರೇನ್‌ಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನ.3ರಂದು ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಗುರುವಾರ ಬೆಳಿಗ್ಗೆ 11 ಗಂಟೆಗೆ ರಾಜಧಾನಿ ರಾಂಚಿಯಲ್ಲಿರುವ ತನ್ನ ಪ್ರಾದೇಶಿಕ ಕಚೇರಿಯಲ್ಲಿ ತನಿಖೆಗೆ ಹಾಜರಾಗುವಂತೆ ಸೊರೇನ್‌ಗೆ ಹೇಳಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಸಂಸ್ಥೆಯು ಮುಖ್ಯಮಂತ್ರಿ ಹೇಳಿಕೆ ದಾಖಲಿಸಿಕೊಳ್ಳಲಿದೆ. ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಈ ಹಿಂದೆ ಅವರ ರಾಜಕೀಯ ಸಹಾಯಕ ಪಂಕಜ್ ಮಿಶ್ರಾ ಮತ್ತು ಇತರೆ ಇಬ್ಬರು ಸ್ಥಳೀಯರಾದ ಬಚು ಯಾದವ್ ಮತ್ತು ಪ್ರೇಮ್ ಪ್ರಕಾಶ್ ಅವರನ್ನು ಬಂಧಿಸಿತ್ತು.

ಪಿಎಸ್‌ಯು ನೌಕರರ ನಿವೃತ್ತಿ ವಯಸ್ಸು ಹೆಚ್ಚಳ ನಿರ್ಧಾರ ಹಿಂದಕ್ಕೆ

ತಿರುವನಂತಪುರ (ಪಿಟಿಐ): ರಾಜ್ಯದ ಸಾರ್ವಜನಿಕ ಉದ್ದಿಮೆಗಳ (ಪಿಎಸ್‌ಯು) ನೌಕರರ ನಿವೃತ್ತಿ ವಯಸ್ಸನ್ನು 60 ವರ್ಷಗಳಿಗೆ ಹೆಚ್ಚಿಸುವ ತನ್ನ ನಿರ್ಧಾರವನ್ನು ಕೇರಳ ಸರ್ಕಾರ ಬುಧವಾರ ಹಿಂಪಡೆದಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸಿ.ಎಂ ಕಚೇರಿ ಹೇಳಿಕೆ ತಿಳಿಸಿದೆ.

ಸಾರ್ವಜನಿಕ ವಲಯದಲ್ಲಿ ವೃತ್ತಿಜೀವನದ ಕನಸು ಕಾಣುತ್ತಿರುವ ರಾಜ್ಯದ ಯುವಕರಿಗೆ ಎಲ್‌ಡಿಎಫ್ ಸರ್ಕಾರದ ನಿರ್ಧಾರ ದ್ರೋಹ ಬಗೆದಂತೆ ಎಂದು ಆರೋಪಿಸಿ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಪ್ರತಿಭಟನೆ ವ್ಯಕ್ತಪಡಿಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

3,024 ಮನೆ–ಪ್ರಧಾನಿ ಹಸ್ತಾಂತರ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ಅಭಿವೃದ್ಧಿಗೆ ಕೈಗೊಂಡಿರುವ ಸರ್ಕಾರದ ಕ್ರಮಗಳನ್ನು ಉಲ್ಲೇಖಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಎಎಪಿ ಸರ್ಕಾರವನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು. ಕೇಂದ್ರದ ಈ ಕ್ರಮಗಳ ಜಾಹೀರಾತಿಗೆ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತು ಎಂದು ಆಶ್ಚರ್ಯಪಟ್ಟರು.

ಆರ್ಥಿಕವಾಗಿ ದುರ್ಬಲ ವರ್ಗದವರಿಗೆ 3,024 ಫ್ಲ್ಯಾಟ್ ಗಳನ್ನು ಉದ್ಘಾಟಿಸಿದ ಮೋದಿ, ಬಡತನವು ಬಡವರು ನಿಭಾಯಿಸಬೇಕಾದ ಸಮಸ್ಯೆ ಎಂದು ಪರಿಗಣಿಸಲಾಗಿತ್ತು. ಆದರೆ, ಅವರು ಈಗ ಸರ್ಕಾರದ ನೀತಿಗಳ ಕೇಂದ್ರ ಬಿಂದುವಾಗಿದ್ದಾರೆ. ಏಕೆಂದರೆ ಅವರದು 'ಗರೀಬೋನ್ ಕಿ ಸರ್ಕಾರ್' (ಬಡಜನರ ಸರ್ಕಾರ) ಎಂದರು.

ಟ್ರ್ಯಾಕ್ಟರ್ ಮೇಲೆ ಹೈಟೆನ್ಷನ್ ತಂತಿ ಬಿದ್ದು ನಾಲ್ವರು ಕೃಷಿ ಕಾರ್ಮಿಕರ ಸಾವು

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ದರ್ಗಾ ಹೊನ್ನೂರು ಗ್ರಾಮದಲ್ಲಿ ಬುಧವಾರ ಟ್ರ್ಯಾಕ್ಟರ್‌ವೊಂದರ ಮೇಲೆ ಹೈಟೆನ್ಷನ್ ತಂತಿ ಬಿದ್ದು, ವಿದ್ಯುತ್ ಪ್ರವಹಿಸಿದ ಪರಿಣಾಮ ನಾಲ್ವರು ಕೃಷಿ ಕಾರ್ಮಿಕರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.


ಗಾಯಗೊಂಡವರನ್ನು ಕರ್ನಾಟಕದ ಬಳ್ಳಾರಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಅನಂತಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಫಕೀರಪ್ಪ ತಿಳಿಸಿದ್ದಾರೆ.

ದಿನದ ಕೆಲಸ ಮುಗಿದ ನಂತರ ಕೃಷಿ ಕಾರ್ಮಿಕರು ಟ್ರ್ಯಾಕ್ಟರ್ ಹತ್ತುತ್ತಿದ್ದರು. ಈ ವೇಳೆ, ವಿದ್ಯುತ್ ತಂತಿ ತುಂಡಾಗಿ, ಟ್ರ್ಯಾಕ್ಟರ್ ಮೇಲೆ ಬಿದ್ದು ಈ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪರಿಹಾರ: 'ಘಟನೆ ಬಗ್ಗೆ ಮುಖ್ಯಮಂತ್ರಿ ವೈ.ಎಸ್. ಜಗನಮೋಹನ್ ರೆಡ್ಡಿ ಅವರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ ₹ 10 ಲಕ್ಷ ಪರಿಹಾರ ಘೋಷಿಸಿದ್ದಾರೆ' ಎಂದು ರಾಯದುರ್ಗ ಶಾಸಕ ಕಾಪು ರಾಮಚಂದ್ರ ರೆಡ್ಡಿ ತಿಳಿಸಿದ್ದಾರೆ.

ಟೂರ್ನಿಯಲ್ಲಿ ವಿರಾಟ್ 3ನೇ ಅರ್ಧಶತಕ; ಲಯಕ್ಕೆ ಮರಳಿದ ರಾಹುಲ್; ಅರ್ಷದೀಪ್ ಮಿಂಚು

ಸೆಮಿಫೈನಲ್ ಸನಿಹ ಭಾರತ



ಕೆ.ಎಲ್.ರಾಹುಲ್ ಆಟದ ವೈಖರಿ– ಎಎಫ್‌ಪಿ ಚಿತ್ರ

• ಆರ್. ಕೌಶಿಕ್

ಮುಖ್ಯಾಂಶಗಳು
- ಐದು ರನ್‌ಗಳಿಂದ ಜಯಿಸಿದ ರೋಹಿತ್ ಶರ್ಮಾ ಬಳಗ
- ಬಾಂಗ್ಲಾದ ಲಿಟನ್ ದಾಸ್ ಹೋರಾಟ ವ್ಯರ್ಥ

ಅಡಿಲೇಡ್: ಕೊನೆಯ ಹಂತದವರೆಗೂ ಎದೆಗುಂದದೆ ತಾಳ್ಮೆಯಿಂದ ಆಡುವ ತಂಡಗಳಿಗೇ ಟಿ20 ಕ್ರಿಕೆಟ್ ಪಂದ್ಯಗಳನ್ನು ಜಯಿಸಲು ಸಾಧ್ಯ ಎಂಬುದು ಬುಧವಾರ ಮತ್ತೊಮ್ಮೆ ನಿಜವಾಯಿತು.

ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 12ರ ಎರಡನೇ ಗುಂಪಿನ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಶದ ಎದುರು ಐದು ರನ್‌ಗಳ ರೋಚಕ ಜಯ (ಡಿಎಲ್‌ಎಸ್ ಪದ್ಧತಿಯಲ್ಲಿ) ಸಾಧಿಸಿತು. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವುದರೊಂದಿಗೆ ಸೆಮಿಫೈನಲ್ ಸನಿಹಕ್ಕೆ ಬಂದು ನಿಂತಿತು.

ಭಾರತ ನೀಡಿದ್ದ 184 ರನ್‌ಗಳ ಗುರಿ ಬೆನ್ನಟ್ಟಿದ್ದ ಬಾಂಗ್ಲಾದ ಬ್ಯಾಟರ್ ಲಿಟನ್ ದಾಸ್ ಅಬ್ಬರಕ್ಕೆ ಭಾರತದ ಅಭಿಮಾನಿಗಳು ಮಂಕಾಗಿದ್ದರು. ಕ್ರೀಡಾಂಗಣದಲ್ಲಿ ಸೇರಿದ್ದ 29,302 ಪ್ರೇಕ್ಷಕರಲ್ಲಿದ್ದ ಬಹುತೇಕರು ಮಂಕಾಗಿದ್ದರು. ಲಯಕ್ಕೆ ಮರಳಿದ ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿಯ ಚೆಂದದ ಅರ್ಧಶತಕಗಳು ಹಾಗೂ ಸೂರ್ಯಕುಮಾರ್ ಅಬ್ಬರದ ಬ್ಯಾಟಿಂಗ್ ವ್ಯರ್ಥವಾಗುವ ಆತಂಕ ಮೂಡಿತ್ತು. ಲಿಟನ್ ದಾಸ್ ಮಿಂಚಿನ (21 ಎಸೆತಗಳಲ್ಲಿ 50) ಅರ್ಧಶತಕದ ಬಲದಿಂದ ಬಾಂಗ್ಲಾ 7 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 66 ರನ್ ಗಳಿಸಿತು.

ಭಾರತದ ವಿಕೆಟ್‌ಕೀಪರ್ ದಿನೇಶ್ ಕಾರ್ತಿಕ್ ಕೈತಪ್ಪಿದ ಕ್ಯಾಚ್‌ನ ಲಾಭ ಪಡೆದ ದಾಸ್ ಗರ್ಜಿಸಿದರು. ಇದೇ ವೇಳೆ ಮಳೆ ಸುರಿಯಿತು. ಆದರೆ ಲೆಕ್ಕಾಚಾರದ ಪ್ರಕಾರ ಬಾಂಗ್ಲಾ ತಂಡವು ನಿಗದಿಗಿಂತ 17 ರನ್‌ಗಳ ಮುನ್ನಡೆಯಲ್ಲಿತ್ತು.

ಪುನಃ ಪಂದ್ಯ ಆರಂಭವಾದಾಗ ಡಕ್ವರ್ಥ್ ಲೂಯಿಸ್ ಪದ್ಧತಿಯನ್ವಯ 16 ಓವರ್‌ಗಳಲ್ಲಿ 151 ರನ್‌ಗಳ ಪರಿಷ್ಕೃತ ಗುರಿ ನೀಡಲಾಯಿತು. ಇದರ ಪ್ರಕಾರ ಬಾಂಗ್ಲಾ ತಂಡವು 54 ಎಸೆತಗಳಲ್ಲಿ 85 ರನ್‌ಗಳನ್ನು ಗಳಿಸಬೇಕಾಗಿತ್ತು. ಮರುಆರಂಭವಾದ ನಂತರದ ಎರಡನೇ ಎಸೆತದಲ್ಲಿಯೇ ಡೀಪ್ ಮಿಡ್‌ವಿಕೆಟ್ ಫೀಲ್ಡರ್ ಕೆ.ಎಲ್. ರಾಹುಲ್ ಮಾಡಿದ ನೇರ ಥ್ರೋಗೆ ಲಿಟನ್ ದಾಸ್ ರನ್‌ಔಟ್ ಆದರು. ಇದರಿಂದ ರೋಹಿತ್ ಪಡೆಯಲ್ಲಿ ಜೀವಚೈತನ್ಯ ಮರುಕಳಿಸಿತು. ಎದುರಾಳಿ ಬಳಗದ ಮೇಲೆ ಒತ್ತಡ ಹಾಕುವಲ್ಲಿ ಬೌಲರ್‌ಗಳು ಸಫಲರಾದರು. ಕೇವಲ 34 ಎಸೆತಗಳ ಅಂತರದಲ್ಲಿ 40 ರನ್ ಸೇರಿಸಿದ ಬಾಂಗ್ಲಾ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೂ ಕೊನೆಯ ಹಂತದಲ್ಲಿ ನೂರುಲ್ ಹಸನ್ ಹಾಗೂ ತಸ್ಕಿನ್ ಅವರ ಹೋರಾಟದಿಂದಾಗಿ ಬಾಂಗ್ಲಾಗೆ ಕೊನೆಯ ಓವರ್‌ನಲ್ಲಿ 20 ರನ್ ಗಳಿಸಿ ಗೆಲ್ಲುವ ಅವಕಾಶ ಇತ್ತು. ಎಡಗೈ ಮಧ್ಯಮವೇಗಿ ಅರ್ಷದೀಪ್ ಸಿಂಗ್ ಕೊನೆಯ ಓವರ್ 'ಅಗ್ನಿಪರೀಕ್ಷೆ'ಯಲ್ಲಿ ಗೆದ್ದರು. ಬಾಂಗ್ಲಾ 16 ಓವರ್‌ಗಳಲ್ಲಿ 6ಕ್ಕೆ 145 ರನ್ ಗಳಿಸಲಷ್ಟೇ ಶಕ್ತವಾಯಿತು.

ರಾಹುಲ್, ವಿರಾಟ್ ಮಿಂಚು: ಟೂರ್ನಿಯಲ್ಲಿ ಸತತ ವೈಫಲ್ಯ ಅನುಭವಿಸಿದ್ದ ಕನ್ನಡಿಗ ರಾಹುಲ್ ಇಲ್ಲಿ ಲಯ ಕಂಡುಕೊಂಡರು. ಆರಂಭದಲ್ಲಿ ಸ್ವಲ್ಪ ತಡಬಡಾಯಿಸಿದರು. ಆದರೆ, ಶೊರಿಫುಲ್ ಇಸ್ಲಾಂ ಎಸೆತವನ್ನು ಸ್ಕೇರ್ ಲೆಗ್ ಮೇಲಿಂದ ಸಿಕ್ಸರ್‌ಗೆ ಎತ್ತುವ ಮೂಲಕ ರಾಹುಲ್ ಆಟಕ್ಕೆ ಕುದುರಿಕೊಂಡರು. ಆದರೆ ನಾಯಕ ರೋಹಿತ್ ಬ್ಯಾಟಿಂಗ್ ವೈಫಲ್ಯ ಮುಂದುವರಿಯಿತು. ರಾಹುಲ್ ಜೊತೆಗೂಡಿದ ಕೊಹ್ಲಿ ಸುಂದರ ಇನಿಂಗ್ಸ್ ಕಟ್ಟಿದರು. ಅಲ್ಲದೇ ತಂಡದ ಉಪನಾಯಕರೂ ಆಗಿರುವ ರಾಹುಲ್ ಅರ್ಭಟಕ್ಕೆ ಹೆಚ್ಚು ಅವಕಾಶವನ್ನು ಕೊಟ್ಟರು. ಅರ್ಧಶತಕ ಗಳಿಸಿದ ನಂತರ ರಾಹುಲ್ ಔಟಾದರು. ಆದರೆ ಕೊಹ್ಲಿ ಅಜೇಯ ಅರ್ಧಶತಕ ಗಳಿಸಿದರಲ್ಲದೇ ತಂಡವು ದೊಡ್ಡ ಮೊತ್ತ ಗಳಿಸಲು ಕಾರಣರಾದರು. ಕೊನೆಯ ಮೂವತ್ತು ಎಸೆತಗಳಲ್ಲಿ 54 ರನ್‌ಗಳು ಭಾರತದ ಖಾತೆ ಸೇರಿದವು. ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಎಂದಿನಂತೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. 16 ಎಸೆತಗಳಲ್ಲಿ 30 ರನ್ ಗಳಿಸಿದರು. ಸೂರ್ಯ ಔಟಾದ ನಂತರ ಇನ್ನೊಂದು ಬದಿಯಲ್ಲಿ ಬ್ಯಾಟರ್‌ಗಳು ಹೆಚ್ಚುಹೊತ್ತು ನಿಲ್ಲಲಿಲ್ಲ.

ಸ್ಕೋರ್ ಕಾರ್ಡ್

ಭಾರತ 6ಕ್ಕೆ 184 (20 ಓವರ್)
ರಾಹುಲ್ ಸಿ ಮುಸ್ತಫಿಜುರ್ ಬಿ ಶಕೀಬ್ 50 (32ಎ, 4X3, 6X4), ರೋಹಿತ್ ಸಿ ಯಾಸಿರ್ ಬಿ ಹಸನ್ 2 (8ಎ), ವಿರಾಟ್ ಔಟಾಗದೆ 64 (44ಎ, 4X8, 6X1), ಸೂರ್ಯಕುಮಾರ್ ಸಿ ಶಕೀಬ್ ಬಿ ಹಸನ್ 30 (16ಎ, 4X4), ಹಾರ್ದಿಕ್ ಸಿ ಯಾಸಿರ್ ಬಿ ಹಸನ್ 5 (6ಎ), ದಿನೇಶ್ ರನೌಟ್ (ಶಕೀಬ್/ಶರೀಫುಲ್) 7 (5ಎ, 4X1), ಅಕ್ಷರ್ ಸಿ ಶಕೀಬ್ ಬಿ ಹಸನ್ 7 (6ಎ, 4X1), ಅಶ್ವಿನ್ ಔಟಾಗದೆ 13 (6ಎ, 4X1, 6X1)
ಇತರೆ 6 (ಲೆಗ್‌ಬೈ 1, ನೋಬಾಲ್ 3, ವೈಡ್ 2)
ವಿಕೆಟ್ ಪತನ: 1-11 (ರೋಹಿತ್ ಶರ್ಮಾ, 3.2), 2-78 (ಕೆ. ಎಲ್. ರಾಹುಲ್, 9.2), 3-116 (ಸೂರ್ಯಕುಮಾರ್ ಯಾದವ್, 13.3), 4-130 (ಹಾರ್ದಿಕ್ ಪಾಂಡ್ಯ, 15.1), 5-150 (ದಿನೇಶ್ ಕಾರ್ತಿಕ್, 16.6), 6-157 (ಅಕ್ಷರ್ ಪಟೇಲ್, 18.1)
ಬೌಲಿಂಗ್: ತಸ್ಕಿನ್ ಅಹಮದ್ 4-0-15-0, ಶರೀಫುಲ್ ಇಸ್ಲಾಂ 4-0-57-0, ಹಸನ್ ಮಹಮೂದ್ 4-0-47-3, ಮುಸ್ತಫಿಜುರ್ ರೆಹಮಾನ್ 4-0-31-0, ಶಕೀಬ್ ಅಲ್ ಹಸನ್ 4-0-33-2

ಬಾಂಗ್ಲಾದೇಶ 6ಕ್ಕೆ 145 (16 ಓವರ್)
ನಜ್ಮುಲ್ ಸಿ ಸೂರ್ಯಕುಮಾರ್ ಬಿ ಶಮಿ 21 (25ಎ, 4X1, 6X1), ಲಿಟನ್ ರನೌಟ್ (ರಾಹುಲ್) 60 (27ಎ, 4X7, 6X3), ಶಕೀಬ್ ಸಿ ದೀಪಕ್ (ಬದಲಿ) ಬಿ ಅರ್ಷದೀಪ್ 13 (12ಎ, 4X2), ಅಫಿಫ್ ಸಿ ಸೂರ್ಯಕುಮಾರ್ ಬಿ ಅರ್ಷದೀಪ್ 3 (5ಎ), ಯಾಸಿರ್ ಸಿ ಅರ್ಷದೀಪ್ ಬಿ ಹಾರ್ದಿಕ್ 1 (3ಎ), ನೂರುಲ್ ಔಟಾಗದೆ 25 (14ಎ, 4X2, 6X1), ಮೊಸದೆಕ್ ಬಿ ಹಾರ್ದಿಕ್ 6 (3ಎ, 6X1), ತಸ್ಕಿನ್ ಔಟಾಗದೆ 12 (7ಎ, 4X1, 6X1)
ಇತರೆ 4 (ಲೆಗ್‌ಬೈ 2, ವೈಡ್ 2)
ವಿಕೆಟ್ ಪತನ: 1-68 (ಲಿಟನ್ ದಾಸ್, 7.2), 2-84 (ನಜ್ಮುಲ್ ಹುಸೇನ್, 9.1), 3-99 (ಅಫಿಫ್ ಹುಸೇನ್, 11.1), 4-100 (ಶಕೀಬ್ ಅಲ್ ಹಸನ್, 11.5), 5-102 (ಯಾಸಿರ್ ಅಲಿ, 12.2), 6-108 (ಮೊಸದೆಕ್ ಹುಸೇನ್, 12.5)
ಬೌಲಿಂಗ್: ಭುವನೇಶ್ವರ್ 3-0-27-0, ಅರ್ಷದೀಪ್ 4-0-38-2, ಮೊಹಮ್ಮದ್ ಶಮಿ 3-0-25-1, ಅಕ್ಷರ್ ಪಟೇಲ್ 1-0-6-0, ರವಿಚಂದ್ರನ್ ಅಶ್ವಿನ್ 2-0-19-0, ಹಾರ್ದಿಕ್ ಪಾಂಡ್ಯ 3-0-28-2

ಫಲಿತಾಂಶ: ಭಾರತ ತಂಡಕ್ಕೆ ಐದು ರನ್‌ಗಳ ಜಯ (ಡಕ್ವರ್ಥ್– ಲೂಯಿಸ್ ನಿಯಮ)


ಅರ್ಷದೀಪ್ ಸಿಂಗ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಪಿ/ಪಿಟಿಐ ಚಿತ್ರ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	4	2	1	1	5	2.233
ಇಂಗ್ಲೆಂಡ್	4	2	1	1	5	0.547
ಆಸ್ಟ್ರೇಲಿಯಾ	4	2	1	1	5	-0.304
ಶ್ರೀಲಂಕಾ	4	2	2	0	4	-0.457
ಐರ್ಲೆಂಡ್	4	1	2	1	3	-1.544
ಅಫ್ಘಾನಿಸ್ತಾನ	4	0	2	2	2	-0.718
ಗುಂಪು 2						
ಭಾರತ	4	3	1	0	6	0.730
ದಕ್ಷಿಣ ಆಫ್ರಿಕಾ	3	2	0	1	5	2.772
ಬಾಂಗ್ಲಾದೇಶ	4	2	2	0	4	-1.276
ಜಿಂಬಾಬ್ವೆ	4	1	2	1	3	-0.313
ಪಾಕಿಸ್ತಾನ	3	1	2	0	2	0.765
ನೆದರ್ಲೆಂಡ್ಸ್	4	1	3	0	2	-1.233


ವಿರಾಟ್ ಕೊಹ್ಲಿ

ರನ್ ಗಳಿಕೆ ಗುಟ್ಟು ಬಿಚ್ಚಿಟ್ಟ ವಿರಾಟ್

ಅಡಿಲೇಡ್ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ ಆಯೋಜನೆಗೊಳ್ಳುವುದು ಖಚಿತವಾಗುತ್ತಿದ್ದಂತೆಯೇ ತಮ್ಮ ಬ್ಯಾಟಿಂಗ್ ಕೌಶಲಗಳನ್ನು ಸುಧಾರಣೆ ಮಾಡಿಕೊಂಡಿದ್ದಾಗಿ ಭಾರತದ ಬ್ಯಾಟರ್ ವಿರಾಟ್ ಕೊಹ್ಲಿ ಹೇಳಿದ್ದಾರೆ.

ದೀರ್ಘ ಸಮಯದವರೆಗೆ ಫಾರ್ಮ್ ಕಳೆದುಕೊಂಡು ಪರದಾಡಿದ್ದ ವಿರಾಟ್ ಈ ಟೂರ್ನಿಯಲ್ಲಿ ರನ್‌ಗಳ ಹೊಳೆ ಹರಿಸುತ್ತಿದ್ದಾರೆ. ಕಳೆದ ನಾಲ್ಕು ಪಂದ್ಯಗಳಲ್ಲಿ ಮೂರು ಅರ್ಧಶತಕ ಗಳಿಸಿದ್ದಾರೆ. ಮೊದಲ ಪಂದ್ಯದಲ್ಲಿ ಪಾಕ್ ಎದುರು ಹಾಗೂ ಬುಧವಾರ ಬಾಂಗ್ಲಾದೇಶ ಎದುರು ಪಂದ್ಯಶ್ರೇಷ್ಠ ಗೌರವ ಗಳಿಸಿದ್ದಾರೆ.

ಬಾಂಗ್ಲಾ ಎದುರಿನ ಪಂದ್ಯದಲ್ಲಿ 16 ರನ್ ಹೊಡೆದ ಸಂದರ್ಭದಲ್ಲಿ ಅವರು ವಿಶ್ವಕಪ್ ಟೂರ್ನಿಗಳಲ್ಲಿ ಅತಿ ಹೆಚ್ಚು ರನ್‌ಗಳನ್ನು ಗಳಿಸಿದ ವಿಶ್ವದಾಖಲೆ ನಿರ್ಮಿಸಿದರು. ಮಹೇಲಾ ಜಯವರ್ಧನೆ (1016ರನ್) ಅವರ ದಾಖಲೆಯನ್ನು ಮೀರಿ ನಿಂತರು.

ಪಂದ್ಯದ ನಂತರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ನಿಖರವಾದ ಕ್ರಿಕೆಟ್ ಹೊಡೆತಗಳ ಮೂಲಕವೇ ಇಲ್ಲಿ ಹೆಚ್ಚು ರನ್‌ಗಳನ್ನು ಗಳಿಸಲು ಸಾಧ್ಯ. ಅದಕ್ಕಾಗಿ ಬಹಳಷ್ಟು ಶ್ರಮಪಟ್ಟು ಅಭ್ಯಾಸ ಮಾಡಿದೆ. ಅದರ ಫಲ ಈಗ ಸಿಗುತ್ತಿದೆ. ಇವತ್ತು ಕೂಡ ಒಂದು ಒಳ್ಳೆಯ ದಿನ' ಎಂದರು.

ಅಡಿಲೇಡ್ ಕ್ರೀಡಾಂಗಣದಲ್ಲಿಯೇ ಕೊಹ್ಲಿ 2012ರಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಶತಕ ಗಳಿಸಿದ್ದರು.


ಐಸಿಸಿ ಟಿ20 ರ‍್ಯಾಂಕಿಂಗ್: ಶಿಖರಕ್ಕೆ ಸೂರ್ಯ

ದುಬೈ (ಪಿಟಿಐ): ಭಾರತದ ಸ್ಫೋಟಕ ಶೈಲಿಯ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟಿ20 ಕ್ರಿಕೆಟ್ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಅವರು ಈ ಹಾದಿಯಲ್ಲಿ ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ಅವರನ್ನು ಹಿಂದಿಕ್ಕಿದ್ದಾರೆ. ಮುಂಬೈನ ಸೂರ್ಯ ಹೋದ ವರ್ಷದ ಮಾರ್ಚ್‌ನಲ್ಲಿ ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಟಿ20 ಐಸಿಸಿ ರ‍್ಯಾಂಕಿಂಗ್ (ಬ್ಯಾಟಿಂಗ್)

ರ‍್ಯಾಂಕ್	ಬ್ಯಾಟರ್	ದೇಶ	ರೇಟಿಂಗ್
1	ಸೂರ್ಯಕುಮಾರ್ ಯಾದವ್	ಭಾರತ	863
2	ಮೊಹಮ್ಮದ್ ರಿಜ್ವಾನ್	ಪಾಕಿಸ್ತಾನ	842
3	ಡೆವೊನ್ ಕಾನ್ವೆ	ನ್ಯೂಜಿಲೆಂಡ್	792
4	ಬಾಬರ್ ಆಜಂ	ಪಾಕಿಸ್ತಾನ	780
5	ಏಡನ್ ಮರ್ಕರಂ	ದ.ಆಫ್ರಿಕಾ	767

*ಐಸಿಸಿ ವೆಬ್‌ಸೈಟ್ ಮಾಹಿತಿ



ಸೂರ್ಯಕುಮಾರ್ ಯಾದವ್

ಟಿ20 ವಿಶ್ವಕಪ್ ಸೂಪರ್ 12 ಹಂತದಲ್ಲಿ ಮೊದಲ ಜಯ

ನೆದರ್ಲೆಂಡ್ಸ್‌ಗೆ ಮಣಿದ ಜಿಂಬಾಬ್ವೆ

ಅಡಿಲೇಡ್ (ಪಿಟಿಐ): ಆರಂಭಿಕ ಆಟಗಾರ ಮ್ಯಾಕ್ಸ್ ಒಡೌಡ್ (52, 47ಎ, 4X8, 6X1) ಅವರ ಸೊಗಸಾದ ಅರ್ಧಶತಕ ಮತ್ತು ಬೌಲರ್‌ಗಳ ಶ್ರಮದಿಂದ ನೆದರ್ಲೆಂಡ್ಸ್ ತಂಡವು ಈ ಬಾರಿಯ ಟಿ20 ವಿಶ್ವಕಪ್ ಸೂಪರ್ 12 ಹಂತದಲ್ಲಿ ಮೊದಲ ಜಯ ಸಂಪಾದಿಸಿತು. ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಐದು ವಿಕೆಟ್‌ಗಳಿಂದ ಜಿಂಬಾಬ್ವೆಯನ್ನು ಪರಾಭವಗೊಳಿಸಿತು.

ನೆದರ್ಲೆಂಡ್ಸ್ ತಂಡವು ಈಗಾಗಲೇ ಟೂರ್ನಿಯ ಸೆಮಿಫೈನಲ್ ಅರ್ಹತೆಯ ಸ್ಪರ್ಧೆಯಿಂದ ಹೊರಬಿದ್ದಿದೆ. ಈ ಜಯದೊಂದಿಗೆ ಆ ತಂಡವು ಜಿಂಬಾಬ್ವೆಯನ್ನೂ ಬಹುತೇಕ ಹೊರದಬ್ಬಿತು.

ಟಾಸ್ ಗೆದ್ದ ಜಿಂಬಾಬ್ವೆ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಪಾಲ್ ವ್ಯಾನ್ ಮೀಕೆರನ್ (29ಕ್ಕೆ 3) ಅವರನ್ನೊಳಗೊಂಡ ನೆದರ್ಲೆಂಡ್ಸ್ ಬೌಲಿಂಗ್ ಪಡೆಯು ಕ್ರೇಗ್ ಇರ್ವಿನ್ ಬಳಗವನ್ನು 19.2 ಓವರ್‌ಗಳಲ್ಲಿ 117 ರನ್‌ಗಳಿಗೆ ಆಲೌಟ್ ಮಾಡಿತು.

ಗುರಿ ಬೆನ್ನತ್ತಿದ್ದ ನೆದರ್ಲೆಂಡ್ಸ್ ಇನ್ನೂ ಎರಡು ಓವರ್‌ಗಳು ಬಾಕಿ ಇರುವಂತೆಯೇ ಐದು ವಿಕೆಟ್ ಕಳೆದುಕೊಂಡು 120 ರನ್ ಗಳಿಸಿತು.


ಒಡೌಡ್ ಬ್ಯಾಟಿಂಗ್– ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ 19.2 ಓವರ್‌ಗಳಲ್ಲಿ 117 (ಸೀನ್ ವಿಲಿಯಮ್ಸ್ 28, ಸಿಕಂದರ್ ರಾಜಾ 40; ಫ್ರೆಡ್ ಕ್ಲಾಸೆನ್ 17ಕ್ಕೆ 1, ಪಾಲ್ ವ್ಯಾನ್ ಮೀಕೆರನ್ 29ಕ್ಕೆ 3, ಬ್ರೆಂಡನ್ ಗ್ಲೋವರ್ 29ಕ್ಕೆ 2, ಲೋಗನ್ ವ್ಯಾನ್ ಬ್ರೀಕ್ 17ಕ್ಕೆ 2, ಬ್ಯಾಸ್ ಡಿ ಲೀಡ್ 14ಕ್ಕೆ 2). ನೆದರ್ಲೆಂಡ್ಸ್: 18 ಓವರ್‌ಗಳಲ್ಲಿ 5 ವಿಕೆಟ್‌ಗೆ 120 (ಮ್ಯಾಕ್ಸ್ ಒಡೌಡ್ 52, ಟಾಮ್ ಕೂಪರ್ 32, ಬ್ಯಾಸ್ ಡಿ ಲೀಡ್ 12; ರಿಚರ್ಡ್ ಗರವಾ 18ಕ್ಕೆ 2, ಬ್ಲೆಸಿಂಗ್ ಮುಜರಬಾನಿ 23ಕ್ಕೆ 2, ಲ್ಯೂಕ್ ಜಾಂಗ್ವೆ 25ಕ್ಕೆ 1). ಫಲಿತಾಂಶ: ನೆದರ್ಲೆಂಡ್ಸ್ ತಂಡಕ್ಕೆ 5 ವಿಕೆಟ್‌ಗಳ ಜಯ

ಇಂದಿನ ಪಂದ್ಯ
ಪಾಕಿಸ್ತಾನ– ದಕ್ಷಿಣ ಆಫ್ರಿಕಾ
ಸ್ಥಳ: ಎಸ್‌ಸಿಜಿ, ಸಿಡ್ನಿ
ಪಂದ್ಯ ಆರಂಭ: ಮಧ್ಯಾಹ್ನ 1.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್ ಆ್ಯಪ್

13ರಿಂದ ವಾಟರ್‌ಪೋಲೊ ಸ್ಪರ್ಧೆಗಳು

ಬೆಂಗಳೂರು: ವಸಂತವಿಹಾರ ವಾಟರ್‌ಪೋಲೊ ಕ್ಲಬ್, ಬಸವನಗುಡಿ ಈಜು ಕೇಂದ್ರದ ಸಹಯೋಗದಲ್ಲಿ ನವೆಂಬರ್ 13, 20 ಮತ್ತು 27ರಂದು ಇಲ್ಲಿ ವಾಟರ್‌ಪೋಲೊ ಸ್ಪರ್ಧೆಗಳು ನಡೆಯಲಿವೆ. ನಟ ಪುನೀತ್ ರಾಜ್‌ಕುಮಾರ್ ಅವರ ನೆನಪಿಗಾಗಿ ಸ್ಪರ್ಧೆಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗಾಗಿ ದೊಡ್ಡಯ್ಯ (ಮೊಬೈಲ್ ಸಂಖ್ಯೆ 9448674694) ಮತ್ತು ಚಂದ್ರ ಶೇಖರ್ (9845023546) ಅಥವಾ vasanthaviharawaterpoloclub@gmail.comಅನ್ನು ನ.10ರೊಳಗಾಗಿ ಸಂಪರ್ಕಿಸಬಹುದು ಎಂದು ವಸಂತವಿಹಾರ ವಾಟರ್‌ಪೋಲೊ ಕ್ಲಬ್ ಸಂಸ್ಥಾಪಕ ಕಾರ್ಯದರ್ಶಿ ಚಿ. ಉಮಾಶಂಕರ್ ತಿಳಿಸಿದ್ದಾರೆ.

ಮುಂಬಾಗೆ ರೋಚಕ ಜಯ

ಪ್ರೊ ಕಬಡ್ಡಿ ಲೀಗ್ ಟೂರ್ನಿ: ಆಶಿಶ್ ಭರ್ಜರಿ ರೇಡಿಂಗ್; ಪ್ರಣಯ್ ಮಿಂಚು

ಪುಣೆ: ಆಶಿಶ್ ಅವರ ಭರ್ಜರಿ ರೇಡಿಂಗ್ ಬಲದಿಂದ ಯು ಮುಂಬಾ ತಂಡವು ಪ್ರೊ ಕಬಡ್ಡಿ ಲೀಗ್ ಕಬಡ್ಡಿ ಟೂರ್ನಿಯಲ್ಲಿ ರೋಚಕ ಜಯ ಗಳಿಸಿತು.

ಇಲ್ಲಿನ ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ 40–37 ಪಾಯಿಂಟ್‌ಗಳಿಂದ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು.

ವಿಜೇತ ತಂಡಕ್ಕಾಗಿ ಆಶಿಶ್ 12 ಪಾಯಿಂಟ್ಸ್ ಕಲೆಹಾಕಿದರೆ, ಬದಲಿ ಆಟಗಾರನಾಗಿ ಬಂದ ಪ್ರಣಯ್ ರಾಣೆ ಆರು ಪಾಯಿಂಟ್ಸ್ ಗಳಿಸಿದರು. ನಾಯಕ ಸುರೇಂದರ್ ಸಿಂಗ್ (4), ಹೈದರಾಲಿ (4) ಮತ್ತು ಮೋಹಿತ್ (4) ಕೂಡ ಕಾಣಿಕೆ ನೀಡಿದರು.

ತೆಲುಗು ಟೈಟನ್ಸ್ ಪರ ಸಿದ್ಧಾರ್ಥ್ ದೇಸಾಯಿ ಅವರು ಗಳಿಸಿದ 18 ಪಾಯಿಂಟ್ಸ್ ವ್ಯರ್ಥವಾದವು.

ಪಂದ್ಯದ ಆರಂಭದಿಂದಲೇ ಉಭಯ ತಂಡಗಳ ನಡುವೆ ಭಾರಿ ಜಿದ್ದಾಜಿದ್ದಿ ಏರ್ಪಟ್ಟಿತ್ತು. ಮೊದಲಾರ್ಧ ಮುಗಿದಾಗ ಯು ಮುಂಬಾ 18 ಪಾಯಿಂಟ್ಸ್ ಮತ್ತು ಟೈಟನ್ಸ್ 14 ಪಾಯಿಂಟ್ಸ್ ಗಳಿಸಿದ್ದವು. ಆದರೆ ದ್ವಿತೀಯಾರ್ಧದಲ್ಲಿ ಟೈಟನ್ಸ್ ಮರುಹೋರಾಟ ನಡೆಸಿತು. ಈ ಅವಧಿಯಲ್ಲಿ ತಂಡ 23 ಪಾಯಿಂಟ್ಸ್ ಗಳಿಸಿದರೂ ಗೆಲುವು ಸಾಧ್ಯವಾಗಲಿಲ್ಲ. ದ್ವಿತೀಯಾರ್ಧದಲ್ಲಿ ಮುಂಬಾ 22 ಪಾಯಿಂಟ್ಸ್ ಗಳಿಸಿತು.

ಬೆಂಗಾಲ್ ವಾರಿಯರ್ಸ್ ಮತ್ತು ತಮಿಳ್ ತಲೈವಾಸ್ ನಡುವಣ ದಿನದ ಇನ್ನೊಂದು ಪಂದ್ಯವು 41–41ರಿಂದ ಟೈ ಆಯಿತು.ಟೂರ್ನಿಗೆ ಗುರುವಾರ ವಿರಾಮದ ದಿನವಾಗಿದೆ.

ಶುಕ್ರವಾರದ ಪಂದ್ಯಗಳು
ಪಟ್ನಾ ಪೈರೇಟ್ಸ್– ಯು ಮುಂಬಾ (ಆರಂಭ: ರಾತ್ರಿ 7.30)
ದಬಾಂಗ್ ಡೆಲ್ಲಿ– ಜೈಪುರ ಪಿಂಕ್ ಪ್ಯಾಂಥರ್ಸ್ (ಆರಂಭ: ರಾತ್ರಿ 8.30)
ಯುಪಿ ಯೋಧಾ– ಪುಣೇರಿ ಪಲ್ಟನ್ (ಆರಂಭ: ರಾತ್ರಿ 9.30)


ಯು ಮುಂಬಾ ಮತ್ತು ತೆಲುಗು ಟೈಟನ್ಸ್ ಆಟಗಾರರ ಪೈಪೋಟಿ

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಬೆಂಗಳೂರು	10	6	3	1	35
ಪುಣೇರಿ	9	5	2	2	32
ಮುಂಬಾ	9	6	3	0	31
ಡೆಲ್ಲಿ	10	5	5	0	29
ಜೈಪುರ	9	5	4	0	27
ಹರಿಯಾಣ	9	4	4	1	26


ಯಶಸ್ವಿನಿ ಘೋರ್ಪಡೆ

ಟಿಟಿ: ಯಶಸ್ವಿನಿಗೆ ಕಂಚು

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಇಟಲಿಯ ಲಿಗ್ನಾನೊದಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಯಶಸ್ವಿನಿ ಅವರು ಟೂರ್ನಿಯ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ 11-6, 6-11, 8-11, 11-9, 5-11ರಿಂದ ಹಾಂಗ್‌ಕಾಂಗ್‌ನ ಎನ್‌ಜಿ ವಿಂಗ್ ಎದುರು ಸೋಲು ಅನುಭವಿಸಿದರು. ಇದಕ್ಕೂ ಮೊದಲು ಯಶಸ್ವಿನಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 11-8, 11-7, 11-7ರಿಂದ ಪ್ಯೂರ್ಟೊರಿಕೊದ ಎಡ್ಮೈರ್ ಅವರನ್ನು ಸೋಲಿಸಿದ್ದರು. ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ 11-6 ,11-4, 11-6ರಿಂದ ಸ್ಲೊವಾಕಿಯಾದ ಡೊಮಿನಿಕಾ ಅವರನ್ನು ಮಣಿಸಿದ್ದರು.

ಚಾಂಪಿಯನ್ಸ್ ಲೀಗ್: ಬಾರ್ಸಿಲೋನಾಗೆ ಜಯ

ಪ್ಲಜೆನ್, ಜೆಕ್ ಗಣರಾಜ್ಯ (ಎಎಫ್‌ಪಿ): ಬಾರ್ಸಿಲೋನಾ ತಂಡವು ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಜಯ ಗಳಿಸಿತು.

ಮಂಗಳವಾರ ರಾತ್ರಿ ಇಲ್ಲಿ ನಡೆದ ಪಂದ್ಯದಲ್ಲಿ ಬಾರ್ಸಿಲೋನಾ 4–2ರಿಂದ ವಿಕ್ಟೋರಿಯಾ ಪ್ಲಜೆನ್ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಫೆರಾನ್ ಟೊರೆಸ್ (44, 54ನೇ ನಿಮಿಷ), ಮಾರ್ಕೋಸ್ ಅಲೊನ್ಸೊ (6ನೇ ನಿ.) ಮತ್ತು ಪ್ಯಾಬ್ಲೊ ಟೊರೆ (75ನೇ ನಿ.) ಗೋಲು ಹೊಡೆದರು.

ವಿಕ್ಟೋರಿಯಾ ಪ್ಲಜೆನ್ ಪರ ಥಾಮಸ್ ಚೊರಿ (51, 63ನೇ ನಿ.) ಕಾಲ್ಚಳಕ ತೋರಿದರು.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್‌ಗೆ ಸಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಎಂಪಿ ತಂಡವು ಇಲ್ಲಿ ನಡೆಯುತ್ತಿರುವ ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಪುರುಷರ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಶ್ರೀ ಕಂಠೀರವ ಕ್ರೀಡಾಂಗಣದ ಒಳಾಂಗಣದಲ್ಲಿ ನಡೆದ ಟೂರ್ನಿಯ ಪ್ರೀ ಕ್ವಾರ್ಟರ್‌ಫೈನಲ್‌ನಲ್ಲಿ ಸಿಎಂಪಿ 69–39ರಿಂದ ವಿವೇಕ್ಸ್ ಎಸ್‌ಸಿ ವಿರುದ್ಧ ಜಯಿಸಿತು.

ಪುರುಷರ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ; ಬ್ಯಾಂಕ್ ಆಫ್ ಬರೋಡಾ ತಂಡವು 97–52ರಿಂದ ರಾಜಕುಮಾರ್ ಬಿಸಿ ವಿರುದ್ಧ ಜಯಿಸಿತು. ಬ್ಯಾಂಕ್ ತಂಡದ ಅನಿಲ್ (17), ಅರವಿಂದ್ (14) ಮಿಂಚಿದರು. ರಾಜಕುಮಾರ್ ಬಳಗದ ವೆಂಕಟ್ (22) ಹಾಗೂ ಆಶುತೋಷ್ (11) ಉತ್ತಮವಾಗಿ ಆಡಿದರು. ಎಸ್ ಬ್ಲ್ಯೂಸ್ ತಂಡವು 58–35ರಿಂದ ಡಿಆರ್‌ಡಿಒ ವಿರುದ್ಧ; ಎಂಎನ್‌ಕೆ ರಾವ್ ಪಾರ್ಕ್ ಬಿಸಿ 72–60ರಿಂದ ಜಿಎಸ್‌ಟಿ-ಕಸ್ಟಮ್ಸ್ ವಿರುದ್ಧ; ಪಿಪಿಸಿ 61–47ರಿಂದ ಅಪ್ಪಯ್ಯ ಬಿಸಿ ವಿರುದ್ಧ; ಯಂಗ್ ಒರಿಯನ್ಸ್ ಎಸ್‌ಸಿ 82–55ರಿಂದ ಬಿ.ಸಿ. ಬಿ.ಸಿ ವಿರುದ್ಧ, ಎಎಸ್‌ಸಿ 84–51ರಿಂದ ಬೀಗಲ್ಸ್ ಬಿಸಿ ಎದುರು ಗೆದ್ದವು.

ಮಹಿಳೆಯರ ವಿಭಾಗದಲ್ಲಿ ಎಸ್‌ಡಬ್ಲ್ಯು ರೈಲ್ವೆ 70–35ರಿಂದ ಡಿವೈಇಎಸ್ ಮಂಡ್ಯ ಎದುರು, ಕೆ.ಎಸ್. ಹೆಗ್ಡೆ ನಿಟ್ಟೆ 56–26ರಿಂದ ರಾಜ್‌ಮಹಲ್ ಬಿ.ಸಿ. ಎದುರು, ಮೌಂಟ್ಸ್ ಕ್ಲಬ್ 70–39ರಿಂದ ಭಾರತ್ ಎಸ್‌ಯು ವಿರುದ್ಧ, ಡಿವೈಇಎಸ್ ಮೈಸೂರು 56–52ರಿಂದ ಬೀಗಲ್ಸ್ ಬಿ.ಸಿ. ವಿರುದ್ಧ ಗೆದ್ದವು.


ಸಿಎಂಪಿ ತಂಡದ ಅಲ್ವಿನ್ ಸಿಸಿಲ್ ಆಟದ ವೈಖರಿ –ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಚೆಸ್: ಗುಹನ್, ಕೃಪಾಗೆ ಪ್ರಶಸ್ತಿ

ಬೆಂಗಳೂರು: ಗುಹನ್ ಎನ್. ಎಚ್. ಮತ್ತು ಕೃಪಾ ಎಸ್. ಉಕ್ಕಲಿ ಅವರ ಚಾಂಪಿಯನ್ಸ್ ಅಕಾಡೆಮಿ ಆಯೋಜಿಸಿದ್ದ ಚೆಸ್ ಟೂರ್ನಿಯ ಕ್ರಮವಾಗಿ 16 ಮತ್ತು 10 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

16 ವರ್ಷದೊಳಗಿನವರ ವಿಭಾಗದಲ್ಲಿ ಗುಹನ್ ಪೂರ್ಣ ಐದು ಪಾಯಿಂಟ್ಸ್ ಕಲೆಹಾಕಿದರು. ಭವಿಷ್ ಮತ್ತು ತರುಣ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. 10 ವರ್ಷದೊಳಗಿನವರ ವಿಭಾಗದಲ್ಲಿ ಕೃಪಾ ಕೂಡ ಐದು ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಪಡೆದರು.

ಆರವ್ ದಾಸ್ ಮತ್ತು ತರುಣ್ ಬಾಲಸುಬ್ರಮಣ್ಯನ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಸಂಕ್ಷಿಪ್ತ ಸುದ್ದಿ

ಎಂಟರ ಘಟ್ಟಕ್ಕೆ ಪ್ರಮೋದ್ ಭಗತ್


ಭಗತ್

ಟೋಕಿಯೊ (ಪಿಟಿಐ): ಭಾರತದ ಪ್ರಮೋದ್ ಭಗತ್ ಹಾಗೂ ಮಾನಸಿ ಜೋಶಿ ಅವರ ಜೋಡಿಯು ಇಲ್ಲಿ ಬುಧವಾರ ಆರಂಭವಾದ ಬಿಡಬ್ಲ್ಯುಎಫ್ ಪ್ಯಾರಾ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗಗಳ ಎಂಟರ ಘಟ್ಟ ಪ್ರವೇಶಿಸಿದರು.

ಮಂಗಳವಾರ ನಡೆದ ಪುರುಷರ ಎಸ್‌ಎಲ್‌3 ವಿಭಾಗದಲ್ಲಿ ಭಗತ್ 21–5, 21–3ರಿಂದ ಇಂಗ್ಲೆಂಡ್‌ನ ವಿಲಿಯಂ ಸ್ಮಿತ್ ಅವರನ್ನು ಮಣಿಸಿದರು. ಮಹಿಳೆಯರ ವಿಭಾಗದಲ್ಲಿ ಮಾನಸಿ ಜೋಶಿ 21–6, 21–4ರಿಂದ ಫ್ರಾನ್ಸ್‌ನ ಕ್ಯಾಥರೀನ್ ನಾಡಿನ್ ವಿರುದ್ಧ ಜಯಿಸಿದರು. ಪುರುಷರ ಡಬಲ್ಸ್ (ಎಸ್‌ಎಲ್‌3–ಎಸ್‌ಎಲ್‌4) ವಿಭಾಗದಲ್ಲಿಯೂ ಭಗತ್ ಅವರು ಮನೋಜ್ ಸರ್ಕಾರ್ ಅವರೊಂದಿಗೆ ಜಯಿಸಿದರು.

ಮರೈನ್ ಕೃತಿಗೆ ಕೋರ್ಟ್ ತಡೆ

ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದ ಮಾಜಿ ಕೋಚ್ ಶೋರ್ಡ್ ಮರೈನ್ ಅವರು ಬರೆದಿರುವ ಪುಸ್ತಕದ ಬಿಡುಗಡೆಗೆ ದೆಹಲಿ ಹೈಕೋರ್ಟ್ ತಡೆಯೊಡ್ಡಿದೆ.

ಈ ಪುಸ್ತಕದಲ್ಲಿ ಅವರು ಹಾಕಿ ತಂಡದ ಆಟಗಾರರ ವೈಯಕ್ತಿಕ ವಿಷಯಗಳನ್ನು ಉಲ್ಲೇಖಿಸಿದ್ದಾರೆನ್ನಲಾಗಿದೆ. ಅದಕ್ಕಾಗಿ ಪುಸ್ತಕವನ್ನು ಪ್ರಕಟಿಸದಂತೆ ತಡೆಹಿಡಿಯಬೇಕು ಎಂದು ಹಾಕಿ ಇಂಡಿಯಾ ಕೋರ್ಟ್ ಮೆಟ್ಟಿಲೇರಿತ್ತು. ಈ ಪ್ರಕರಣದ ವಿಚಾರಣೆ ನಡೆಸಿದ ಕೋರ್ಟ್ ಮಂಗಳವಾರ ಮಧ್ಯಂತರ ಆದೇಶ ನೀಡಿದೆ.

'ಮರೈನ್ ಅವರು ಹಾಕಿ ಇಂಡಿಯಾದ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆಂಬುದು ಮೇಲ್ನೋಟಕ್ಕೆ ತಿಳಿದುಬಂದಿದೆ. ಸದ್ಯ ಇದನ್ನು ತಡೆಹಿಡಿಯಬೇಕು' ಎಂದು ನ್ಯಾಯಮೂರ್ತಿ ಅಮಿತ್ ಬನ್ಸಲ್ ಅವರ ಪೀಠವು ಹೇಳಿದೆ.

'ವಿಲ್ ಪವರ್: ದ ಇನ್‌ಸೈಡ್ ಸ್ಟೋರಿ ಆಫ್ ದ ಇನ್‌ಕ್ರೆಡಿಬಲ್ ಟರ್ನ್ ಅರೌಂಡ್ ಇನ್ ಇಂಡಿಯನ್ ವುಮೆನ್ಸ್ ಹಾಕಿ' ಕೃತಿಯನ್ನು ಅವರು ಬರೆದಿದ್ದಾರೆ.

25ರಿಂದ ಕೇರಳದಲ್ಲಿ ಏಷ್ಯಾಕಪ್ ಸೈಕ್ಲಿಂಗ್

ತಿರುವನಂತಪುರಂ (ಪಿಟಿಐ): ಏಷ್ಯಾಕಪ್ ಟ್ರ್ಯಾಕ್ ಸೈಕ್ಲಿಂಗ್ ಕೇರಳದಲ್ಲಿ ನವೆಂಬರ್ 25ರಿಂದ 28ರವರೆಗೆ ನಡೆಯಲಿದೆ.

ಕೂಟದಲ್ಲಿ ಏಷ್ಯಾದ 25 ದೇಶಗಳ ಸುಮಾರು 200 ಸೈಕ್ಲಿಸ್ಟ್‌ಗಳು ಭಾಗವಹಿಸುವ ನಿರೀಕ್ಷೆಯಿದೆ. 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಏಷ್ಯಾ ಸೈಕ್ಲಿಸ್ಟ್‌ಗಳ ಅರ್ಹತೆಯೂ ಈ ಕೂಟದಲ್ಲಿ ನಡೆಯಲಿದೆ.

ರಿಲಯನ್ಸ್: ಹಾರ್ದಿಕ್ ರಾಯಭಾರಿ

ಬೆಂಗಳೂರು: ರಿಲಯನ್ಸ್ ರಿಟೇಲ್‌ನ ಎಕ್ಸಲರೇಟ್ ಪ್ರಚಾರ ರಾಯಭಾರಿಯಾಗಿ ಭಾರತ ಕ್ರಿಕೆಟ್ ತಂಡದ ಆಟಗಾರ ಹಾರ್ದಿಕ್ ಪಾಂಡ್ಯ ಅವರು ಮಂಗಳವಾರ ಸಹಿ ಹಾಕಿದ್ದಾರೆ. ಇದು ಕ್ರೀಡಾಪಟುಗಳಿಗೆ ಕ್ರೀಡಾ ಸರಕುಗಳು ಮತ್ತು ಪಾದರಕ್ಷೆಗಳನ್ನು ಒದಗಿಸುವ ಕಂಪನಿಯಾಗಿದೆ.

ಪಂಜಾಬ್ ಕಿಂಗ್ಸ್‌ಗೆ ಶಿಖರ್ ಕೋಚ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಫ್ರಾಂಚೈಸ್ ಪಂಜಾಬ್ ಕಿಂಗ್ಸ್‌ಗೆ ಶಿಖರ್ ಧವನ್ ನಾಯಕರಾಗಿ ನೇಮಕಗೊಂಡಿದ್ದಾರೆ.

ಕನ್ನಡಿಗ ಮಯಂಕ್ ಅಗರವಾಲ್ ಬದಲಿಗೆ ಶಿಖರ್ 2023ರ ಆವೃತ್ತಿಗೆ ತಂಡವನ್ನು ಮುನ್ನಡೆಸಲಿದ್ದಾರೆ. ಬುಧವಾರ ನಡೆದ ಫ್ರಾಂಚೈಸ್‌ನ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಬ್ಯಾಡ್ಮಿಂಟನ್: ಸಾತ್ವಿಕ್ ಚಿರಾಗ್‌ಗೆ ಜಯ

ಸಾರ್‌ಬ್ರೂಕನ್, ಜರ್ಮನಿ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಇಲ್ಲಿ ನಡೆಯುತ್ತಿರುವ ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತು ತಲುಪಿದರು.ಬುಧವಾರ ಮೊದಲ ಸುತ್ತಿನ ಹಣಾಹಣಿಯಲ್ಲಿ ಭಾರತದ ಆಟಗಾರರು 19-21, 21-19, 21-16ರಿಂದ ಚೀನಾ ತೈಪೆಯ ಲೀ ಯಾಂಗ್ ಮತ್ತು ಲೂ ಚೆನ್ ಎದುರು ಗೆದ್ದರು. ಮಹಿಳಾ ಸಿಂಗಲ್ಸ್‌ನಲ್ಲಿ ಸೈನಾ ನೆಹ್ವಾಲ್ 15–21, 8–21ರಿಂದ ಥಾಯ್ಲೆಂಡ್‌ನ ಬುಸನನ್ ಒಂಗ್‌ಬಮ್ರುಂಗ್‌ಪನ್ ವಿರುದ್ಧ ಸೋತರು.